24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ


# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 45 | ನವದೆಹಲಿ | ಬೆಲೆ ₹10 | ಆಗಸ್ಟ್ 10 2026 ಸೋಮವಾರ

## ಬಿಡದಿ ಟೌನ್ ಶಿಪ್ ರೂವಾರಿಗಳಾದ ಬಿಜೆಪಿ ಮತ್ತು ಜೆಡಿಎಸ್ ನವರ

# ಪ್ರಾಯಶ್ಚಿತ್ತ ಯಾತ್ರೆಗೆ ಹಾರ್ದಿಕ ಸುಸ್ವಾಗತ



ಸಾರ್ವಜನಿಕರ ಗಮನಕ್ಕೆ

## ಹೆಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಆರ್. ಅಶೋಕ್ ಅವರಿಗೆ ಬಹಿರಂಗ ಪತ್ರ

## ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಸತ್ಯವೇನು? ಯಾರು ಏನು ನಿರ್ಧಾರ ಕೈಗೊಂಡರು?

## ಸಾರ್ವಜನಿಕರು ತಿಳಿಯಬೇಕಾದ ವಿಚಾರಗಳು

### 1 ಮುಖ್ಯಮಂತ್ರಿ, ಹೆಚ್ ಡಿ ಕುಮಾರಸ್ವಾಮಿ ಹಾಗೂ ಉಪ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ರವರ 2006ರ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಕೈಗೊಂಡ ತೀರ್ಮಾನ:

**ಐದು BMRDA ಟೌನ್‌ಶಿಪ್‌ಗಳಿಗೆ ನಿರ್ಧಾರ 15-06-2006**
ಬೆಂಗಳೂರು ಸುತ್ತಮುತ್ತ ಐದು BMRDA ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸಲು ನಿರ್ಧಾರ ಕೈಗೊಳ್ಳಲಾಯಿತು.

**ಐದು ಟೌನ್‌ಶಿಪ್‌ಗಳಿಗೆ ಅಧಿಸೂಚನೆ 18-10-2006**
ಆದೇಶ ಸಂಖ್ಯೆ: UDD 197 BMRDA 2006 | ಸಚಿವ ಸಂಪುಟ: C-293/2006

**ಕೆಂಪು ವಲಯ ಘೋಷಣೆ | 29-11-2006**
ಕೆಂಪು ವಲಯದ ವ್ಯಾಪ್ತಿಯಲ್ಲಿ BMRDAಯ ಅನುಮತಿ ಪಡೆಯದೆ ಯಾವುದೇ ಯೋಜನೆ ಕೈಗೊಳ್ಳದಂತೆ ನಿರ್ಬಂಧ ವಿಧಿಸಲಾಯಿತು.

**ಜಾಗತಿಕ ಟೆಂಡರ್**
BMRDA ವತಿಯಿಂದ PPP ಮಾದರಿಯಲ್ಲಿ ಉಪನಗರ ಅಭಿವೃದ್ಧಿಪಡಿಸಲು ಜಾಗತಿಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಯಿತು.

**DLF ಸಂಸ್ಥೆಗೆ ಟೌನ್ ಶಿಪ್ ಯೋಜನೆ ಒಪ್ಪಂದ | 26-10-2007**
DLF ಸಂಸ್ಥೆಗೆ ಬಿಡದಿ ಟೌನ್‌ಶಿಪ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಆದೇಶ ಹೊರಡಿಸಿತು.
ಆದೇಶ ಸಂಖ್ಯೆ: UDD 224/BMR/2007

### 2 ಬಿ.ಎಸ್. ಯಡಿಯೂರಪ್ಪ ಅವರ ಅವಧಿಯಲ್ಲಿ ಕೈಗೊಂಡ ತೀರ್ಮಾನ ತೀರ್ಮಾನ:

**DLFಗೆ ₹400 ಕೋಟಿ ಠೇವಣಿ ಹಣ ವಾಪಸ್ 29-04-2009**
DLF ಸಂಸ್ಥೆಯು ಟೌನ್‌ಶಿಪ್ ಯೋಜನೆಯನ್ನು ಮುಂದುವರಿಸಲು ನಿರಾಕರಿಸಿದ ನಂತರ, ಸರ್ಕಾರದಲ್ಲಿ ಠೇವಣಿ ಇಟ್ಟಿದ್ದ ₹400 ಕೋಟಿ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಲಾಯಿತು.

**ಎರಡನೇ ಬಾರಿ ಮರು ಟೆಂಡರ್ 01-06-2010**
ಟೌನ್‌ಶಿಪ್ ಯೋಜನೆಗಾಗಿ ಮರು ಟೆಂಡರ್ ಕರೆಯಲಾಯಿತು.
ಆದೇಶ ಸಂಖ್ಯೆ: UDD 128 BMR 2009

### 3 2011- ಸದಾನಂದ ಗೌಡರ ಅವಧಿಯಲ್ಲಿ ಕೈಗೊಂಡ ತೀರ್ಮಾನ:

ಐದು BMRDA ಟೌನ್‌ಶಿಪ್ ಯೋಜನೆಗಳ ಪೈಕಿ ಬಿಡದಿ ಹೊರತುಪಡಿಸಿ ಉಳಿದ ನಾಲ್ಕು ಟೌನ್‌ಶಿಪ್ ಯೋಜನೆಗಳನ್ನು ಕೆಂಪು ವಲಯದಿಂದ ಕೈಬಿಡುವ ನಿರ್ಧಾರ ಕೈಗೊಳ್ಳಲಾಯಿತು.
ಉಳಿದ ನಾಲ್ಕು ಟೌನ್‌ಶಿಪ್‌ಗಳಿಗೆ ಅನ್ವಯಿಸಿದ ನಿರ್ಧಾರ ಬಿಡದಿಗೆ ಏಕೆ ಅನ್ವಯಿಸಲಿಲ್ಲ?

### 3 2018 - ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ

ಮತ್ತೆ 2ನೇ ಬಾರಿಗೆ ಮುಖ್ಯಮಂತ್ರಿಯಾದ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರನ್ನು ಬಿಡದಿ ಟೌನ್‌ಶಿಪ್ ವ್ಯಾಪ್ತಿಯ ರೈತರು ಭೇಟಿ ಮಾಡಿ ಉಳಿದ ನಾಲ್ಕು ಟೌನ್‌ಶಿಪ್‌ಗಳನ್ನು ಕೆಂಪು ವಲಯದಿಂದ ಕೈಬಿಟ್ಟಿರುವ ಮಾದರಿಯಲ್ಲೇ ಬಿಡದಿ ಟೌನ್‌ಶಿಪ್ ವ್ಯಾಪ್ತಿಯನ್ನೂ ಕೆಂಪು ವಲಯದಿಂದ ಕೈಬಿಟ್ಟು ರೈತರಿಗೆ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿದರು.

ಆದರೆ ರೈತರ ಮನವಿಗೆ ಅಂದಿನ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಸರ್ಕಾರವು ತಿರಸ್ಕರಿಸಿ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇ.40ರಷ್ಟು ಜಾಗ ಅಥವಾ ಉತ್ತಮ ಬೆಲೆ ನೀಡುವುದಾಗಿ ತಿಳಿಸಿದರು.

### 4 2019–2020 - ಬಿ.ಎಸ್. ಯಡಿಯೂರಪ್ಪ ಅವರ ಅವಧಿಯಲ್ಲಿ ಕೈಗೊಂಡ ತೀರ್ಮಾನ:

ಬಿಡದಿ ಟೌನ್‌ಶಿಪ್ ಯೋಜನೆಗೆ ಗುರುತಿಸಲಾಗಿದ್ದ ಸುಮಾರು 9,179 ಎಕರೆ ಪ್ರದೇಶದ ಪೈಕಿ 900 ಎಕರೆ ಪ್ರದೇಶವನ್ನು KIADB ಕೈಗಾರಿಕಾ ಪ್ರದೇಶವಾಗಿ ಮೀಸಲಿಟ್ಟು ಅಭಿವೃದ್ಧಿಪಡಿಸಲು ಅಧಿಸೂಚನೆ ಹೊರಡಿಸಲಾಯಿತು.

**ರೈತರ ನಿಯೋಗದ ಭೇಟಿ - 12-05-2020**
ಅಂದಿನ ಮಾಜಿ ಶಾಸಕರಾದ ಹಾಗೂ ಇಂದಿನ ಸಚಿವರಾದ ಹೆಚ್.ಸಿ. ಬಾಲಕೃಷ್ಣ ಮತ್ತು ಮಾಜಿ ಶಾಸಕರಾದ ಸಿ ಎಂ ಲಿಂಗಪ್ಪ ಅವರ ನೇತೃತ್ವದಲ್ಲಿ ರೈತರ ನಿಯೋಗವು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಟೌನ್‌ಶಿಪ್ ವ್ಯಾಪ್ತಿಯ ಉಳಿದ ಪ್ರದೇಶವನ್ನು ಕೆಂಪು ವಲಯದಿಂದ ಕೈಬಿಡುವಂತೆ ಮನವಿ ಸಲ್ಲಿಸಿದರು.

ಮತ್ತೊಮ್ಮೆ ದಿನಾಂಕ 18-05-2020 ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಬಿಡದಿ ಟೌನ್‌ಶಿಪ್ ಪ್ರದೇಶದಲ್ಲಿ:
- 35% ಕೈಗಾರಿಕಾ ಉದ್ದೇಶಕ್ಕೆ
- 30% ವಸತಿ ಉದ್ದೇಶಕ್ಕೆ
- ಉಳಿದ ಪ್ರದೇಶವನ್ನು ಇತರೆ ಉದ್ದೇಶಗಳಿಗೆ ಅಭಿವೃದ್ಧಿಪಡಿಸುವ ಕುರಿತು ನಿರ್ಧಾರ ಕೈಗೊಳ್ಳಲಾಯಿತು.

### 5 ಬಸವರಾಜ ಬೊಮ್ಮಾಯಿರವರ 2021 ಅವಧಿ :

ಬಿಡದಿ ಪ್ರದೇಶದಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ಅಭಿವೃದ್ಧಿಪಡಿಸುವ ಕುರಿತು ಬಜೆಟ್‌ನಲ್ಲಿ ಘೋಷಣೆ ಮಾಡಲಾಯಿತು. 04-03-2022

### 6 2023 — ಕಾಂಗ್ರೆಸ್ ಸರ್ಕಾರ

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಿಡದಿ ಟೌನ್‌ಶಿಪ್ ವ್ಯಾಪ್ತಿಯ ರೈತರು, ಕೆಂಪು ವಲಯದಿಂದ ಕೈಬಿಟ್ಟು ಟೌನ್‌ಶಿಪ್ ಅಭಿವೃದ್ಧಿಪಡಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ರೈತರ ಮನವಿ ಪರಿಗಣಿಸಿ,
ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಯಿತು - 13-02-2025
ಅಂತಿಮ ಅಧಿಸೂಚನೆ ಹೊರಡಿಸಲಾಯಿತು- 12-06-2026

ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನದಿಂದ ಇಷ್ಟು ಕಾಲ ಮೌನವಾಗಿದ್ದ ಬಿಜೆಪಿ ಹಾಗೂ ಜೆಡಿಎಸ್ ನಾಯಕರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ನಂತರವೇ ಪ್ರತಿಭಟನೆಗೆ ಮುಂದಾಗಿರುವುದೇಕೆ? ಎಂಬುದನ್ನು ನೀವೇ ಯೋಚಿಸಿ..!

ಸಾರ್ವಜನಿಕರೇ,
**ದಾಖಲೆಗಳನ್ನು ನೋಡಿ, ದಿನಾಂಕಗಳನ್ನು ನೋಡಿ.**
ಯಾವ ಸರ್ಕಾರ ಏನು ನಿರ್ಧಾರ ಕೈಗೊಂಡಿದೆ ಎಂಬುದನ್ನು ನೋಡಿ.

**ಸತ್ಯ ತಿಳಿದುಕೊಳ್ಳಿ**
**ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಸತ್ಯ ಯಾವುದು ಎಂಬುದನ್ನು ಸಾರ್ವಜನಿಕರೇ ತೀರ್ಮಾನಿಸಲಿ.**

ಪ್ರಕಟಣೆ: ಕೆಂಪು ವಲಯದಿಂದ ನರಕಯಾತನೆ ಅನುಭವಿಸಿದ ನೊಂದ ರೈತ ಬಾಂಧವರು

## ನಿತ್ಯ ಪಂಚಾಂಗ 10.08.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ,
ದಕ್ಷಿಣಾಯಣ ಗ್ರೀಷ್ಮ ಋತು,
ಚಾಂದ್ರಮಾನ, ಆಷಾಢ-ಶ್ರಾವಣ ಮಾಸ

ಆಷಾಢ ಬಹುಳ, ದ್ವಾದಶಿ, ಆರ್ದ್ರಾ ನಕ್ಷತ್ರ, ತ್ರಯೋದಶಿ, ಸೋಮಪ್ರದೋಷ, ಪಾಪನಾಶಿನಿ ದ್ವಾದಶಿ, ಹಿರೇಸಿಂಧೋಗಿ ರಥ, ಕಳ್ಳಂಬೆಳ್ಳ/ನೊಂಬೂರು ಉತ್ಸವ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಮತದಾನದ ಹಕ್ಕು, ಬದುಕಿನ ಹಕ್ಕು: ಹೀಗಾಗಿ ಅದನ್ನು ಉಳಿಸಿಕೊಳ್ಳಿ

## ಭಾರತ ಜೋಡೋ ಯುವಶಕ್ತಿ ಸಂಘಕ್ಕೆ ಈ ತಿಂಗಳಲ್ಲೇ ನೋಂದಣಿ ಆರಂಭ: ಸಿಎಂ



**ಬೆಂಗಳೂರು, ಆ.9:** ಅಧಿಕಾರ ಶಾಶ್ವತವಲ್ಲ, ಪಕ್ಷ ಉಳಿದರೆ ಸರ್ಕಾರ ಹಾಗೂ ಅಧಿಕಾರ ಎಲ್ಲವೂ ಉಳಿಯುತ್ತದೆ. ಹೀಗಾಗಿ ವ್ಯಕ್ತಿ ಪೂಜೆ ಮಾಡುವ ಬದಲು ಪಕ್ಷವನ್ನು ಬಲಪಡಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆ ನೀಡಿದರು. ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದಲ್ಲಿ ನಡೆದ ಕ್ವಿಟ್ ಇಂಡಿಯಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾವು ಮುಖ್ಯಮಂತ್ರಿ ಆಗಿದ್ದರೂ, ಕಾರ್ಯಕರ್ತನಾಗಿ ಪಕ್ಷದ ಶಿಸ್ತಿಗೆ ಬದ್ಧರಾಗಿರುವುದಾಗಿ ಹೇಳಿದರು.

ಸ್ವಾತಂತ್ರ್ಯ ಅಮೂಲ್ಯವಾದದ್ದು. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ಮುನ್ನುಡಿ ಬರೆಯಲಾಗಿತ್ತು. ಇಂದು ಸರ್ವಾಧಿಕಾರಿ ಮನಸ್ಥಿತಿಯವರು ಅಧಿಕಾರ ಬಿಟ್ಟು ತೊಲಗಬೇಕು ಎಂಬ ಸಂದೇಶ ನೀಡಬೇಕಿದೆ. ಅಂದು ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು ಎಂಬ ಘೋಷಣೆ ಮೊಳಗಿದ್ದರೆ, ಇಂದು ಪ್ರತಿಭಟನೆ ಹಾಗೂ ಪ್ರಜಾಪ್ರಭುತ್ವವನ್ನು ಉಳಿಸುವುದು ನಮ್ಮ ಜನ್ಮಸಿದ್ಧ ಹಕ್ಕು ಎಂಬ ಘೋಷಣೆ ಮೊಳಗಬೇಕಿದೆ ಎಂದರು.

ಸಂವಿಧಾನವೇ ನಮಗೆ ಪವಿತ್ರ ಗ್ರಂಥ. ನಮ ಹೆಗಲ ಮೇಲೆ ತ್ರಿವರ್ಣ ಧ್ವಜವಿದೆ. ಕಾಂಗ್ರೆಸ್ ಪಕ್ಷ ಯಾರಿಗೂ ತಲೆಬಾಗುವುದಿಲ್ಲ. ಗಾಂಧೀ ಕುಟುಂಬವನ್ನು ದೇಶದಿಂದ ಹೊರ ಹಾಕಲು ಹಲವು ರೀತಿಯ ಅಪಪ್ರಚಾರ ಹಾಗೂ ಷಡ್ಯಂತ್ರಗಳು ನಡೆದವು. ಯುಪಿಎ ಸರ್ಕಾರದ ವಿರುದ್ಧ ನಡೆದ ಅಪಪ್ರಚಾರದಿಂದ ಕಾಂಗ್ರೆಸ್ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಬೇಕಾಯಿತು. ಯುವ ಸಮುದಾಯಕ್ಕೆ ವಾಸ್ತವಾಂಶ ತಿಳಿಸುವ ಉದ್ದೇಶದಿಂದ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಯಾತ್ರೆ ನಡೆಸಿದರು. ಕರ್ನಾಟಕದಲ್ಲಿ ಚಾಮರಾಜನಗರದಿಂದ ಬೀದರ್‌ವರೆಗೆ ನಡೆದ ಯಾತ್ರೆಗೆ ಅಪಾರ ಜನಬೆಂಬಲ ದೊರೆಯಿತು ಎಂದು ಸರಿಸಿದರು.

ಮಹಾತ್ಮ ಗಾಂಧೀಜಿ ಕಾಂಗ್ರೆಸ್ ಅಧ್ಯಕ್ಷತೆ ವಹಿಸಿದ್ದ ಬೆಳಗಾವಿ ಅಧಿವೇಶನದ ಶತಮಾನೋತ್ಸವದ ಅಂಗವಾಗಿ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಸಲಾಗಿದೆ. ಇದರ ಅಂಗವಾಗಿ ರಾಜ್ಯಾದ್ಯಂತ 100 ಕಾಂಗ್ರೆಸ್ ಕಚೇರಿಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಬಿಜೆಪಿ ರೀತಿಯಲ್ಲಿ ನೂರಾರು ಎಕರೆ ಜಾಗವನ್ನು ಪಡೆದುಕೊಂಡಿಲ್ಲ. ಇಂದಿರಾ ಭವನ ಹಾಗೂ ಪ್ರಿಯದರ್ಶಿನಿ ಭವನಗಳಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಎಂದರು.

ಶೀಘ್ರದಲ್ಲೇ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ಆಗಮಿಸಿ ಗಾಂಧಿನಗರದ ರೇಸ್‌ಕೋರ್ಸ್ ರಸ್ತೆಯ ನಿವೇಶನದಲ್ಲಿ ನೂತನ ಕಾಂಗ್ರೆಸ್ ಕಚೇರಿ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯದ ವಿವಿಧೆಡೆ ಕಾಂಗ್ರೆಸ್ ಕಚೇರಿಗಳ ನಿರ್ಮಾಣಕ್ಕೂ ಏಕಕಾಲದಲ್ಲಿ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ದಿನ 70 ವರ್ಷ ಮೇಲ್ಪಟ್ಟ 100 ಹಿರಿಯ ಕಾಂಗ್ರೆಸ್ ಕಾರ್ಯಕರ್ತರನ್ನು ಸನ್ಮಾನಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರಿಗೆ ಮನವಿ ಮಾಡಿದರು. ಪಕ್ಷಕ್ಕಾಗಿ ನಿಷ್ಠೆಯಿಂದ ಹಾಗೂ ಪ್ರಾಮಾಣಿಕವಾಗಿ ದುಡಿದ ಕಾರ್ಯಕರ್ತರನ್ನು ಗುರುತಿಸಿ ಗೌರವಿಸಬೇಕು. ಪಕ್ಷದ ಕಚೇರಿಗಳಿಗೆ ನಿವೇಶನ ನೀಡಿದವರು ಹಾಗೂ ಆರ್ಥಿಕ ನೆರವು ನೀಡಿದವರನ್ನೂ ರಾಜ್ಯೋತ್ಸವ ಮಾದರಿಯಲ್ಲಿ ಸನಾನಿಸಿ ಪ್ರಮಾಣಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಸಚಿವರಾದ ರಾಮಲಿಂಗಾ ರೆಡ್ಡಿ, ಶಿವರಾಜ ತಂಗಡಗಿ, ಶಾಸಕ ಬೇಳೂರು ಗೋಪಾಲಕೃಷ್ಣ, ಮಾಜಿ ಸಚಿವರಾದ ರಾಣಿ ಸತೀಶ್, ಉಮಾಶ್ರೀ, ರಾಜ್ಯಸಭೆಯ ಮಾಜಿ ಸದಸ್ಯ ಎಲ್.ಹನುಮಂತಯ್ಯ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು

**ರಾಜ್ಯಾದ್ಯಂತ 10 ಸಾವಿರ ಯುವ ಸಂಘಟನೆಗಳ ಸ್ಥಾಪನೆ :**

ಭಾರತ್ ಜೋಡೋ ಯಾತ್ರೆಯ ನೆನಪಿಗಾಗಿ ಸುಮಾರು 1,000 ಕೋಟಿ ವೆಚ್ಚದಲ್ಲಿ ರಾಜ್ಯಾದ್ಯಂತ ಯುವಕರನ್ನು ಒಳಗೊಂಡ 10 ಸಾವಿರ ಸಂಘಟನೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಶೀಘ್ರದಲ್ಲೇ ನೋಂದಣಿ ಪ್ರಕ್ರಿಯೆ ಆರಂಭವಾಗಲಿದ್ದು, ಈ ಸಂಘಟನೆಗಳಿಗೆ ಹೊಸ ಲಾಂಛನವನ್ನೂ ನೀಡಲಾಗುವುದು. 2029ರ ವೇಳೆಗೆ ದೇಶದಲ್ಲಿ ಮಹತ್ವದ ರಾಜಕೀಯ ಬದಲಾವಣೆ ಆಗಲಿದೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

**ಮತದಾರರ ಪಟ್ಟಿ ವಿಚಾರದಲ್ಲಿ ಕಾರ್ಯಕರ್ತರಿಗೆ ಎಚ್ಚರಿಕೆ :**

ಎಸ್‌ಐಆರ್ ನೆಪದಲ್ಲಿ ಮತದಾರರ ಪಟ್ಟಿಯಿಂದ ಒಂದು ಕೋಟಿಗೂ ಹೆಚ್ಚು ಮತಗಳನ್ನು ಅಳಿಸುವ ಸಂಚು ನಡೆಯುತ್ತಿದೆ ಎಂದು ಆರೋಪಿಸಿದ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಕಾರ್ಯಕರ್ತರು ಈ ವಿಚಾರದಲ್ಲಿ ಎಚ್ಚೆತ್ತುಕೊಳ್ಳಬೇಕು ಎಂದರು. ಕಾಂಗ್ರೆಸ್ನ ಬಿಎಲ್‌ಎ–2 ಗಳು ಹಾಗೂ ಬೂತ್ ಮಟ್ಟದ ಕಾರ್ಯಕರ್ತರು ಮತದಾರರ ಪಟ್ಟಿಯನ್ನು ಪರಿಶೀಲಿಸಬೇಕು. ಮತದಾರರ ನೋಂದಣಿ ಅರ್ಜಿ ಗಳನ್ನು ವಾಪಾಸ್ ಸಲ್ಲಿಸದೇ ಇರುವವರನ್ನು ಸಂಪರ್ಕಿಸಿ, ಅರ್ಜಿ ವಾಪಾಸ್ ನೀಡುವಂತೆ ಮಾಡಬೇಕು. ಯಾವುದೇ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಅಳಿಸದಂತೆ ಎಚ್ಚರಿಕೆ ವಹಿಸಬೇಕು. 18 ವರ್ಷ ತುಂಬಿದ ಯುವಕರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ದೇಶದಲ್ಲಿ ಮತದಾರರ ಹಕ್ಕುಗಳ ಮೇಲೆ ದಾಳಿ ನಡೆಯುತ್ತಿದೆ. ಮತಗಳ್ಳತನದ ವಿರುದ್ಧ ಹೋರಾಟ ನಡೆಸಬೇಕಾದ ಪರಿಸ್ಥಿತಿ ಎದುರಾಗಿದೆ. ಪಕ್ಷದ ಇತರ ಕೆಲಸಗಳನ್ನು ಬದಿಗಿಟ್ಟು ವೋಟ್ ಚೋರಿ ವಿರುದ್ಧ ಹೋರಾಟ ನಡೆಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

**70 ಸಾವಿರ ಹುದ್ದೆಗಳ ನೇಮಕಾತಿ :**

ದೇಶದಲ್ಲಿ ನಿರುದ್ಯೋಗದ ಸಮಸ್ಯೆ ಹೆಚ್ಚಾಗಿದೆ. ರಾಜ್ಯದಲ್ಲಿ ಸುಮಾರು 70 ಸಾವಿರ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

2028ರ ವಿಧಾನಸಭೆ ಹಾಗೂ 2029ರ ಲೋಕಸಭೆ ಚುನಾವಣೆ ಕಾಂಗ್ರೆಸ್‌ನ ಪ್ರಮುಖ ಗುರಿಯಾಗಿರಬೇಕು. ಕಾಂಗ್ರೆಸ್ ಮುಕ್ತ ಭಾರತ ಮಾಡುತ್ತೇವೆ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಅದು ಯಾರಿಂದಲೂ ಸಾಧ್ಯವಿಲ್ಲ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

**ಪಂಚಾಯಿತಿ ಮಟ್ಟಕ್ಕೂ ಗ್ಯಾರಂಟಿ ಸಮಿತಿಗಳು :**

ಪ್ರತಿ ಗ್ರಾಮ ಪಂಚಾಯಿತಿಗೂ ಗ್ಯಾರಂಟಿ ಯೋಜನೆಗಳ ಸಮಿತಿಗೆ ಸದಸ್ಯರನ್ನು ನೇಮಕ ಮಾಡಲಾಗುವುದು. ಈಗಾಗಲೇ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಸಮಿತಿಗಳ ನೇಮಕಾತಿ ಮಾಡಲಾಗಿದೆ. ಪಂಚಾಯಿತಿ ಮಟ್ಟದಲ್ಲಿ ಕಾರ್ಯಕರ್ತರನ್ನು ಗುರುತಿಸುವುದರಿಂದ ಗ್ಯಾರಂಟಿ ಯೋಜನೆಗಳಿಗೆ ಮತ್ತಷ್ಟು ಬಲ ಬರಲಿದೆ ಎಂದರು. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರು ಟೀಕಿಸಿದ್ದರು. ಆದರೆ ಇದೇ ಯೋಜನೆಗಳನ್ನು ಇದೀಗ ದೇಶದ ವಿವಿಧ ರಾಜ್ಯಗಳಲ್ಲಿ ಮಾದರಿಯಾಗಿ ಅನುಸರಿಸಲಾಗುತ್ತಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

# ಖಾತೆ ಹಂಚಿಕೆಯಲ್ಲಿ ಯಾವುದೇ ಗೊಂದಲವಿಲ್ಲ: ಸಚಿವ ಈಶ್ವರ್ ಖಂಡ್ರೆ



### ಇಂದು ಸುಗಮವಾಗಿ ಖಾತೆಗಳ ಹಂಚಿಕೆ ಪ್ರಕ್ರಿಯೆ ಪೂರ್ಣ ಸಚಿವರ ವಿಶ್ವಾಸ

ಬಳ್ಳಾರಿ, ಆ.9: ರಾಜ್ಯ ಸಚಿವ ಸಂಪುಟವಿಸ್ತರಣೆಯಲ್ಲಿ ಹೊಸದಾಗಿ ಸೇರ್ಪಡೆಗೊಂಡ ಸಚಿವರಿಗೆ ಖಾತೆ ಹಂಚಿಕೆ ಮಾಡುವ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲ ಎಂದು ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದಾರೆ. ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸೋಮವಾರದ ವೇಳೆಗೆ ಅತ್ಯಂತ ಸುಗಮವಾಗಿ ಖಾತೆಗಳ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು.ಇದೇ ವೇಳೆ ಮಾಜಿ ಸಚಿವ ಬಿ. ಶ್ರೀರಾಮುಲು ಅವರ ರಾಜಕೀಯ ಆರೋಪಗಳಿಗೆ ತಿರುಗೇಟು ನೀಡಿದ ಅವರು, ರಾಜ್ಯದಲ್ಲಿ ಕೊತ್ವಾಲ್ ಶಿಷ್ಯಂದಿರ ಆಡಳಿತ ನಡೆಯುತ್ತಿದೆ ಎಂಬ ಹೇಳಿಕೆಗೆ ಖಂಡ್ರೆ ಕಿಡಿಕಾರಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಬಿಜೆಪಿಗೆ ನುಂಗಲಾರದ ತುತ್ತಾಗಿದೆ. 2028ರ ಮುಂದಿನ ವಿಧಾನಸಭೆ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷವೇ ಮತ್ತೆ ಭರ್ಜರಿಯಾಗಿ ಅಧಿಕಾರಕ್ಕೆ ಬರಲಿದೆ ಎಂಬ ಸತ್ಯ ಬಿಜೆಪಿಯವರಿಗೆ ಮನವರಿಕೆಯಾಗಿದೆ. ಹೀಗಾಗಿ ತೀವ್ರ ಹತಾಶೆಯಿಂದ ಅವರು ಇಂತಹ ಕೀಳುಮಟ್ಟದ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.ಬಳ್ಳಾರಿ ಜಿಲ್ಲೆಯ ಐತಿಹಾಸಿಕ ಘನತೆಗೆ ಧಕ್ಕೆ ತಂದವರು ಅವರು., 'ರಿಪಬ್ಲಿಕ್ ಆಫ್ ಬಳ್ಳಾರಿ' ಎಂಬ ಕುಖ್ಯಾತಿ ಯಾರ ಆಡಳಿತದ ಅವಧಿಯಲ್ಲಿ ಬಂತು ಎಂಬುದನ್ನು ಶ್ರೀರಾಮುಲು ಮತ್ತು ರೆಡ್ಡಿ ಸಹೋದರರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳುವುದು ಒಳಿತು. ಬಳ್ಳಾರಿಗೆ ಕಪ್ಪುಚುಕ್ಕೆ ತಂದವರು ಯಾರು ಎಂಬುವುದು ಈ ಭಾಗದ ಜನರಿಗೆ ಚೆನ್ನಾಗಿ ಗೊತ್ತಿದೆ. ಇತರರ ಮೇಲೆ ಬೊಟ್ಟು ಮಾಡಿ ತೋರಿಸುವ ಮೊದಲು ಅವರು ತಮ್ಮ ಹಿಂದಿನ ಆಡಳಿತ ವೈಖರಿಯನ್ನು ಒಮ್ಮೆ ನೆನಪಿಸಿ ಕೊಳ್ಳಬೇಕು ಎಂದು ತಿರುಗೇಟು ನೀಡಿದರು.ಸಚಿವ ಸಂಪುಟ ವಿಸ್ತರಣೆ ಮತ್ತು ಪ್ರಾತಿನಿಧ್ಯದ ಕುರಿತು ಮಾತನಾಡಿ, ಕಾಂಗ್ರೆಸ್ ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಸಚಿವ ಸಂಪುಟದಲ್ಲಿಯೂ ಮಹಿಳೆಯರಿಗೆ ಸೂಕ್ತ ಅವಕಾಶ ದೊರೆಯಲಿದ್ದು, ರಾಜ್ಯದ ಎಲ್ಲ ಸಮುದಾಯಗಳಿಗೂ ಸಮಾನ ಮತ್ತು ಸೂಕ್ತ ಪ್ರಾತಿನಿಧ್ಯ ನೀಡಲು ಪಕ್ಷ ಬದ್ಧವಾಗಿದೆ ಎಂದರು. ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಗೆ ಬಿಜೆಪಿ ಪಟ್ಟು ಹಿಡಿದಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಖಂಡ್ರೆ, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿಯ ವೈಫಲ್ಯಗಳನ್ನು ದೇಶದ ಜನ ಗಮನಿಸುತ್ತಿದ್ದಾರೆ. ಬಿಜೆಪಿಯು ವಿದ್ಯಾರ್ಥಿಗಳನ್ನು ನಡೆಸಿಕೊಂಡ ರೀತಿ, ಪೊಲೀಸ್ ವ್ಯವಸ್ಥೆಯನ್ನು ರಾಜಕೀಯವಾಗಿ ದುರ್ಬಳಕೆ ಮಾಡಿಕೊಂಡಿರುವ ಸತ್ಯ ಈಗ ಬಹಿರಂಗವಾಗಿದೆ. ಇಂತಹ ಗಂಭೀರ ಲೋಪಗಳಿಂದಾಗಿಯೇ ಕೇಂದ್ರದ ಸಚಿವರೊಬ್ಬರು ರಾಜೀನಾಮೆ ನೀಡಬೇಕಾಯಿತು. ವಿದ್ಯಾರ್ಥಿಗಳ ಮೇಲೆ ನಡೆದ ದಾಳಿ, ಹಲ್ಲೆ ಹಾಗೂ ಹಿಂಸಾಚಾರ ಪ್ರಕರಣಗಳ ನೈತಿಕ ಹೊಣೆಯನ್ನು ಕೇಂದ್ರ ಗೃಹ ಸಚಿವರೇ ಹೊರಬೇಕು. ಬಿಜೆಪಿಯವರಿಗೆ ನಿಜಕ್ಕೂ ಕಾಳಜಿಯಿದ್ದರೆ ಮೊದಲು ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಎಸಗಿದವರ ವಿರುದ್ಧ ಪ್ರತಿಭಟನೆ ನಡೆಸಲಿ ಎಂದು ಸವಾಲು ಹಾಕಿದ ಸಚಿವರು, ಕೇಂದ್ರ ಗೃಹ ಸಚಿವ ಅಮಿತ್ ಶಾ ಮೊದಲು ರಾಜೀನಾಮೆ ನೀಡಲಿ ಎಂದು ಖಂಡ್ರೆ ಆಗ್ರಹಿಸಿದರು.

# ತೀವ್ರ ಬರ ಪರಿಸ್ಥಿತಿ: ರೈತರ ನೆರವಿಗೆ ಬರಬೇಕಿದ್ದ ಕಾಂಗ್ರೆಸ್ ಸರ್ಕಾರ ರೈತರ ಸಮಸ್ಯೆ ನಿರ್ಲಕ್ಷಿಸುತ್ತಿದೆ: ವಿಜಯೇಂದ್ರ ವಾಗ್ದಾಳಿ



**ಕೋಲಾರ, ಆ.9:** ರಾಜ್ಯದಾದ್ಯಂತ ಮಳೆಯ ಕೊರತೆಯಿಂದ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರು ಬಿತ್ತನೆ ಮಾಡಿದ್ದರೂ ಕೈಗೆ ಬೆಳೆ ಬಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಟೊಮ್ಯಾಟೊ, ಮಾವು ಸೇರಿದಂತೆ ವಿವಿಧ ಬೆಳೆಗಳ ಬೆಳೆಗಾರರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರ ನೆರವಿಗೆ ಧಾವಿಸಬೇಕಾದ ಕಾಂಗ್ರೆಸ್ ಸರ್ಕಾರ ರೈತರ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಕೋಲಾರ ಹೊರವಲಯದ ರತ್ನ ಕನ್ವೆನ್ಷನ್ ಹಾಲ್ನಲ್ಲಿ ಆಗ್ನೇಯ ಪದವೀಧರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಎಂ. ಸುರೇಶ್ ಅವರ ಚುನಾವಣಾ ಪೂರ್ವಭಾವಿ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದ ವಿವಿಧ ಭಾಗಗಳಿಗೆ ಈಗಾಗಲೇ ಪ್ರವಾಸ ಕೈಗೊಂಡಿದ್ದು, ರೈತರ ವಾಸ್ತವ ಸ್ಥಿತಿಯನ್ನು ಸ್ವತಃ ಗಮನಿಸಿದ್ದೇನೆ ಎಂದರು.ರಾಜ್ಯದಲ್ಲಿ ಬರದ ಪರಿಸ್ಥಿತಿ ತೀವ್ರವಾಗಿರುವ ಹಿನ್ನೆಲೆಯಲ್ಲಿ ರೈತರಿಗೆ ತಕ್ಷಣ ಪರಿಹಾರ ಮತ್ತು ಅಗತ್ಯ ನೆರವು ನೀಡಬೇಕಾದ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗಿದೆ. ಕೇಂದ್ರ ಸರ್ಕಾರದ ನೆರವು ಕೇಳುವುದಕ್ಕೂ ಮುನ್ನ ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯನ್ನು ನಿಭಾಯಿಸಬೇಕು ಎಂದು ವಿಜಯೇಂದ್ರ ಒತ್ತಾಯಿಸಿದರು.ರೈತರು ಬೆಳೆ ಇಲ್ಲದೆ ಸಂಕಷ್ಟದಲ್ಲಿದ್ದಾರೆ. ಸಾಲದ ಹೊರೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ರೈತರ ಸಾಲಮನ್ನಾ ಸೇರಿದಂತೆ ಅಗತ್ಯ ಪರಿಹಾರ ಕ್ರಮಗಳ ಬಗ್ಗೆ ಸರ್ಕಾರ ಯಾವುದೇ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಸಚಿವರು ಮತ್ತು ಶಾಸಕರು ದೆಹಲಿ ಪ್ರವಾಸ ಹಾಗೂ ರಾಜಕೀಯ ಚಟುವಟಿಕೆಗಳಿಗೆ ನೀಡುವ ಸಮಯವನ್ನು ರೈತರ ಸಂಕಷ್ಟ ಪರಿಹಾರಕ್ಕೆ ನೀಡಬೇಕಿತ್ತು ಎಂದು ಅವರು ಟೀಕಿಸಿದರು."ಕೇಂದ್ರ ಸರ್ಕಾರವನ್ನು ಕೇಳುವುದಕ್ಕೂ ಮುನ್ನ ರಾಜ್ಯ ಸರ್ಕಾರ ರೈತರಿಗೆ ಪರಿಹಾರ ಘೋಷಿಸಲಿ. ಮೊದಲು ರಾಜ್ಯ ಸರ್ಕಾರ ತನ್ನ ಜವಾಬ್ದಾರಿ ನಿರ್ವಹಿಸಿ, ನಂತರ ಕೇಂದ್ರ ಸರ್ಕಾರದ ನೆರವು ಕೇಳಲಿ. ತಡ ಮಾಡದೆ ಮುಖ್ಯಮಂತ್ರಿ ಅವರು ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಬೇಕು," ಎಂದು ವಿಜಯೇಂದ್ರ ಆಗ್ರಹಿಸಿದರು. ಕಾಂಗ್ರೆಸ್ ಸರ್ಕಾರದ ನೀತಿಗಳಿಂದ ಬಡವರ ಬದುಕಿನ ಮೇಲೆ ಮತ್ತಷ್ಟು ಹೊರೆ ಬೀಳುತ್ತಿದೆ. ಪಡಿತರ ಚೀಟಿಗಳಿಗೂ ಕತ್ತರಿ ಹಾಕುವ ಮೂಲಕ ಬಡವರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.ರೈತರು, ಬಡವರು, ಹೈನುಗಾರರು ಹಾಗೂ ಯುವಕರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸದಿದ್ದರೆ ಬಿಜೆಪಿ ರಾಜ್ಯಾದ್ಯಂತ ಜನಾಂದೋಲನ ನಡೆಸಲಿದೆ. ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಜನರ ಧ್ವನಿಯಾಗಿ ಬಿಜೆಪಿ ಹೋರಾಟ ನಡೆಸಲಿದೆ ಎಂದು ಅವರು ಎಚ್ಚರಿಸಿದರು. ಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರದ ಆದ್ಯತೆಗಳ ಕುರಿತು ವಾಗ್ದಾಳಿ ನಡೆಸಿದ ವಿಜಯೇಂದ್ರ, ರೈತರು ಮತ್ತು ಜನಸಾಮಾನ್ಯರ ಸಮಸ್ಯೆಗಳಿಗೆ ಆದ್ಯತೆ ನೀಡುವ ಬದಲು ಸರ್ಕಾರ ರಿಯಲ್ ಎಸ್ಟೇಟ್ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ಆರೋಪಿಸಿದರು. ಅಧಿಕಾರ ಶಾಶ್ವತವಲ್ಲ. ಅಧಿಕಾರ ಕಳೆದು ಕೊಳ್ಳುವ ದಿನ ಬರುತ್ತದೆ. ಆದರೆ ರೈತರ ಜಮೀನು, ಬದುಕು ಮತ್ತು ಭವಿಷ್ಯ ಶಾಶ್ವತವಾಗಿ ಉಳಿಯಬೇಕು. ಮುಖ್ಯಮಂತ್ರಿ ಅವರು ರಿಯಲ್ ಎಸ್ಟೇಟ್ ಯೋಜನೆಗಳಿಗಿಂತ ರೈತರ ಸಮಸ್ಯೆಗಳಿಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

# ನಿಯಮ ಉಲ್ಲಂಘಿಸಿ ಸಚಿವ ನಾಗೇಂದ್ರ ದೆಹಲಿ ಭೇಟಿ

### ಜಾಮೀನು ರದ್ದತಿ: ನ್ಯಾಯಾಲಯಕ್ಕೆ ಇ.ಡಿ ಮೊರೆ



ಬೆಂಗಳೂರು, ಆ.9: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಬಿ.ನಾಗೇಂದ್ರ ಅವರು ಷರತ್ತುಬದ್ಧ ಜಾಮೀನಿನ ಮೇಲೆ ಹೊರಗಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ವಿಸ್ತರಣೆ ವೇಳೆ ನಾಗೇಂದ್ರ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಲಾಗಿದೆ. ಆದರೆ ಇದೀಗ ಅವರು ಕೋರ್ಟ್ ವಿಧಿಸಿದ್ದ ಜಾಮೀನು ಷರತ್ತುಗಳನ್ನು ಉಲ್ಲಂಘಿಸಿ ದೆಹಲಿಗೆ ಪ್ರವಾಸ ಮಾಡಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಕೋರ್ಟ್ ಷರತ್ತು ಉಲ್ಲಂಘಿಸಿ ನಾಗೇಂದ್ರ ದೆಹಲಿಗೆ ಪ್ರಯಾಣ ಬೆಳೆಸಿರುವ ಆರೋಪ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ ಸಾಕ್ಷ್ಯ ಸಂಗ್ರಹಕ್ಕೆ ಇಳಿದಿದೆ. ಆರೋಪ ಸಾಬೀತಾದರೆ ನಾಗೇಂದ್ರ ಜಾಮೀನು ರದ್ದುಗೊಳಿಸಲು ಇ.ಡಿ ಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು 2024ರ ಅಕ್ಟೋಬರ್ 14ರಂದು ನಾಗೇಂದ್ರ ಅವರಿಗೆ ಜಾಮೀನು ನೀಡುವಾಗ, ಕರ್ನಾಟಕ ರಾಜ್ಯದಿಂದ ಹೊರಗೆ ಪ್ರಯಾಣಿಸಬೇಕಾದರೆ ನ್ಯಾಯಾಲಯದಿಂದ ಮುಂಚಿತವಾಗಿ ಲಿಖಿತ ಅನುಮತಿ ಪಡೆಯುವುದು ಕಡ್ಡಾಯ ಎಂಬ ಸ್ಪಷ್ಟ ಷರತ್ತು ವಿಧಿಸಿತ್ತು. ಕಠಿಣ ಷರತ್ತುಗಳಿದ್ದರೂ ನಾಗೇಂದ್ರ ಅವರು ನ್ಯಾಯಾಲಯದ ಅನುಮತಿ ಪಡೆಯದೇ ಇದೇ ಜುಲೈ 15 ಮತ್ತು ಜುಲೈ 26ರಂದು ದೆಹಲಿಗೆ ಪ್ರಯಾಣಿಸಿದ್ದಾರೆ ಎನ್ನಲಾಗಿದೆ. ಜುಲೈ 15ರ ಸಂಜೆ 6:15ರ ಇಂಡಿಗೋ ವಿಮಾನ ಹಾಗೂ ಜುಲೈ 26ರ ಮಧ್ಯಾಹ್ನ 1:55ರ ವಿಮಾನದಲ್ಲಿ ಅವರು ದೆಹಲಿಗೆ ತೆರಳಿದ್ದರೆಂದು ಇಡಿಗೆ ಮಾಹಿತಿ ಲಭಿಸಿದೆ.ಈ ಮಾಹಿತಿ ಲಭ್ಯವಾಗುತ್ತಿದ್ದಂತೆ ಇಡಿ ಅಧಿಕಾರಿಗಳು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಿಸಿಟಿವಿ ದೃಶ್ಯಾವಳಿ, ಶಿಷ್ಟಾಚಾರ ವಿಭಾಗದ ರಿಜಿಸ್ಟರ್ ಹಾಗೂ ವಿಮಾನಯಾನ ಸಂಸ್ಥೆಯ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ.

ನ್ಯಾಯಾಲಯವು ಈ ಹಿಂದೆ ಮೂರು ಬಾರಿ ಮಾತ್ರ ನಾಗೇಂದ್ರ ಅವರಿಗೆ ರಾಜ್ಯದಿಂದ ಹೊರಗೆ ಹೋಗಲು ಅನುಮತಿ ನೀಡಿತ್ತು 2026ರ ಏಪ್ರಿಲ್ 26 ರಿಂದ ಜೂನ್ 2ರವರೆಗೆ, ಜೂನ್ 11 ರಿಂದ ಜುಲೈ 7ರವರೆಗೆ, ಜುಲೈ 16 ರಿಂದ ಜುಲೈ 25ರವರೆಗೆ ನ್ಯಾಯಾಲಯದಿಂದ ಅನುಮತಿ ಸಿಕ್ಕಿತ್ತು. ನ್ಯಾಯಾಲಯ ಅನುಮತಿ ನೀಡಿದ್ದ ಅವಧಿಗಿಂತ ಹೊರತಾಗಿ ಜುಲೈ 15 ಹಾಗೂ ಜುಲೈ 26ರಂದು ನಾಗೇಂದ್ರ ದೆಹಲಿಯಲ್ಲಿ ಕಾಣಿಸಿಕೊಂಡಿದ್ದು ಇ.ಡಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

# ಭಯ ಹುಟ್ಟಿಸಿ ಹೊರಟ್ಟಿ ಅವರಿಂದ ರಾಜೀನಾಮೆ: ಮುಖ್ಯಮಂತ್ರಿ ವಿರುದ್ಧ ಕಾನೂನು ಕ್ರಮಕ್ಕೆ ರಾಜ್ಯಪಾಲರಿಗೆ ಮನವಿ

ಬೆಂಗಳೂರು, ಆ.9: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಂದ ಬಲವಂತವಾಗಿ ರಾಜೀನಾಮೆ ಪಡೆಯಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಆಡಳಿತ ಪಕ್ಷದ ನಾಯಕರು ಒತ್ತಡ ಹೇರಿದ್ದಾರೆ ಎಂದು ಬಿಜೆಪಿ–ಜೆಡಿಎಸ್ ನಿಯೋಗ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರಿಗೆ ದೂರು ನೀಡಿದೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮೇಲ್ಮನೆಯ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಟಿ.ಎ.ಶರವಣ ಅವರನ್ನು ಒಳಗೊಂಡ ನಿಯೋಗ ರಾಜಭವನಕ್ಕೆ ತೆರಳಿ ದೂರು ಸಲ್ಲಿಸಿದೆ. ರಾಜ್ಯಪಾಲರಿಗೆ ಸಲ್ಲಿಸಿರುವ ಪತ್ರದಲ್ಲಿ, ಸಭಾಪತಿ ಬಸವರಾಜ ಹೊರಟ್ಟಿ ಅವರ ಮೇಲೆ ಒತ್ತಡ ಹೇರಿ ರಾಜೀನಾಮೆ ಪಡೆಯಲಾಗಿದೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಸಂವಿಧಾನದ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲಾಗಿದೆ. ರಾಜ್ಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಾಂವಿಧಾನಿಕ ಮೌಲ್ಯಗಳು ಸಂಪೂರ್ಣವಾಗಿ ಕುಸಿದಿದ್ದು, ಆಡಳಿತಾರೂಢ ಪಕ್ಷದ ನಾಯಕರು ಗೂಂಡಾಗಳಂತೆ ವರ್ತಿಸುತ್ತಿರುವುದು ಅತ್ಯಂತ ಗಂಭೀರ ಹಾಗೂ ಆತಂಕಕಾರಿ ಬೆಳವಣಿಗೆಯಾಗಿದೆ.

ಸಭಾಪತಿ ಹೊರಟ್ಟಿ ಅವರು, ಆಗಸ್ಟ್ 14ರಂದು ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದರು. ಆದರೂ 7ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್ ಸೇರಿದಂತೆ ಇತರರು ಸಭಾಪತಿಯವರ ಕಚೇರಿಗೆ ಹೋಗಿ ಮಾತುಕತೆ ನಡೆಸಿ ರಾಜೀನಾಮೆ ನೀಡುವಂತೆ ಬಲವಂತ ಪಡಿಸಿ, ಸಭಾಪತಿಯವರ ಆಪ್ತ ಕಾರ್ಯದರ್ಶಿಗೆ ಬೆದರಿಕೆ ಹಾಕಿ ಲೆಟರ್ ಹೆಡ್ ತರಿಸಿಕೊಂಡಿದ್ದಾರೆ. ಬಳಿಕ ಕಾಂಗ್ರೆಸ್ ನಾಯಕರೇ ರಾಜೀನಾಮೆ ಪತ್ರವನ್ನು ಟೈಪ್ ಮಾಡಿಸಿ ಬಸವರಾಜ ಹೊರಟ್ಟಿಯವರಿಂದ ಸಹಿ ಹಾಕಿಸಿದ್ದಾರೆ ಎಂದು ದೂರಲಾಗಿದೆ. ಕಾನೂನುಬಾಹಿರ ಒತ್ತಡದಿಂದ ಪಡೆಯಲಾದ ಅಸಾಂವಿಧಾನಿಕ ರಾಜೀನಾಮೆಯನ್ನು ತಿರಸ್ಕರಿಸಬೇಕು ಎಂದು ರಾಜ್ಯಪಾಲರಿಗೆ ಮನವಿ ಮಾಡಲಾಗಿದೆ. ಒತ್ತಡ ಹೇರಿದವರ ವಿರುದ್ಧ ಸಂವಿಧಾನಾತ್ಮಕ ಹಾಗೂ ಕಾನೂನು ಕ್ರಮಕ್ಕೆ ಆದೇಶಿಸಬೇಕು ಎಂದು ದೂರಿನಲ್ಲಿ ಆಗ್ರಹಿಸಲಾಗಿದೆ.



ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಅವರಿಗೆ ಲೋಕಭವನದಲ್ಲಿ ನಿಯೋಗದ ಮೂಲಕ ದೂರು ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ, ಸಭಾಪತಿ ಬಸವರಾಜ ಹೊರಟ್ಟಿ ಅವರಿಂದ ಬಲವಂತವಾಗಿ ರಾಜೀನಾಮೆ ಪಡೆಯಲಾಗಿದ್ದು, ಆಡಳಿತ ಪಕ್ಷದ ನಾಯಕರು ಗೂಂಡಾಗಳಂತೆ ವರ್ತಿಸಿದ್ದಾರೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ರಾಜೀನಾಮೆ ಪಡೆಯಲಾಗಿದ್ದು ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿ ಮಾಡಲಾಗಿದೆ ಎಂದರು.

ಹೊರಟ್ಟಿ ಅವರ ರಾಜೀನಾಮೆಯನ್ನು ಒತ್ತಾಯವಾಗಿ ಪಡೆಯಲಾಗಿದೆ. ಅವರಿಗೆ ಭಯ ಹುಟ್ಟಿಸಿ ಸಹಿ ಹಾಕಿಸಿಕೊಂಡಿದ್ದಾರೆ. ಹೊರಟ್ಟಿ ಆ.14 ರಂದು ರಾಜೀನಾಮೆ ನೀಡುತ್ತೇನೆ ಎಂದು ಹೇಳಿದ್ದರೂ ಅವಸರದಲ್ಲಿ ಅವರಿಂದ ರಾಜೀನಾಮೆ ಪಡೆದಿರುವ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಮತ್ತು ಇತರರ ವಿರುದ್ಧ ಸಂವಿಧಾನದ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳುವಂತೆ ರಾಜ್ಯಪಾಲರಿಗೆ ಮನವಿ ಮಾಡಿರುವುದಾಗಿ ಹೇಳಿದರು.

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹಾಗೂ ವಿಧಾನ ಪರಿಷತ್ ಸದಸ್ಯರೂ ಸೇರಿ ಒಟ್ಟು 30 ಮುಖಂಡರು ಹೊರಟ್ಟಿ ಅವರ ಕೊಠಡಿಗೆ ಹೋಗಿ ತೀವ್ರವಾದ ರಾಜಕೀಯ ಒತ್ತಡ ಹೇರಿ ಗೂಂಡಾಗಳಂತೆ ವರ್ತಿಸಿ ಅಸಾಂವಿಧಾನಿಕವಾಗಿ ರಾಜೀನಾಮೆ ಪಡೆದಿದ್ದಾರೆ. ಆಪ್ತ ಸಹಾಯಕರನ್ನು ಕರೆದು ಲೆಟರ್ ಹೆಡ್ ತರಿಸಿ ಟೈಪ್ ಮಾಡಿಸಿ ದಿನಾಂಕವನ್ನು ಖಾಲಿ ಬಿಟ್ಟು ಸಹಿ ಹಾಕಿಸಿಕೊಂಡು ನಂತರ ದಿನಾಂಕವನ್ನು ಪೆನ್ನಿನಲ್ಲಿ ತಿದ್ದಿದ್ದಾರೆ ಎಂದು ತಿಳಿಸಿದರು.

ಸಭಾಪತಿಗಳು ರಾಜೀನಾಮೆ ನೀಡಲು ಉಪಸಭಾಪತಿ ಇರಬೇಕು. ಆದರೆ ಉಪಸಭಾಪತಿಗಳು ಇಲ್ಲ. ಅವರು ಇಲ್ಲದಿದ್ದಾಗ ಯಾರು ಅಂಗೀಕಾರ ಮಾಡಬೇಕು? ರಾಜ್ಯಪಾಲರ ಕ್ರಮ ಏನು? ಸದನದಲ್ಲಿ ಏನು ಆಗಬೇಕು? ಎಂಬ ಬಗ್ಗೆ ಕಾನೂನು ಮಾಹಿತಿ ಕೇಳುತ್ತೇವೆ. ಮುಂದಿನ ನಡೆ ಏನು ಎಂದು ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ನಮ್ಮ ದೂರಿಗೆ ಸ್ಪಂದಿಸಿರುವ ರಾಜ್ಯಪಾಲರು ಕಾನೂನು ಕ್ರಮ ಜರುಗಿಸುತ್ತೇನೆ ಎಂದು ಭರವಸೆ ನೀಡಿದ್ದಾರೆ. ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾದ ತಾವು ಮಧ್ಯಪ್ರವೇಶಿಸಿ ಸಂವಿಧಾನದ ಅಡಿಯಲ್ಲಿ ವಿಶೇಷ ಅಧಿಕಾರ ಬಳಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿರುವುದಾಗಿ ಹೇಳಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಆಗಸ್ಟ್ 10 2026, ಸೋಮವಾರ

## ಒಳಪುಟಗಳಲ್ಲಿ

ಜೆನ್ ಝಿ ವಿದ್ಯಾರ್ಥಿಗಳನ್ನು ದಿಕ್ಕುತಪ್ಪಿಸಲು ಯತ್ನಿಸಿದ್ದಕ್ಕೆ ರಾಜೀನಾಮೆ: ಧರ್ಮೇಂದ್ರ ಪ್ರಧಾನ್ - ಪು.4

ವಿಧಾನ ಪರಿಷತ್ ಸಭಾನಾಯಕನ ಹೊಣೆ ಯತೀಂದ್ರ ಹೆಗಲಿಗೆ - ಪು.5

ಒಂದಲ್ಲಾ, ಎರಡಲ್ಲಾ - ಸಿದ್ದು ಮೂರು ಬಾರಿ ಮಾತಿಗೆ ತಪ್ಪಿದರು ಎಂದ ಬಿ.ಆರ್. ಪಾಟೀಲ್! - ಪು.6

## ಹೈಕೋರ್ಟ್‌ಗೆ 6 ನೂತನ ಹೆಚ್ಚುವರಿ ನ್ಯಾಯಮೂರ್ತಿಗಳ ಪ್ರಮಾಣವಚನ



**ಬೆಂಗಳೂರು, ಆ.9:** ಕರ್ನಾಟಕ ಉಚ್ಚ ನ್ಯಾಯಾಲಯದ ನೂತನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ರಾಘವೇಂದ್ರ ಸೀತಾರಾಂ ಶ್ರೀವತ್ಸ, ಹೇಮಾ ಕುಲಕರ್ಣಿ, ಸುಬ್ರಹ್ಮಣ್ಯ ರಂಗರಾವ್, ತಡಗವಾಡಿ ಪ್ರಕಾಶ್ ವಿವೇಕಾನಂದ, ಬಕ್ಕೇಶ್ವರ ಪ್ರಮೋದ್ ಮತ್ತು ಹೊಂಬೇಗೌಡ ಶಾಂತಿ ಭೂಷಣ್ ಅವರು ಗೌರವಾನ್ವಿತ ರಾಜ್ಯಪಾಲರಿಂದ ಪ್ರಮಾಣ ವಚನ ಸ್ವೀಕರಿಸಿದರು.

ಲೋಕಭವನದ ಗಾಜಿನ ಮನೆಯಲ್ಲಿ ಹಮ್ಮಿಕೊಳ್ಳಲಾದ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ನೂತನ ಹೆಚ್ಚುವರಿ ನ್ಯಾಯಮೂರ್ತಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ವಿಬು ಭಖ್ರು ಸೇರಿದಂತೆ, ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳು, ವಕೀಲರು, ಗಣ್ಯರು ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಹರ್‌ಘರ್ ತಿರಂಗಾ

### ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ- ಪ್ರಧಾನಿ ಮೋದಿ ಕರೆ



**ಇದು ವಿಕಸಿತ ಭಾರತದ ದೃಷ್ಟಿಕೋನಕ್ಕೆ ಸಂಪರ್ಕ ಕಲ್ಪಿಸುತ್ತದೆ**

ನವದೆಹಲಿ, ಆ.9: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಾಗರಿಕರು ಹರ್‌ಘರ್ ತಿರಂಗ ಅಭಿಯಾನದಲ್ಲಿ ಉತ್ಸಾಹದಿಂದ ಸೇರಲು ಕರೆ ನೀಡಿದರು, ರಾಷ್ಟ್ರೀಯ ಧ್ವಜವು ಭಾರತದ ಹೆಮ್ಮೆಯನ್ನು ಸಾಕಾರಗೊಳಿಸುತ್ತದೆ ಮತ್ತು ಜನರು ರಾಷ್ಟ್ರಕ್ಕೆ ತಮ್ಮ ಅತ್ಯುತ್ತಮ ಕೊಡುಗೆ ನೀಡಲು ಪ್ರೇರೇಪಿಸುತ್ತದೆ ಎಂದು ಹೇಳಿದರು.

ತ್ರಿವರ್ಣ ಧ್ವಜವು ನಾಗರಿಕರು ದೇಶಕ್ಕಾಗಿ ಕೆಲಸ ಮಾಡಲು ನಿರಂತರ ಪ್ರೇರಣೆಯ ಮೂಲವಾಗಿ ಕಾರ್ಯ ನಿರ್ವಹಿಸುತ್ತದೆ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಸಾಮೂಹಿಕ ಭಾಗವಹಿಸುವಿಕೆಯ ಮಹತ್ವವನ್ನು ಪುನರುಚ್ಚರಿಸಿತು ಎಂದು ಮೋದಿ ಹೇಳಿದರು. (5ನೇ ಪುಟಕ್ಕೆ)

## ಹೊರಟ್ಟಿ ರಾಜೀನಾಮೆ ವಿಷಯದಲ್ಲಿ ಪ್ರತಿಪಕ್ಷಗಳಿಂದ ರಾಜಕೀಯ : ಸಿಎಂ ಕಿಡಿ

ನವದೆಹಲಿ, ಆ.9: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ರಾಜೀನಾಮೆ ವಿಷಯದಲ್ಲಿ ಪ್ರತಿಪಕ್ಷಗಳು ಕ್ಷುಲ್ಲಕ ರಾಜಕೀಯ ಮಾಡುತ್ತಿವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಆರೋಪಿಸಿದ್ದಾರೆ.

ದೆಹಲಿಯಲ್ಲಿ ಭಾನುವಾರ ಸಂಜೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಭಾಪತಿ ರಾಜೀನಾಮೆಯಲ್ಲಿ ಸರ್ಕಾರದ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದರು. ಹೊರಟ್ಟಿ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ಕಾಂಗ್ರೆಸ್ ಮುಂದಾಗಿತ್ತು. ಆದರೆ ಗೊತ್ತುವಳಿ ಕೈಬಿಡಿ; ನಾನಾಗಿಯೇ ರಾಜೀನಾಮೆ ನೀಡುತ್ತೇನೆಂದು ಹೊರಟ್ಟಿ ತಿಳಿಸಿದರು. ರಾಜೀನಾಮೆ ಬಳಿಕ ರಾಜ್ಯಪಾಲರಿಗೆ ದೂರು ನೀಡಿ, ಬಲವಂತವಾಗಿ ತಮ್ಮಿಂದ ರಾಜೀನಾಮೆ ಪಡೆಯಲಾಗಿದೆ ಎಂದು ದೂರುನೀಡಿದ್ದಾರೆ ಎಂದು ಸಿಎಂ ಅಸಮಾಧಾನ ವ್ಯಕ್ತಪಡಿಸಿದರು. ಈ ಬೆಳವಣಿಗೆ ಬೆನ್ನಲ್ಲೇ ತಾವು ಮತ್ತು ಸಚಿವ ಯು.ಟಿ.ಖಾದರ್ ರಾಜ್ಯಪಾಲರನ್ನು ಭೇಟಿಯಾಗಿ ವಸ್ತುಸ್ಥಿತಿ ವಿವರಿಸಿದ್ದೇವೆ, ಕಾನೂನು ರೀತಿಯ ನೀವು ಕ್ರಮ ಕೈಗೊಳ್ಳಿ ಎಂದು ತಿಳಿಸಿದ್ದೇವೆ ಎಂದು ಮುಖ್ಯಮಂತ್ರಿ ನುಡಿದರು.



ಸಿಎಂ ಡಿ.ಕೆ.ಶಿವಕುಮಾರ್ ನವದೆಹಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಮಾಡಿ ನಂತರ ಕರ್ನಾಟಕ ಭವನಕ್ಕೆ ಆಗಮಿಸಿದರು.

# ಬಿಡದಿ ಟೌನ್‌ಶಿಪ್ ಯೋಜನೆ ಜಾರಿ ನಿಲ್ಲದು: ಎಕರೆಗೆ 3 ಕೋಟಿ ರೂ. ಪರಿಹಾರ ನೀಡಲು ಕಾಂಗ್ರೆಸ್ ಸರ್ಕಾರದ ನಿರ್ಧಾರ– ಮುಖ್ಯಮಂತ್ರಿ

**ಬೆಂಗಳೂರು, ಆ.9:** ನನೆಗುದಿಗೆ ಬಿದ್ದಿರುವ ಬಿಡದಿಯ ಉಪನಗರ ಯೋಜನೆ ಮುಂದುವರೆಯಲಿದೆ ಎಂದು ಸ್ಪಷ್ಟಪಡಿಸಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪರಿಹಾರದ ಪ್ರಮಾಣವನ್ನು ಹೆಚ್ಚಿಸುವುದಾಗಿ ಘೋಷಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಸಂದೇಶ ಹಂಚಿಕೊಂಡಿರುವ ಮುಖ್ಯಮಂತ್ರಿಯವರು, ಹಿಂದಿನ ಸರ್ಕಾರ ನಿರ್ಧರಿಸಿದಂತೆ ಬಿಡದಿ ಸುತ್ತ ಮುತ್ತಲಿನ ಭೂಮಿಗಳು ರೆಡ್ ಝೋನ್ ನಲ್ಲೇ ಮುಂದುವರೆಯಲಿವೆ ಎಂದು ಮಹತ್ವದ ಸಂದೇಶ ನೀಡಿದ್ದಾರೆ.

ಬಿಡದಿ ಟೌನ್ ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಪಾದಯಾತ್ರೆ ನಡೆಸುತ್ತಿರುವ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಈ ಘೋಷಣೆ ಮಹತ್ವದ ಪಡೆದುಕೊಂಡಿದೆ. ವಿಡಿಯೋ ಸಂದೇಶದಲ್ಲಿ ಮುಖ್ಯಮಂತ್ರಿಯವರು, ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಬಿಡದಿ ಉಪನಗರ ಯೋಜನೆಗೆ ಮರುಜೀವ ನೀಡಲಾಗುತ್ತಿದೆ. ವಿಶ್ವದರ್ಜೆಯ ರಸ್ತೆಗಳು,



ಮೆಟ್ರೋ ಸಂಪರ್ಕ, ಅತ್ಯಾಧುನಿಕ ಕ್ರೀಡಾಂಗಣ, ಉದ್ಯಾನವನ ಹಾಗೂ ಸುಸಜ್ಜಿತ ವಸತಿ ಒಳಗೊಂಡ ಅತ್ಯಾಧುನಿಕ ಎಐ ಸಿಟಿಯಾಗಿ ಅಭಿವೃದ್ಧಿಪಡಿಸ ಲಾಗುತ್ತಿದೆ ಎಂದು ಹೇಳಿದ್ದಾರೆ.ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಈ ಬೃಹತ್ ಯೋಜನೆ ಬೆಂಗಳೂರು ದಕ್ಷಿಣ ಜಿಲ್ಲೆಯ ಚಿತ್ರಣವನ್ನೇ ಬದಲಿಸಲಿದೆ. ಈ ಸಂದರ್ಭದಲ್ಲಿ ರೈತರ ಹಿತರಕ್ಷಣೆ ನಮ ಪ್ರಮುಖ ಆದ್ಯತೆಯಾಗಿದೆ ಎಂದು ತಿಳಿಸಿದ್ದಾರೆ.

ಹಿಂದಿನ ಸರ್ಕಾರ ಎಕರೆಗೆ ಕೇವಲ 25 ಲಕ್ಷ ರೂಪಾಯಿ ಭೂ ಪರಿಹಾರ ನಿಗದಿಪಡಿಸಿತ್ತು. ನಮ ಸರ್ಕಾರ ಪ್ರತಿ ಎಕರೆಗೆ 3 ಕೋಟಿಗೂ ಹೆಚ್ಚು ಪರಿಹಾರ ನೀಡಲು ತೀರ್ಮಾನಿಸಿದೆ. ಹಣದ ಬದಲಾಗಿ ಭೂಮಿ ಬಯಸುವ ರೈತರಿಗೆ ಶೇ.50 ಅಭಿವೃದ್ಧಿಪಡಿಸಿದ ಜಾಗವನ್ನು ನೀಡಲಾಗುವುದು ಎಂದು ಘೋಷಿಸಿದ್ದಾರೆ.ಈ ಭೂಸ್ವಾಧೀನ ಪ್ರಕ್ರಿಯೆಯು ಸಂಪೂರ್ಣವಾಗಿ ಐಚ್ಛಿಕವಾಗಿದ್ದು, ಯೋಜನೆಗೆ ಜಮೀನು ನೀಡಲು ಇಷ್ಟವಿಲ್ಲದ ಯಾರ ಮೇಲೆಯೂ ಯಾವುದೇ ಒತ್ತಾಯವಿರುವುದಿಲ್ಲ. ಯುವಜನತೆಗೆ ಅಪಾರ ಉದ್ಯೋಗಾವಕಾಶ ಸೃಷ್ಟಿಸಿ, ನಮ ಅನ್ನದಾತರಿಗೆ ಗೌರವಯುತ ಜೀವನ ಒದಗಿಸಲು ನಮ ಸರ್ಕಾರ ಬದ್ಧವಾಗಿದೆ. ಎಲ್ಲರ ಸಹಕಾರವಿರಲಿ ಎಂದು ಮನವಿ ಮಾಡಿದ್ದಾರೆ.

### ಸತ್ಯ ಮುಚ್ಚಿಡಲು ಯಾರಿಂದಲೂ ಸಾಧ್ಯವಿಲ್ಲ: ಸಿಎಂ

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಸತ್ಯವನ್ನು ಮುಚ್ಚಿಡಲು ಯಾರಿಂದಲೂ ಸಾಧ್ಯವಿಲ್ಲ. ಅಧಿವೇಶನದಲ್ಲಿ ಬಂದು ಚರ್ಚೆ ಮಾಡಲಿ ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದರು. ಕೆಪಿಸಿಸಿ ಭಾರತ ಜೋಡೋ ಭವನದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಭಾನುವಾರ ಪ್ರತಿಕ್ರಿಯೆ ನೀಡಿದರು. ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಹಾಗೂ ಬಿಜೆಪಿ ಪಾದಯಾತ್ರೆ ವಿತಾರವಾಗಿ ಕೇಳಿದಾಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಪ್ರತಿಭಟನೆ, ಪಾದಯಾತ್ರೆ ಮಾಡುವ ಹಕ್ಕಿದೆ. ಅವರು ಏನು ಬೇಕಾದರೂ ಮಾಡಲಿ. ಅಧಿವೇಶನದಲ್ಲಿ ಬಂದು ಮಾತನಾಡಲಿ. ಎಲ್ಲೆಲ್ಲಿ ದೂರು ನೀಡುತ್ತಾರೋ ನೀಡಲಿ, ನಾವು ಯಾರಿಗೂ ಬಲವಂತ ಮಾಡುತ್ತಿಲ್ಲ. ಯಾವ ಸಂದರ್ಭದಲ್ಲಿ ಯಾವ ಉತ್ತರ ಕೊಡಬೇಕೋ ಕೊಡುತ್ತೇವೆ ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟವಾಗಿ ಹೇಳಿದರು.

"ರೈತರ ಜಮೀನುಗಳನ್ನು ಕಬಳಿಸುವ ಪ್ರಯತ್ನ ಮುಂದುವರಿದರೆ ರೈತರು ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ. ರೈತರ ಹಕ್ಕು ಮತ್ತು ಜಮೀನಿನ ರಕ್ಷಣೆಗೆ ಬಿಜೆಪಿ ಸದಾ ರೈತರ ಜೊತೆ ನಿಲ್ಲಲಿದೆ," ಎಂದು ಅವರು ಹೇಳಿದರು. ವಿಜಯೇಂದ್ರ ರೈತರನ್ನು ಹೆದರಿಸಿ ಹಾಗೂ ಒತ್ತಡ ಹೇರಿ ಜಮೀನುಗಳನ್ನು ಬಿಡಿಸುವ ಯಾವುದೇ ಪ್ರಯತ್ನವನ್ನು ಬಿಜೆಪಿ ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಜೆಡಿಎಸ್ ನಡೆಸುತ್ತಿರುವ ಪಾದಯಾತ್ರಗೆ ನಮ್ಮ ವಿಪಕ್ಷ ನಾಯಕರಾದ ಆರ್. ಅಶೋಕ್ ಹಾಗೂ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಭಾಗಿಯಾಗಿದ್ದಾರೆ ಈ ಹೋರಾಟವನ್ನು ಆರಂಭಿಸಿರುವುದು ರೈತರೇ.

# ಬಿಡದಿ ಟೌನ್‌ಶಿಪ್ ಯೋಜನೆ ಜಾರಿಗೆ ಅವಕಾಶ ನೀಡೆವು: ಅಶೋಕ್ ಘೋಷಣೆ



ಬಿಡದಿ, ಆ.9: ಬಿಡದಿ ಟೌನ್‌ಶಿಪ್ ಯೋಜನೆ ಜಾರಿ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿದೆ. ಬಿಜೆಪಿ–ಜೆಡಿಎಸ್ ಒಂದಾಗಿ ಹೋರಾಟ ಮಾಡುವ ಮೂಲಕ ಯೋಜನೆಯನ್ನು ಸ್ಥಗಿತಗೊಳಿಸಲಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಬಿಡದಿ ಟೌನ್‌ಶಿಪ್ ಯೋಜನೆ ವಿರುದ್ಧ ಭಾನುವಾರ ಆರಂಭವಾದ ಮೂರು ದಿನಗಳ 38 ಕಿ.ಮೀ. ದೂರದ ಜೆಡಿಎಸ್–ಬಿಜೆಪಿ ಬೃಹತ್ ಪಾದಯಾತ್ರೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಬಿಡದಿ ಟೌನ್‌ಶಿಪ್ ಯೋಜನೆಯಿಂದ 35,000 ಕೋಟಿ ರೂ. ವ್ಯವಹಾರ ಮಾಡುತ್ತಿದೆ. ಇಷ್ಟು ಹಣವನ್ನು ಲೂಟಿ ಮಾಡಲು ರೈತರ ಒಪ್ಪಿಗೆ ಇಲ್ಲದೆ ಫಲವತ್ತಾದ ಭೂಮಿಯನ್ನು ಸ್ವಾಧೀನ ಮಾಡಲಾಗುತ್ತಿದೆ. ಕಾಂಗ್ರೆಸ್ ವಿರೋಧ ಪಕ್ಷದಲ್ಲಿದ್ದಾಗ ಕಾಗೋಡು ತಿಮ್ಮಪ್ಪ ಅವರ ಅಧ್ಯಕ್ಷತೆಯಲ್ಲಿ ಸತ್ಯಶೋಧನಾ ಸಮಿತಿ ರಚಿಸಿ, ಬಿಡದಿಯಲ್ಲಿ ಎಷ್ಟು ಮರ, ಹಸು, ಕುರಿ ಎಂದು ಲೆಕ್ಕ ನೀಡಲಾಗಿತ್ತು. ಈ ಯೋಜನೆ ಜಾರಿಗೊಳಿಸಿದರೆ ಸರ್ಕಾರಕ್ಕೆ ಪಾಪ ಸುತ್ತಿಕೊಳ್ಳುತ್ತದೆ ಎಂದು ಸಮಿತಿ ಹೇಳಿತ್ತು. ಈ ಸಮಿತಿಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಸದಸ್ಯರಾಗಿ ಕೆಲಸ ಮಾಡಿದ್ದರು. ಯೋಜನೆ ಜಾರಿ ಮಾಡಬಾರದು ಎಂದು ಸಮಿತಿಯ 22 ಸದಸ್ಯ ಕಾಂಗ್ರೆಸ್ ಶಾಸಕರು ಸಹಿ ಹಾಕಿದ್ದರು ಎಂದರು.

ಈಗ ಯಾವ ನೈತಿಕತೆ ಇಟ್ಟುಕೊಂಡು ಕಾಂಗ್ರೆಸ್ ಈ ಯೋಜನೆ ಜಾರಿ ಮಾಡುತ್ತಿದೆ ಇದು ಪಾಪದ ಯಾತ್ರೆಯಲ್ಲ. ಕಾಂಗ್ರೆಸ್‌ನ ಪಾಪದ ಯಾತ್ರೆಗೆ ನಾವು ಕಡಿವಾಣ ಹಾಕಲು ಈ ಯಾತ್ರೆ ಮಾಡುತ್ತಿದ್ದೇವೆ. ಈ ತಪ್ಪಿಗೆ ಕಾಂಗ್ರೆಸ್ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿದೆ. ಕಾಂಗ್ರೆಸ್ ಸರ್ಕಾರ ರಚಿಸಿದ ಸಮಿತಿ ಯೋಜನೆ ಜಾರಿ ಮಾಡಬಹುದು ಎಂದೇ ವರದಿ ನೀಡುವುದು ಖಚಿತ. ಇದರಲ್ಲಿ ಇರುವವರೆಲ್ಲರೂ ಪೇಮೆಂಟ್ ಗಿರಾಕಿಗಳು. ಸಿಎಂ ಡಿ.ಕೆ.ಶಿವಕುಮಾರ್ ಅವರ ಅಧಿಕಾರದ ಮದ ಹಾಗೂ ಅಹಂಕಾರವನ್ನು ಮುಂದಿನ ಚುನಾವಣೆಯಲ್ಲಿ ಜನರು ಇಳಿಸಲಿದ್ದಾರೆ. ವಿಧಾನಸಭೆ ಅಧಿವೇಶನದಲ್ಲಿ ಈ ಬಗ್ಗೆ ಹೋರಾಟ ಮಾಡಲಾಗುವುದು. ಜೊತೆಗೆ ಜೆಡಿಎಸ್ನೊಂದಿಗೆ ಫ್ರೀಡಂ ಪಾರ್ಕ್‌ನಲ್ಲೂ ಹೋರಾಟ ಮಾಡಲು ತೀರ್ಮಾನಿಸಲಾಗುವುದು ಎಂದರು.


ಬಿಡದಿ ಟೌನ್‌ಶಿಪ್ ಯೋಜನೆಯು ಕಾಂಗ್ರೆಸ್ ಸರ್ಕಾರದ ಶವಪೆಟ್ಟಿಗೆಗೆ ಕೊನೆಯ ಮೊಳೆ ಯಾಗಲಿದೆ. ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಇಳಿಸಲು ಯಾವ್ಯಾವುದೋ ತಂತ್ರಗಳನ್ನು ಮಾಡಿದ್ದರು. ಈಗ ಸಚಿವ ಸಂಪುಟದಲ್ಲಿ ಗೊಂದಲ ಉಂಟಾಗಿದೆ. ನಮ್ಮ ಹೋರಾಟದ ಮೂಲಕ ಈ ಯೋಜನೆಯನ್ನು ಸ್ಥಗಿತಗೊಳಿಸುತ್ತೇವೆ ಎಂದರು.

# ಆ.13ರಿಂದ ವಿಧಾನಸಭೆ ಅಧಿವೇಶನ: ಹಂಗಾಮಿ ಸಭಾಧ್ಯಕ್ಷರಾಗಿ ಟಿ.ಬಿ.ಜಯಚಂದ್ರ ಇಂದಿನಿಂದ ಕರ್ತವ್ಯ ನಿರ್ವಹಣೆ

**ಬೆಂಗಳೂರು, ಆ.9:** ಹಿರಿಯ ಶಾಸಕ ಹಾಗೂ ಮಾಜಿ ಸಚಿವ ಟಿಬಿ ಜಯಚಂದ್ರ ಅವರು ಸೋಮವಾರದಿಂದ ಹಂಗಾಮಿ ವಿಧಾನಸಭಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಆಗಸ್ಟ್ 13ರಿಂದ 27ರವರೆಗೆ 10 ದಿನಗಳ ಕಾಲ ನಡೆಯಲಿರುವ ಮಳೆಗಾಲದ ವಿಧಾನ ಸಭೆ ಅಧಿವೇಶನವನ್ನು ಅವರು ನಡೆಸಿಕೊಡಲಿದ್ದು, ಸೋಮವಾರ ವಿಧಾನಸಭಾ ಅಧ್ಯಕ್ಷರ ಕಚೇರಿಗೆ ತೆರಳಿ ಕಾರ್ಯ ಆರಂಭಿಸಲಿದ್ದಾರೆ.

ಅಧಿವೇಶನದ ಮೊದಲ ದಿನವಾದ ಗುರುವಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಡಿ. ಸುಧಾಕರ್, ಮಾಜಿ ಪ್ರಧಾನಿ ದೇವೇಗೌಡ ಅವರ ಪತ್ನಿ ಚೆನ್ನಮ್ಮ ಸೇರಿದಂತೆ ಇತ್ತೀಚಿಗೆ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಲಾಗುವುದು. ಶುಕ್ರವಾರದಿಂದ ನಿಗದಿತ ವೇಳಾಪಟ್ಟಿಯಂತೆ ಕಲಾಪ ನಡೆಯಲಿದೆ.

ಮುಖ್ಯಮಂತ್ರಿಯಾಗಿ ಡಿ.ಕೆ ಶಿವಕುಮಾರ್ ಅವರು ಪ್ರತಿಜ್ಞಾವಿಧಿ ಸ್ವೀಕರಿಸಿದ ಸಂದರ್ಭದಲ್ಲಿ ಅವರೊಂದಿಗೆ ಡಾ.ಜಿ.ಪರಮೇಶ್ವರ್ ಅವರು ಉಪಮುಖ್ಯಮಂತ್ರಿಯಾಗಿ ಹಾಗೂ 12 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಅವರಿಗೆ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ. ಆದರೆ ಕಳೆದ ಸೋಮವಾರ ನಡೆದ ಮೊದಲ ಸಂಪುಟ ವಿಸ್ತರಣೆಯಲ್ಲಿ ಸಚಿವರಾದ 19 ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಬೇಕಿದ್ದು, ಅಧಿವೇಶನ ಆರಂಭಕ್ಕೆ ಮುನ್ನ ಸಚಿವರಿಗೆ ಖಾತೆಗಳನ್ನು ಹಂಚುವ ಸಂಭವವಿದೆ.



ವಿಧಾನಮಂಡಲ ಅಧಿವೇಶನದ ಹಿನ್ನೆಲೆಯಲ್ಲಿ ಹಂಗಾಮಿ ವಿಧಾನಸಭಾಧ್ಯಕ್ಷರಾದ ಟಿ.ಬಿ ಜಯಚಂದ್ರ ಅವರು ರಾಜ್ಯಪಾಲರನ್ನು ಭೇಟಿಮಾಡಿ ಚರ್ಚೆ ನಡೆಸಿದರು

ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳು, ವಿಧೇಯಕಗಳ ಮಂಡನೆ, ನೂತನ ವಿಧಾನಸಭಾ ಅಧ್ಯಕ್ಷರ ನೇಮಕಕ್ಕೆ ಚುನಾವಣೆ ಪ್ರಸ್ತಾವ, ಅರ್ಧಗಂಟೆ ಕಾಲಾವಧಿ ಚರ್ಚೆ, ಶೂನ್ಯ ವೇಳೆ, ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪಕಾಲಾವಧಿ ಚರ್ಚೆ, ಅಧಿಕೃತ ನಿರ್ಣಯಗಳು, ವರದಿಗಳನ್ನು ಒಪ್ಪಿಸುವುದು ಸೇರಿದಂತೆ ಕಾರ್ಯಕಲಾಪಗಳ ಪಟ್ಟಿ ಸಿದ್ಧಪಡಿಸಲು ಜಯಚಂದ್ರ ಅವರು ಗಮನ .ವಹಿಸಲಿದ್ದಾರೆ. ಮುಂಗಾರು ಮಳೆ ಸಕಾಲಕ್ಕೆ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿ, ತಮಿಳುನಾಡಿಗೆ ಕಾವೇರಿ ನೀರು ಹರಿಸುವಿಕೆ, ಬಿಡದಿ ಟೌನ್‌ಶಿಪ್ ವಿಷಯಗಳು ಸದನಗಳಲ್ಲಿ ತೀವ್ರ ಚರ್ಚೆಯಾಗುವ ನಿರೀಕ್ಷೆಗಳಿವೆ. 16ನೇ ವಿಧಾನಸಭೆಯ ಎಂಟನೇ ಅಧಿವೇಶನವನ್ನು ಯಶಸ್ವಿಯಾಗಿ ನಡೆಸಲು ಸೂಕ್ತ ಸಿದ್ಧತೆ ಸೋಮವಾರ ಆರಂಭಿಸುವುದಾಗಿ ಟಿ.ಬಿ ಜಯಚಂದ್ರ ಅವರು ತಿಳಿಸಿದ್ದಾರೆ.

1978ರಲ್ಲಿ ಮೊದಲ ಬಾರಿಗೆ ಶಾಸಕರಾದ ಅವರು, 7 ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿ, ವಿಧಾನಸಭೆಯ ಉಪನಾಯಕರಾಗಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಯಾಗಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿದ್ದಾರೆ.

# ಬಿಡದಿ ಟೌನ್‌ಶಿಪ್ ವಿರೋಧಿ ಪಾದಯಾತ್ರೆ ರೈತ ಸಮಸ್ಯೆಗಳಿಗೆ ಪರಿಹಾರದ ದಿಕ್ಸೂಚಿ: ಎಚ್.ಡಿ. ಕುಮಾರಸ್ವಾಮಿ

**ಭೈರಮಂಗಲ, ಆ.9:** ಬೈರಮಂಗಲದಿಂದ ಕೈಗೊಂಡಿರುವ ಬಿಡದಿ ಟೌನ್‌ಶಿಪ್ ವಿರೋಧಿಸುವ ಪಾದಯಾತ್ರೆಯು ರೈತಪರ ಸಮಸ್ಯೆಗಳಿಗೆ ಪರಿಹಾರ ದೊರಕಿಸುವ ದಿಕ್ಸೂಚಿಯಾಗಿದೆ ಹಾಗೂ ರಾಜ್ಯದ ಕಾಂಗ್ರೆಸ್ ಸರಕಾರಕ್ಕೆ ಮರಣಶಾಸನ ಆಗಲಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಎಚ್ಚರಿಕೆ ನೀಡಿದರು.

ಬಿಡದಿಯ ಭೈರಮಂಗಲದಲ್ಲಿ ಟೌನ್‌ಶಿಪ್ ವಿರೋಧಿ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಸರ್ಕಾರ ಕಿತ್ತೊಗೆಯಲು ಈ ಪಾದಯಾತ್ರೆಯ ಮೂಲಕ ಇಲ್ಲಿನ ರೈತರು ಅಡಿಪಾಯ ಹಾಕಿದ್ದಾರೆ ಎಂದು ಹೇಳಿದರು.

ರಾಜ್ಯದ ಮುಖ್ಯಮಂತ್ರಿ ಈ ಯೋಜನೆ ವಿಷಯದಲ್ಲಿ ಅತಿಯಾದ ಕಾಳಜಿ ವಹಿಸುತ್ತಿದ್ದಾರೆ. ಯಾರಿಗೋ ಲಾಭ ಮಾಡಿಕೊಡಲು ಅವರು ಪ್ರಯತ್ನ ಮಾಡುತ್ತಿದ್ದಾರೆ. ಇದುರೆಗೂ ಒಂದು ಎಕರೆಗೆ 2 ಕೋಟಿ ಕೊಡುವುದಾಗಿ ಹೇಳುತ್ತಿದ್ದವರು ಇವತ್ತು ಬೆಳಗ್ಗೆ ವೀಡಿಯೋ ಮಾಡಿ ಒಂದು ಎಕರೆಗೆ 3 ಕೋಟಿ ಕೊಡುವುದಾಗಿ ಹೇಳಿದ್ದಾರೆ. ಇದಕ್ಕೆ ನೀವು ಮರುಳಾಗಬೇಡಿ. ಈ ಮುಖ್ಯಮಂತ್ರಿ ನಿಮಗೆ ಮೋಸ ಮಾಡುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ಜನರನ್ನು ಎಚ್ಚರಿಸಿದರು.



ನೈಸ್ (ಬಿಎಂಐಸಿ) ಯೋಜನೆಗೆ ಭೂಸ್ವಾಧೀನ ಮಾಡಿಕೊಂಡು 30 ವರ್ಷ ಕಳೆದರೂ ಭೂಮಿ. ಕಳೆದುಕೊಂಡವರಿಗೆ ಪರಿಹಾರ ಕೊಟ್ಟಿಲ್ಲ, ನಿವೇಶನವನ್ನೂ ಕೊಟ್ಟಿಲ್ಲ ಎಂದು ಆರೋಪಿಸಿದ ಸಚಿವರು; ಬಿಡದಿಯಲ್ಲಿ ಭೂಸ್ವಾದೀನ ಮಾಡಿಕೊಳ್ಳುವ ಜಮೀನಿಗೆ ಒಂದು ಎಕರೆಗೆ 3 ಕೋಟಿ ರೂ. ಕೊಡುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಯಾವ ಆಧಾರದ ಮೇಲೆ ಹೇಳಿದ್ದಾರೆ. ಇದೇನು ಚೌಕಾಸಿ ವ್ಯಾಪಾರವೇ ಎಂದು ಖಾರವಾಗಿ ಪ್ರಶ್ನಿಸಿದರು.

ಬಿಡದಿ ಟೌನ್‌ಶಿಪ್ ಯೋಜನೆ ಹಾಗೂ ಬ್ರಹ್ಮಾಂಡ ಭ್ರಷ್ಟಾಚಾರದ ನೈಸ್ ಯೋಜನೆಗಳು ಎರಡೂ ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆಯೇ ಎಂದು ಸಚಿವರು ದೂರಿದರು.

2006–07ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ, ಆನಂತರ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಬಿಡದಿ ಯೋಜನೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿರಲಿಲ್ಲ. ಕಾಂಗ್ರೆಸ್ ಸರ್ಕಾರವೇ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಿದೆ. ಮುಖ್ಯಮಂತ್ರಿಯವರ ಇಂದಿನ ಸಂದೇಶದಲ್ಲಿ ವಿದೇಶಗಳಂತೆ ರಸ್ತೆ, ಬೃಹತ್ ಕಾರ್ಖಾನೆ, ಉದ್ಯೋಗ ನಿರ್ಮಿಸಿ ಯುವಕರಿಗೆ ಉದ್ಯೋಗ ಕೊಡುವ ಭರವಸೆ ನೀಡಿದ್ದಾರೆ. ಇದನ್ನು ನಂಬಬೇಕೇ? ಹೀಗೆ ಹೇಳುತ್ತಿರುವ ಇವರು ಕನಕಪುರದಲ್ಲಿ ದಲಿತರ ಭೂಮಿಯನ್ನು ಲೂಟಿ ಹೊಡೆದಿದ್ದಾರೆ ಎಂದು ನೇರ ಆರೋಪ ಮಾಡಿದರು.

ಬಿಡದಿ ಟೌನ್‌ಶಿಪ್ ಭಾಗದಲ್ಲಿ 6 ಲಕ್ಷ ಲೀಟರ್ ಹಾಲು ಉತ್ಪಾದಿಸಲಾಗುತ್ತಿದೆ. ಜೊತೆಗೆ ರೇಷ್ಮೆ, ಮಾವು, ಅಡಿಕೆ, ತೆಂಗು ಎಲ್ಲವೂ ಇದೆ. ಇಂತಹ ಭೂಮಿಯನ್ನು ಅವರೇ ನೀಡಿದ್ದ ಸತ್ಯಶೋಧನಾ ಸಮಿತಿ ವರದಿಗೆ ವಿರುದ್ಧವಾಗಿ ಟೌನ್‌ಶಿಪ್ ಮಾಡಲು ಹೊರಟಿದ್ದಾರೆ. ಪಿತ್ರಾರ್ಜಿತ ಆಸ್ತಿ ಹಾಗೂ ಭೂಮಿಯನ್ನೇ ನಂಬಿ ಬದುಕುತ್ತಿರುವ ರೈತರ ಪರವಾಗಿ ಬಿಜೆಪಿ ಮತ್ತು ಜೆಡಿಎಸ್ ಹೋರಾಟ ನಡೆಸುತ್ತಿವೆ. ಎರಡೂ ಪಕ್ಷಗಳು ಪಾದಯಾತ್ರೆಯಲ್ಲಿ ಪಾಲ್ಗೊಂಡು ರೈತರಿಗೆ ಬೆಂಬಲ ವ್ಯಕ್ತಪಡಿಸಿವೆ ಎಂದರು ಅವರು.

ಸರ್ಕಾರದ ಕರಾರು ಭೂಮಿಗೆ 15 ವರ್ಷಗಳ ಹಿಂದೆ ಒಂದು ಎಕರೆಗೆ 12 ಕೋಟಿ ರೂ. ನಿಗದಿಪಡಿಸಿ 948 ಕೋಟಿ ರೂ. ಪಾವತಿಸುವಂತೆ ಈಗಲ್‌ಟನ್‌ಗೆ ಸೂಚಿಸಲಾಗಿತ್ತು. ಈಗ ನಿವೃತ್ತ ನ್ಯಾಯಾಧೀಶರ ನೇತೃತ್ವದ ಸಮಿತಿಯನ್ನು ನೇಮಕ ಮಾಡಿದೆ ಎಂದು ಅವರು ಟೀಕಿಸಿದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಬಿಡದಿ ಮಣ್ಣಿನಲ್ಲಿ ರೈತರ ಭಾವನೆ ಅಡಗಿದೆ. ಅವರ ಭಾವನೆಗಳಿಗೆ ಬೆಲೆ ನೀಡುವ ನಿಟ್ಟಿನಲ್ಲಿ ಈ ಪಾದಯಾತ್ರೆಗೆ ಕೈಗೊಂಡಿದ್ದೇವೆ. ಜೊತೆಗೆ ಕಾನೂನಾತ್ಮಕ ಹೋರಾಟವನ್ನೂ ಮಾಡುತ್ತಿದ್ದೇವೆ. ರೈತರ ಅಸ್ತಿತ್ವವನ್ನು ಉಳಿಸಲು ನಮ್ಮ ಹೋರಾಟ ಮತ್ತು ಸರ್ಕಾರ ಬಿಡದಿ ಟೌನ್‌ಶಿಪ್ ನಿಲ್ಲಿಸುವವರೆಗೆ ನಮ್ಮ ಹೋರಾಟ ನಡೆಯಲಿದೆ ಎಂದು ರೈತರಿಗೆ ಭರವಸೆ ನೀಡಿದರು.

# ಭಾರತ-ಅಮೆರಿಕ ಕಾರ್ಯತಂತ್ರದ ಪಾಲುದಾರಿಕೆ ಪ್ರಧಾನಿ ಮೋದಿ, ಜೆಡಿ ವ್ಯಾನ್ಸ್ ಪರಿಶೀಲನೆ



**ನವದೆಹಲಿ, ಆ.9:** ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅವರಿಂದ ದೂರವಾಣಿ ಕರೆ ಸ್ವೀಕರಿಸಿದರು, ಈ ಸಂದರ್ಭದಲ್ಲಿ ಇಬ್ಬರು ನಾಯಕರು ಭಾರತ-ಅಮೆರಿಕ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯ ಪ್ರಗತಿಯನ್ನು ಪರಿಶೀಲಿಸಿದರು ಮತ್ತು ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಬಗ್ಗೆ ಚರ್ಚಿಸಿದರು. ಸಂಭಾಷಣೆಯ ಸಮಯದಲ್ಲಿ, ಪ್ರಧಾನಿ ಮೋದಿ ಮತ್ತು ಉಪಾಧ್ಯಕ್ಷ ವ್ಯಾನ್ಸ್ ಭಾರತ ಮತ್ತು ಅಮೆರಿಕ ನಡುವಿನ ಉನ್ನತ ಮಟ್ಟದ ನಿಶ್ಚಿತಾರ್ಥಗಳಲ್ಲಿನ ನಿರಂತರ ಆವೇಗವನ್ನು ಪರಿಶೀಲಿಸಿದರು ಮತ್ತು ಹಲವಾರು ಕಾರ್ಯತಂತ್ರದ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಬಲಪಡಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಚರ್ಚೆಗಳು ವ್ಯಾಪಾರ, ರಕ್ಷಣೆ, ನಿರ್ಣಾಯಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳು, ಇಂಧನ ಭದ್ರತೆ ಮತ್ತು ನಿರ್ಣಾಯಕ ಖನಿಜಗಳನ್ನು ಒಳಗೊಂಡಿವೆ, ಇಬ್ಬರೂ ನಾಯಕರು ಈ ಕ್ಷೇತ್ರಗಳಲ್ಲಿ ಸಹಕಾರವನ್ನು ಆಳಗೊಳಿಸುವ ಮಹತ್ವವನ್ನು ಒತ್ತಿ ಹೇಳಿದರು.

ಪ್ರಧಾನಿ ಮತ್ತು ಅಮೆರಿಕ ಉಪಾಧ್ಯಕ್ಷರು ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಆರ್ಥಿಕ ಸಂಬಂಧಗಳು, ರಕ್ಷಣೆ ಮತ್ತು ಭದ್ರತೆ, ತಂತ್ರಜ್ಞಾನ, ಇಂಧನ ಮತ್ತು ನಿರ್ಣಾಯಕ ಪೂರೈಕೆ ಸರಪಳಿಗಳನ್ನು ಒಳಗೊಂಡ ಸಹಕಾರದೊಂದಿಗೆ ತಮ್ಮ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸಲು ಭಾರತ ಮತ್ತು ಅಮೆರಿಕ ನಿರಂತರ ಪ್ರಯತ್ನಗಳ ನಡುವೆ ಈ ಕರೆ ಬಂದಿದೆ.

# ಜೆನ್ ಝಿ ವಿದ್ಯಾರ್ಥಿಗಳನ್ನು ದಿಕ್ಕುತಪ್ಪಿಸಲು ಯತ್ನಿಸಿದ್ದಕ್ಕೆ ರಾಜೀನಾಮೆ: ಧರ್ಮೇಂದ್ರ ಪ್ರಧಾನ್



**ಭುವನೇಶ್ವರ:** ಇಂದಿನ ಯುವ ಪೀಳಿಗೆ ಜೆನ್ ಝಿ ವಿದ್ಯಾರ್ಥಿಗಳನ್ನು ಕೆಲವರು ದಿಕ್ಕು ತಪ್ಪಿಸಲು ಯತ್ನಿಸಿದ ಕಾರಣಕ್ಕಾಗಿ ತಾವು ಹುದ್ದೆಗೆ ರಾಜೀನಾಮೆ ನೀಡಿರುವುದಾಗಿ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ನೀಟ್ ಪರೀಕ್ಷೆ ಅಕ್ರಮ ಹಾಗೂ ಪತ್ರಿಕೆ ಸೋರಿಕೆ ಪ್ರಕರಣದ ಬೆನ್ನಲ್ಲೇ ತಮ್ಮ ಕೇಂದ್ರ ಶಿಕ್ಷಣ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಹಿರಿಯ ಬಿಜೆಪಿ ನಾಯಕ ಧರ್ಮೇಂದ್ರ ಪ್ರಧಾನ್ ಕೊನೆಗೂ ತಮ್ಮ ಮೌನ ಮುರಿದಿದ್ದಾರೆ.

ಒಡಿಶಾದ ಭುವನೇಶ್ವರದಲ್ಲಿರುವ ಜಿ.ಎಂ. ವಿಶ್ವವಿದ್ಯಾಲಯದಲ್ಲಿ ಶನಿವಾರ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಉದ್ದೇಶಿಸಿ ಮಾತನಾಡಿದ ಅವರು, ತಮಗೆ ಅಧಿಕಾರ ಅಥವಾ ಸಚಿವ ಸ್ಥಾನ ಎಂದಿಗೂ ಮುಖ್ಯವಾಗಿರಲಿಲ್ಲ ಎಂದು ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಳಿ ತಾವೇ ವೈಯಕ್ತಿಕವಾಗಿ ತೆರಳಿ ಕೇಂದ್ರ ಸಚಿವ ಸಂಪುಟದಿಂದ ರಾಜೀನಾಮೆ ನೀಡುವುದಾಗಿ ಪ್ರಸ್ತಾಪಿಸಿದ್ದಾಗಿ ಪ್ರಧಾನ್ ತಿಳಿಸಿದರು. ನನಗೆ ಸಚಿವ ಸ್ಥಾನ ಮುಖ್ಯವಾಗಿರಲಿಲ್ಲ. ಭಾರತವನ್ನು ವಿಶ್ವಗುರು ಮಾಡುವುದೇ ನನ್ನ ಪ್ರಮುಖ ಆದ್ಯತೆ ಎಂದರು.

ಜೆನ್ ಝಿಯುವಕರು ನಮ್ಮ ಮಕ್ಕಳಿದ್ದಂತೆ. ಭಾರತದಲ್ಲಿ ಪ್ರತಿ ವರ್ಷ ಸುಮಾರು ಎರಡು ಕೋಟಿ ಮಕ್ಕಳು ಜನ್ಮತಾಳುತ್ತಾರೆ. ಕಳೆದ 10 ವರ್ಷಗಳಲ್ಲಿ 20 ಕೋಟಿ ಮಕ್ಕಳು ಹುಟ್ಟಿದ್ದಾರೆ. ಅವರಿಗೆ ಸ್ವಂತ ಆಕಾಂಕ್ಷೆಗಳಿವೆ. ಆದರೆ, ಕೆಲವರು ಈ ಯುವಕರನ್ನು ದಿಕ್ಕು ತಪ್ಪಿಸಲು ಯತ್ನಿಸಿದರು ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ರೇರಾಖೋಲ್ನಲ್ಲಿ ನಡೆದ ಮತ್ತೊಂದು ಸಭೆಯಲ್ಲಿ ಮಾತನಾಡಿದ ಅವರು, ಬಿಜು ಜನತಾ ದಳ ಕಾರ್ಯಕರ್ತರು ತಮಗೆ ನಡೆಸಿದ ಪ್ರತಿಭಟನೆ ಹಾಗೂ ವಾಪಸ್ ಹೋಗಿ ಎಂಬ ಘೋಷಣೆಗಳಿಗೆ ತಾವು ವಿಚಲಿತರಾಗುವುದಿಲ್ಲ ಎಂದು ಮಾಜಿ ಸಿಎಂ ನವೀನ್ ಪಟ್ನಾಯಕ್ ಅವರಿಗೆ ತಿರುಗೇಟು ನೀಡಿದರು.

ಜುಲೈ 25 ರಂದು ದೆಹಲಿಯ ಜಂತರ್ ಮಂತರ್ನಲ್ಲಿ ನಡೆದ ವಿದ್ಯಾರ್ಥಿ ಸಂಘಟನೆಗಳ ತೀವ್ರ ಪ್ರತಿಭಟನೆಯ ನಂತರ ಧರ್ಮೇಂದ್ರ ಪ್ರಧಾನ್ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸದ್ಯ ಸಂಸತ್ತಿನಲ್ಲಿ ಸಂಬಲ್ಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅವರು, ಶೈಕ್ಷಣಿಕ ಕ್ಷೇತ್ರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು ಮುಖ್ಯ ಎಂದು ಪ್ರತಿಪಾದಿಸಿದ್ದಾರೆ.

# ವಿದ್ಯಾರ್ಥಿಗಳ ಹೋರಾಟ, ವ್ಯವಸ್ಥಿತ ವೈಫಲ್ಯ ಬಹಿರಂಗ: ರಾಹುಲ್



**ನವದೆಹಲಿ, ಆ.9:** ಕಾಂಗ್ರೆಸ್ ನಾಯಕ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾನುವಾರ ವಿದ್ಯಾರ್ಥಿಗಳು ವರ್ಷಗಳ ತಯಾರಿ ಮತ್ತು ಆರ್ಥಿಕ ತ್ಯಾಗದ ನಂತರ ಎದುರಿಸುತ್ತಿರುವ ಕಷ್ಟಗಳು ಯುವಜನರ ಬದಲು ವ್ಯವಸ್ಥೆಯ ವೈಫಲ್ಯ ಎಂದು ಹೇಳಿದ್ದಾರೆ ಮತ್ತು ಸರ್ಕಾರವು ಅವರ ದುಃಸ್ಥಿತಿಗೆ ಜವಾಬ್ದಾರಿಯನ್ನು ಸ್ವೀಕರಿಸಲು ನಿರಾಕರಿಸುತ್ತಿದೆ ಎಂದು ಆರೋಪಿಸಿದ್ದಾರೆ. ಪ್ರಯಾಗ್ರಾಜ್ನಲ್ಲಿ ವಿದ್ಯಾರ್ಥಿಯೊಬ್ಬರೊಂದಿಗಿನ ತಮ್ಮ ಸಂವಾದವನ್ನು ಗಾಂಧಿ ನೆನಪಿಸಿಕೊಂಡರು, ಅವರು "ಅಬ್ ಮೇರೆ ಪಾಸ್ ಕೋಯಿ ರಾಸ್ತಾ ನಹಿ ಬಚಾ" (ಈಗ ನನಗೆ ಬೇರೆ ಆಯ್ಕೆ ಇಲ್ಲ) ಎಂದು ಹೇಳಿದರು. ವಿದ್ಯಾರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ವರ್ಷಗಳ ಕಾಲ ಕಳೆದಿದ್ದಾಗ, ಅವನ ಕುಟುಂಬವು ತನ್ನ ಭವಿಷ್ಯವನ್ನು ಭದ್ರಪಡಿಸಿಕೊಳ್ಳುವ ಭರವಸೆಯಲ್ಲಿ ಭೂಮಿಯನ್ನು ಮಾರಿ ಸಾಲಗಳನ್ನು ಪಡೆದಿತ್ತು, ಆದರೆ ಅಂತಿಮವಾಗಿ ಏನೂ ಇಲ್ಲದೆ ಉಳಿದಿದ್ದನು ಎಂದು ಗಾಂಧಿ ಹೇಳಿದರು. "ಇದು ಅವನ ವೈಫಲ್ಯವಲ್ಲ. ಇದು ಅವನ ಕಠಿಣ ಪರಿಶ್ರಮಕ್ಕೆ ನ್ಯಾಯಯುತ ಮೌಲ್ಯವನ್ನು ನೀಡಲು ನಿರಾಕರಿಸಿದ ವ್ಯವಸ್ಥೆಯ ವೈಫಲ್ಯ" ಎಂದು ಗಾಂಧಿ ಹೇಳಿದರು.

ಕಾಂಗ್ರೆಸ್ ನಾಯಕರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಟೀಕಿಸಿದರು, ವಿದ್ಯಾರ್ಥಿಗಳು ಎತ್ತಿರುವ ಕಳವಳಗಳು ಮತ್ತು ಸರ್ಕಾರ ಪ್ರತಿಭಟನೆಗಳನ್ನು ನಿರ್ವಹಿಸಿದ ರೀತಿಗೆ ಸಂಬಂಧಿಸಿದಂತೆ ಅವರಿಂದ ಯಾವುದೇ ಪ್ರತಿಕ್ರಿಯೆ ಇಲ್ಲದೆ 13 ದಿನಗಳು ಕಳೆದಿವೆ ಎಂದು ಆರೋಪಿಸಿದರು. "ಹದಿಮೂರು ದಿನಗಳು ಕಳೆದಿವೆ - ಗೃಹ ಸಚಿವ ಅಮಿತ್ ಶಾ ಅವರಿಂದ ಒಂದೇ ಒಂದು ಮಾತು ಬಂದಿಲ್ಲ. ಕ್ಷಮೆಯಾಚಿಸುವ ಬದಲು, ಮೋದಿ ಜಿ ಕ್ಷಮೆಯಾಚಿಸುತ್ತಿದ್ದಾರೆ" ಎಂದು ಗಾಂಧಿ ಪ್ರಧಾನಿ ನರೇಂದ್ರ ಮೋದಿಯವರನ್ನು ಉಲ್ಲೇಖಿಸಿ ಹೇಳಿದರು. ರಾಷ್ಟ್ರ ರಾಜಧಾನಿಯಲ್ಲಿ ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಮೇಲೆ ಬಲಪ್ರಯೋಗ ಮಾಡಲಾಗಿದೆ ಎಂದು ಗಾಂಧಿ ಆರೋಪಿಸಿದರು ಮತ್ತು ಈ ಕ್ರಮದ ಬಗ್ಗೆ ಗೃಹ ಸಚಿವರ ಮೌನವನ್ನು ಪ್ರಶ್ನಿಸಿದರು. "ಅಮಿತ್ ಶಾ, ನಾವು ಹೊಣೆಗಾರಿಕೆಯನ್ನು ಬೇಡುವುದನ್ನು ನಿಲ್ಲಿಸುತ್ತೇವೆ ಎಂದು ಭಾವಿಸಬೇಡಿ. ರಾಜಧಾನಿಯ ಬೀದಿಗಳಲ್ಲಿ ಮಕ್ಕಳ ಮೇಲೆ ಲಾಠಿ ಮತ್ತು ಗುಂಡುಗಳನ್ನು ಬಳಸಲಾಗಿದೆ - ಮತ್ತು ನೀವು ಒಂದು ಮಾತನ್ನೂ ಹೇಳಲಿಲ್ಲ" ಎಂದು ಅವರು ಹೇಳಿದರು. "ಇಂದು ಅಥವಾ ನಾಳೆ, ನೀವು ಈ ಅಪರಾಧಕ್ಕೆ ಉತ್ತರಿಸಬೇಕಾಗುತ್ತದೆ" ಎಂದು ಗಾಂಧಿ ಹೇಳಿದರು. ಪರೀಕ್ಷೆಗೆ ಸಂಬಂಧಿಸಿದ ದೂರುಗಳು ಮತ್ತು ವಿದ್ಯಾರ್ಥಿಗಳ ಪ್ರತಿಭಟನೆಗಳ ಕುರಿತು ನಿರಂತರ ರಾಜಕೀಯ ಉದ್ವಿಗ್ನತೆಯ ನಡುವೆ ಅವರ ಹೇಳಿಕೆಗಳು ಬಂದವು. ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ಹೇಳಲಾದ ಅಕ್ರಮಗಳ ಬಗ್ಗೆ ಸರ್ಕಾರದಿಂದ ಹೆಚ್ಚಿನ ಹೊಣೆಗಾರಿಕೆಯನ್ನು ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ ಮತ್ತು ಪ್ರದರ್ಶನಗಳಿಗೆ ಕೇಂದ್ರದ ಪ್ರತಿಕ್ರಿಯೆಯನ್ನು ಟೀಕಿಸಿವೆ. ವಿದ್ಯಾರ್ಥಿಗಳು ದೇಶದ "ಬೆಳಕು" ಎಂದು ಗಾಂಧಿ ಹೇಳಿದರು ಮತ್ತು ಅವರ ನಿರಂತರ ಬೆಂಬಲವನ್ನು ಅವರಿಗೆ ಭರವಸೆ ನೀಡಿದರು. "ವಿದ್ಯಾರ್ಥಿಗಳು ದೇಶದ ಬೆಳಕು, ಮತ್ತು ನಾನು ನನ್ನ ಎಲ್ಲಾ ಶಕ್ತಿಯಿಂದ ಅವರೊಂದಿಗೆ ನಿಲ್ಲುತ್ತೇನೆ" ಎಂದು ಅವರು ಹೇಳಿದರು.



ನವದೆಹಲಿಯಲ್ಲಿ ಭಾನುವಾರ ಸಚಿವ ಶಿವರಾಜ್ ತಂಗಡಗಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯನ್ನು ಭೇಟಿಯಾಗಿ ಸಚಿವರಾಗಿ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದ ಅರ್ಪಿಸಿದರು.

# ನಾಗರಿಕರ ರಕ್ಷಿಸಲು ಭಾರತ ಯಾವುದೇ ಮಟ್ಟಕ್ಕೆ ಹೋಗಲಿದೆ: ರಾಜನಾಥ್ ಎಚ್ಚರಿಕೆ



**ನವದೆಹಲಿ, ಆಗಸ್ಟ್ 9:** ಆಪರೇಷನ್ ಸಿಂದೂರ್ ಭಾರತದ ಸಶಸ್ತ್ರ ಪಡೆಗಳ ಅಪ್ರತಿಮ ಶೌರ್ಯವನ್ನು ಪ್ರದರ್ಶಿಸಿದೆ ಮತ್ತು ದೇಶವು ತನ್ನ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಮಟ್ಟಕ್ಕೆ ಹೋಗಲು ಸಿದ್ಧ ಎಂಬ ಜಾಗತಿಕ ಸಂದೇಶವನ್ನು ರವಾನಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದ್ದಾರೆ. ದೆಹಲಿ ಕಂಟೋನ್ಮೆಂಟ್ನ ಬೇಸ್ ಆಸ್ಪತ್ರೆಯಲ್ಲಿ ನಡೆದ 'ಸಿಂದೂರ್ ಮಹಾರಕ್ತದಾನ್ ಯಾತ್ರೆ' ರಕ್ತದಾನ ಶಿಬಿರವನ್ನು ಉದ್ದೇಶಿಸಿ ಮಾತನಾಡಿದ ಸಿಂಗ್, ಈ ಕಾರ್ಯಾಚರಣೆಯು ತನ್ನ ನಾಗರಿಕರನ್ನು ರಕ್ಷಿಸುವ ಭಾರತದ ಸಂಕಲ್ಪ ಮತ್ತು "ನಮ್ಮ ಮಹಿಳೆಯರು ಧರಿಸುವ ಸಿಂದೂರ್" ಅನ್ನು ಪ್ರದರ್ಶಿಸಿದೆ ಎಂದು ಹೇಳಿದರು. ಪಾಕಿಸ್ತಾನದಲ್ಲಿ ನೆಲೆಗೊಂಡಿರುವ ಭಯೋತ್ಪಾದಕರು ಮತ್ತು ಅವರ ನಿರ್ವಾಹಕರನ್ನು ನಿರ್ಮೂಲನೆ ಮಾಡಿದ್ದಕ್ಕಾಗಿ ಅವರು ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದರು, ಭಾರತವನ್ನು ಗುರಿಯಾಗಿಸಲು ಪ್ರಯತ್ನಿಸಿದವರು ಗಂಭೀರ ಪರಿಣಾಮಗಳನ್ನು ಎದುರಿಸಿದ್ದಾರೆ ಎಂದು ಪ್ರತಿಪಾದಿಸಿದರು. ಆಪರೇಷನ್ ಸಿಂದೂರ್ ಮತ್ತು ರಕ್ತದಾನ ಅಭಿಯಾನದ ನಡುವೆ ಸಮಾನಾಂತರವನ್ನು ಚಿತ್ರಿಸುತ್ತಾ, ಮಿಲಿಟರಿ ಕಾರ್ಯಾಚರಣೆ ಧೈರ್ಯ ಮತ್ತು ಶೌರ್ಯವನ್ನು ಪ್ರತಿನಿಧಿಸುತ್ತದೆ, ಆದರೆ ಮೆಗಾ ರಕ್ತದಾನ ಅಭಿಯಾನವು ಕರುಣೆ ಮತ್ತು ನಿಸ್ವಾರ್ಥ ಸೇವೆಯನ್ನು ಸಂಕೇತಿಸುತ್ತದೆ ಎಂದು ರಕ್ಷಣಾ ಸಚಿವರು ಹೇಳಿದರು. ಮಹಾರಾಷ್ಟ್ರದ ಸುಮಾರು 1,000 ಕುಸ್ತಿಪಟುಗಳು ಮತ್ತು ಕ್ರೀಡಾಪಟುಗಳು ಈ ಅಭಿಯಾನದಲ್ಲಿ ದಾನಿಗಳಾಗಿ ಭಾಗವಹಿಸಿದರು, ಸಶಸ್ತ್ರ ಪಡೆಗಳೊಂದಿಗೆ ಒಗ್ಗಟ್ಟನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ, ಆಯುಷ್ ಖಾತೆ ರಾಜ್ಯ ಸಚಿವ ಪ್ರತಾಪ್ ರಾವ್ ಜಾಧವ್, ಮಹಾರಾಷ್ಟ್ರ ಕೈಗಾರಿಕಾ ಸಚಿವ ಉದಯ್ ರವೀಂದ್ರ ಸಮಂತ್, ಸಂಸದ ಡಾ. ಶ್ರೀಕಾಂತ್ ಲತಾ ಏಕನಾಥ್ ಶಿಂಧೆ, ಸೇನಾ ಮುಖ್ಯಸ್ಥ ಜನರಲ್ ಧೀರಜ್ ಸೇಠ್, ಸಶಸ್ತ್ರ ಪಡೆಗಳ ವೈದ್ಯಕೀಯ ಸೇವೆಗಳ ಡಿಜಿ ಸರ್ಜನ್ ವೈಸ್ ಅಡ್ಮಿರಲ್ ಆರತಿ ಸರಿನ್, ಅಡ್ಜುಟಂಟ್ ಜನರಲ್ ಲೆಫ್ಟಿನೆಂಟ್ ಜನರಲ್ ವಿಪಿಎಸ್ ಕೌಶಿಕ್ ಮತ್ತು ಇತರ ಹಿರಿಯ ಮಿಲಿಟರಿ ಮತ್ತು ನಾಗರಿಕ ಅಧಿಕಾರಿಗಳು ಭಾಗವಹಿಸಿದ್ದರು.

# ಯುಪಿಐ ಪಾವತಿಗೆ ಯಾವುದೇ ಶುಲ್ಕ ಇಲ್ಲ, ವ್ಯಾಪಾರಿಗಳಿಗೂ ಬಹುತೇಕ ವ್ಯವಹಾರ ಉಚಿತ: ಹಣಕಾಸು ಸಚಿವಾಲಯ



**ನವದೆಹಲಿ:** ಏಕೀಕೃತ ಪಾವತಿ ವ್ಯವಸ್ಥೆ ವಹಿವಾಟುಗಳ ಮೇಲೆ ಶುಲ್ಕ ವಿಧಿಸಲಾಗುತ್ತದೆ ಎಂಬ ಆತಂಕಕ್ಕೆ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದೆ. ಯುಪಿಐ ಮೂಲಕ ಪಾವತಿ ಮಾಡುವ ಬಳಕೆದಾರರಿಗೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಲಾಗುವುದಿಲ್ಲ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಸಣ್ಣ ವ್ಯಾಪಾರಿಗಳಿಗೂ ಶುಲ್ಕ ಇರುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಸರ್ಕಾರ, ವ್ಯಾಪಾರಿಗಳ ಬಹುತೇಕ ಯುಪಿಐ ವ್ಯವಹಾರಗಳು ಕೂಡ ಉಚಿತವಾಗಿಯೇ ಮುಂದುವರಿಯಲಿದೆ. ಆದರೆ, ಮುಂದಿನ ದಿನಗಳಲ್ಲಿ ಶುಲ್ಕ ವ್ಯವಸ್ಥೆ ಜಾರಿಗೆ ಬಂದರೆ, ನಿರ್ದಿಷ್ಟ ವ್ಯಾಪಾರಿ ವ್ಯವಹಾರಗಳಿಗೆ ಮಾತ್ರ ನಾಮಮಾತ್ರದ ಮರ್ಚೆಂಟ್ ಡಿಸ್ಕೌಂಟ್ ರೇಟ್ ಅನ್ವಯವಾಗಲಿದೆ. ಈ ಶುಲ್ಕವು ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ಗಳ ಒಆಖ ಗಿಂತಲೂ ಕಡಿಮೆ ಇರಲಿದೆ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.

ಪೇಮೆಂಟ್ ಅಂಡ್ ಸೆಟಲ್ಮೆಂಟ್ ಸಿಸ್ಟಮ್ಸ್ ಆಕ್ಟ್, 2007ಕ್ಕೆ ತಿದ್ದುಪಡಿ ತರಲು ಉದ್ದೇಶಿಸಿರುವ ಮಸೂದೆಯನ್ನ ಆಗಸ್ಟ್ 6ರಂದು ಲೋಕಸಭೆ ಅಂಗೀಕರಿಸಿತು. ಹಣಕಾಸು ಸಚಿವಾಲಯದ ಹೇಳಿಕೆಯ ಪ್ರಕಾರ, ಗ್ರಾಹಕರು ಗಕಊ ಮೂಲಕ ಪಾವತಿ ಮಾಡುವಾಗ ಯಾವುದೇ ವಹಿವಾಟು ಶುಲ್ಕ ವಿಧಿಸಲಾಗುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ ಎಲ್ಲಾ ವಹಿವಾಟುಗಳು ಕೂಡ ಉಚಿತವಾಗಿಯೇ ಮುಂದುವರಿಯಲಿವೆ. ಆದರೆ, ನಿರ್ದಿಷ್ಟ ಮಿತಿಗಿಂತ ಹೆಚ್ಚಿನ ಮೊತ್ತದ ಸೀಮಿತ ಪ್ರಮಾಣದ ವ್ಯಾಪಾರಿ ವ್ಯವಹಾರಗಳಿಗೆ ಮಾತ್ರ ನಾಮಮಾತ್ರದ MDR ಅನ್ವಯಿಸುವ ಸಾಧ್ಯತೆ ಇದೆ. ಇದು ಎಲ್ಲ ವ್ಯಾಪಾರಿಗಳಿಗೂ ಸಾಮಾನ್ಯವಾಗಿ ವಿಧಿಸುವ ಶುಲ್ಕವಾಗಿರುವುದಿಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ. ಎಂಡಿಆರ್ ಎಂದರೆ ಮರ್ಚೆಂಟ್ ಡಿಸ್ಕೌಂಟ್ ರೇಟ್. ಎಲೆಕ್ಟ್ರಾನಿಕ್ ವಿಧಾನದಲ್ಲಿ ನಡೆಸುವ ವಹಿವಾಟಿನ ಮೇಲೆ (ಬೇರೆಯವರಿಗೆ ಪಾವತಿ ಅಥವಾ ಗ್ರಾಹಕರಿಂದ ಸ್ವೀಕರಿಸುವ ಹಣ) ಬ್ಯಾಂಕುಗಳು ಅಥವಾ ಎಲೆಕ್ಟ್ರಾನಿಕ್ ಪಾವತಿ ಸೇವೆ ನೀಡುವ ಕಂಪನಿಗಳು ವರ್ತಕರಿಗೆ ವಿಧಿಸುವ ಶುಲ್ಕ. ಗ್ರಾಹಕರಿಗೆ ಇದು ಅನ್ವಯಿಸುವುದಿಲ್ಲ

**ವ್ಯಾಪಾರಿಗಳ ಬಹುತೇಕ ವಹಿವಾಟುಗಳು ಉಚಿತ:** UPI ಮೂಲಕ ನಡೆಯುವ ಬಹುತೇಕ ವ್ಯಾಪಾರ ವಹಿವಾಟುಗಳು ಉಚಿತವಾಗಿಯೇ ಮುಂದುವರಿಯಲಿವೆ. MDR ಜಾರಿಗೆ ಬಂದರೂ ಅದು ಎಲ್ಲಾ ವ್ಯಾಪಾರಿಗಳ ಮೇಲೆ ಅನ್ವಯಿಸುವುದಿಲ್ಲ. ಬದಲಾಗಿ, ನಿರ್ದಿಷ್ಟ ಮಿತಿಯನ್ನ ಆಧರಿಸಿ ಮಾತ್ರ ಶುಲ್ಕ ವಿಧಿಸಲಾಗುತ್ತದೆ. ಟ್ಯಾಕ್ಸೇಶನ್ ಅಂಡ್ ಅದರ್ ಲಾಸ್ (ಅಮೆಂಡ್ಮೆಂಟ್) ಬಿಲ್, 2026 ಸಂಸತ್ತಿನ ಅನುಮೋದನೆ ಪಡೆದ ಬಳಿಕ, ಒಆಖ ಜಾರಿಗೆ ತರಬೇಕೇ ಅಥವಾ ಬೇಡವೇ ಎಂಬುದನ್ನ NPCI ನೇತೃತ್ವದ UPI ಅಂಡ್ ಸರ್ವೀಸಸ್ ಸ್ಟೀರಿಂಗ್ ಕಮಿಟಿ ನಿರ್ಧರಿಸಲಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಈ ಮಸೂದೆಯ ಮೂಲಕ ಪೇಮೆಂಟ್ ಅಂಡ್ ಸೆಟಲ್ಮೆಂಟ್ ಸಿಸ್ಟಮ್ಸ್ ಆಕ್ಟ್, 2007ರ ಸೆಕ್ಷನ್ 10ಗೆ ತಿದ್ದುಪಡಿ ತರಲು ಪ್ರಸ್ತಾಪಿಸಲಾಗಿದೆ.

**ಈ ತಿದ್ದುಪಡಿ ಏಕೆ ಮಹತ್ವದ್ದು:** ಈವರೆಗೆ 2007ರ ಕಾಯ್ದೆಯ ಸೆಕ್ಷನ್ 10ಎ ಪ್ರಕಾರ, ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 269ಎಸ್ಯು ಅಡಿಯಲ್ಲಿ ಹೇಳಿರುವಂತೆ ಯಾವುದೇ ವ್ಯಕ್ತಿ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಮಾಡುವ ಪಾವತಿ ಅಥವಾ ಸ್ವೀಕರಿಸುವ ಹಣಕ್ಕೆ ಯಾವುದೇ ಬ್ಯಾಂಕ್ ಅಥವಾ ಸೇವಾದಾರರು (ಕಂಪನಿಗಳು) ನೇರವಾಗಿ ಅಥವಾ ಪರೋಕ್ಷವಾಗಿ ಶುಲ್ಕ ವಿಧಿಸುವಂತಿರಲಿಲ್ಲ.

ವಾರ್ಷಿಕ 50 ಕೋಟಿ ರೂಪಾಯಿಗಿಂತಲೂ ಹೆಚ್ಚು ವಹಿವಾಟು ನಡೆಸುವ ವ್ಯಾಪಾರ ಸಂಸ್ಥೆಗಳು ಗ್ರಾಹಕರಿಗೆ BHIM-UPI QR ಕೋಡ್ ಹಾಗೂ RuPay ಡೆಬಿಟ್ ಕಾರ್ಡ್ ಸೇರಿದಂತೆ ನಿಗದಿತ ಡಿಜಿಟಲ್ ಪಾವತಿ ಸೌಲಭ್ಯಗಳನ್ನು ಒದಗಿಸಬೇಕು ಎಂಬ ನಿಯಮ ಈಗಲೂ ಜಾರಿಯಲ್ಲಿದೆ. ಈ ಕಾನೂನು ನಿರ್ಬಂಧದಿಂದಾಗಿ ಬ್ಯಾಂಕ್ಗಳು ಮತ್ತು ಪಾವತಿ ಸೇವಾ ಸಂಸ್ಥೆಗಳು ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್ Merchant Discount Rate (MDR) ಅನ್ನು ವಿಧಿಸಲು ಸಾಧ್ಯವಾಗುತ್ತಿರಲಿಲ್ಲ. ಹೊಸ ತಿದ್ದುಪಡಿಯಿಂದ ಈ ಕಾನೂನುಬದ್ಧ ನಿರ್ಬಂಧ ತೆರವಾಗಿದ್ದು, ಭವಿಷ್ಯದಲ್ಲಿ ಸರ್ಕಾರ ಅಗತ್ಯವೆಂದು ಕಂಡರೆ ಒಆಖ ಜಾರಿಗೆ ಅವಕಾಶ ಸಿಗಲಿದೆ.

**ಹೊಸ ಕಾನೂನಿನಲ್ಲಿ ಏನು ಬದಲಾಗಿದೆ?**

ತೆರಿಗೆ ಮತ್ತು ಇತರ ಕಾನೂನುಗಳು (ತಿದ್ದುಪಡಿ)2026 ಮಸೂದೆಯಲ್ಲಿ 2007ರ ಪಾವತಿ ಮತ್ತು ಸೆಟಲ್ಮೆಂಟ್ ವ್ಯವಸ್ಥೆಗಳ ಕಾಯ್ದೆಯ ಸೆಕ್ಷನ್ 10ಎಗೆ ತಿದ್ದುಪಡಿ ಮಾಡಲಾಗಿದೆ.

ಈ ತಿದ್ದುಪಡಿಯ ಪ್ರಕಾರ, ಯಾವ ಡಿಜಿಟಲ್ ಪಾವತಿ ವಿಧಾನಗಳಿಗೆ ಶುಲ್ಕ ವಿಧಿಸಬಹುದು ಎಂಬುದನ್ನು ಕೇಂದ್ರ ಸರ್ಕಾರವು ಮುಂದಿನ ದಿನಗಳಲ್ಲಿ ಅಧಿಸೂಚನೆ ಮೂಲಕ ನಿರ್ಧರಿಸುವ ಅಧಿಕಾರ ಪಡೆಯಲಿದೆ.

ಈ ಮಸೂದೆ ಅಂಗೀಕಾರ ಆದ ತಕ್ಷಣವೇ ಗಕಊ ವ್ಯವಹಾರಗಳಿಗೆ ಶುಲ್ಕ ಜಾರಿಗೆ ಬರುತ್ತದೆ ಎಂಬುದಲ್ಲ. ಸರ್ಕಾರ ಪ್ರತ್ಯೇಕ ಅಧಿಸೂಚನೆ ಹೊರಡಿಸಿದ ಬಳಿಕ ಮಾತ್ರ ಬ್ಯಾಂಕ್ಗಳು ಮತ್ತು ಪಾವತಿ ಸೇವಾ ಪೂರೈಕೆದಾರರು ಶುಲ್ಕ ವಿಧಿಸಲು ಸಾಧ್ಯವಾಗುತ್ತದೆ. ಅದುವರೆಗೆ ಗಕಊ ವ್ಯವಹಾರಗಳು ಉಚಿತವಾಗಿಯೇ ಮುಂದುವರಿಯಲಿವೆ.

# ಕೇಜ್ರಿವಾಲ್ ಸರ್ಕಾರದ ಅವಧಿಯಲ್ಲಿ ಅಕ್ರಮ: ಸಿಎಜಿ ವರದಿಯಲ್ಲಿ ಬಹಿರಂಗ- ದೆಹಲಿ ಸಚಿವ ವರ್ಮಾ ಆರೋಪ



**ನವದೆಹಲಿ, ಆ.9:** ಆ.7ರಂದು ಬಿಡುಗಡೆಯಾದ ಸಿಎಜಿ ವರದಿಯು ಅರವಿಂದ್ ಕೇಜ್ರಿವಾಲ್ ನೇತೃತ್ವದ ಹಿಂದಿನ ಎಎಪಿ ಸರ್ಕಾರದ ಅವಧಿಯಲ್ಲಿ 3,500 ಕೋಟಿ ರೂ.ಗಳ ಆರ್ಥಿಕ ಅಕ್ರಮಗಳನ್ನು ಬಹಿರಂಗಪಡಿಸಿದೆ ಎಂದು ದೆಹಲಿ ಸಚಿವ ಪ್ರವೇಶ್ ಸಾಹಿಬ್‌ಸಿಂಗ್ ಭಾನುವಾರ ಆರೋಪಿಸಿದ್ದಾರೆ. ಪತ್ರಿಕಾಗೋಷ್ಠಿ ಯನ್ನುದ್ದೇಶಿಸಿ ಮಾತನಾಡಿದ ಸಿಂಗ್, ಮಾರ್ಚ್ 31, 2023 ರವರೆಗಿನ ಅವಧಿಯನ್ನು ಒಳಗೊಂಡ ಆಡಿಟ್ ವರದಿಯು ಜಿಎಸ್ಟಿ ಸಂಗ್ರಹ, ಸಾರ್ವಜನಿಕ ಸಂಗ್ರಹಣೆ, ವಿದ್ಯುತ್ ಸಬ್ಸಿಡಿಗಳು ಮತ್ತು ಮೂಲಸೌಕರ್ಯ ಯೋಜನೆಗಳಲ್ಲಿನ ಲೋಪಗಳನ್ನು ತೋರಿಸಿದೆ ಎಂದು ಹೇಳಿದರು.

ಅರವಿಂದ್ ಕೇಜ್ರಿವಾಲ್ ನಿಯಮಗಳನ್ನು ಉಲ್ಲಂಘಿಸಿ, 1,185 ಹಸ್ತಚಾಲಿತ ಟೆಂಡರ್‌ಗಳನ್ನು ನಡೆಸಿದರು ಮತ್ತು ಟೆಂಡರ್ಗಳಲ್ಲಿ ಮಧ್ಯಸ್ಥಿಕೆ ಷರತ್ತುಗಳನ್ನು ಸೇರಿಸಿದರು ಎಂದು ಸಿಂಗ್ ಆರೋಪಿಸಿದರು, ಹಿಂದಿನ ಸರ್ಕಾರವು ಸಾರ್ವಜನಿಕ ಖಜಾನೆಗೆ ನಷ್ಟವನ್ನುಂಟುಮಾಡಿದೆ ಎಂದು ಆರೋಪಿಸಿದರು. ಸಿಎಜಿ ಸಂಶೋಧನೆಗಳನ್ನು ಉಲ್ಲೇಖಿಸಿ ಸಿಂಗ್, ಐದು ವರ್ಷಗಳಿಗೂ ಹೆಚ್ಚು ಕಾಲ ವ್ಯವಹಾರಗಳಿಂದ ಸುಮಾರು 70,410 ಕೋಟಿ ರೂ.ಗಳ ತೆರಿಗೆ ಆದಾಯ ಬಾಕಿ ಉಳಿದಿದೆ ಎಂದು ಹೇಳಿದರು. ರದ್ದಾದ ಜಿಎಸ್ಟಿ ನೋಂದಣಿ ಹೊಂದಿರುವ 8,334 ವ್ಯವಹಾರಗಳು 68,680 ಕೋಟಿ ರೂ. ಮೌಲ್ಯದ ಇ-ವೇ ಬಿಲ್ಗಳನ್ನು ರಚಿಸಿವೆ ಮತ್ತು 4,076 ಸಲ್ಲಿಸದ ವ್ಯವಹಾರಗಳು 11,635 ಕೋಟಿ ರೂ. ಮೌಲ್ಯದ ಬಿಲ್ಗಳನ್ನು ರಚಿಸಿವೆ ಎಂದು ಅವರು ಹೇಳಿದ್ದಾರೆ. 6.10 ಕೋಟಿ ಇ-ವೇ ಬಿಲ್‌ಗಳಲ್ಲಿ ಕೇವಲ 0.10 ಪ್ರತಿಶತವನ್ನು ಮಾತ್ರ ಪರಿಶೀಲಿಸಲಾಗಿದೆ ಎಂದು ಅವರು ಹೇಳಿದರು. 70 ಪ್ರಕರಣಗಳ ಪರಿಶೀಲನೆಯಲ್ಲಿ, 3,071.92 ಕೋಟಿ ರೂ.ಗಳ ಆದಾಯದ ಪರಿಣಾಮ ಮತ್ತು 3,710.17 ಕೋಟಿ ರೂ.ಗಳ ವಹಿವಾಟು ಹೊಂದಿಕೆಯಾಗದ 344 ಅನುಸರಣೆಯ ಪ್ರಕರಣಗಳು ಕಂಡುಬಂದಿವೆ ಎಂದು ಅವರು ಹೇಳಿದ್ದಾರೆ. ವಿದ್ಯುತ್ ಸಬ್ಸಿಡಿಗಳಲ್ಲಿ ಅಕ್ರಮಗಳನ್ನು ಸಹ ಸಿಂಗ್ ಆರೋಪಿಸಿದ್ದಾರೆ, ಸತತ 12 ತಿಂಗಳುಗಳ ಕಾಲ ಶೂನ್ಯ ಬಳಕೆಯ ಸುಮಾರು 50,000 ಗ್ರಾಹಕರು 17.81 ಕೋಟಿ ರೂ. ಸಬ್ಸಿಡಿಗಳನ್ನು ಪಡೆದಿದ್ದಾರೆ ಎಂದು ಅವರು ಹೇಳಿದ್ದಾರೆ. ಆರರಿಂದ 11 ತಿಂಗಳವರೆಗೆ ತಮ್ಮ ಮನೆಗಳನ್ನು ಆಕ್ರಮಿಸಿಕೊಳ್ಳದ ಸುಮಾರು 90,000 ಗ್ರಾಹಕರಿಗೆ ಮತ್ತೊಂದು 11.88 ಕೋಟಿ ರೂ.ಗಳನ್ನು ಪಾವತಿಸಲಾಗಿದೆ ಎಂದು ಆರೋಪಿಸಲಾಗಿದೆ. ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ, ಸಿಂಗ್ ಬಾಪ್ರೋಲಾ ಕೈಗಾರಿಕಾ ಉದ್ಯಾನವನವನ್ನು ಉಲ್ಲೇಖಿಸಿ, ಉದ್ದೇಶಿತ ಯೋಜನೆ ಕಾರ್ಯರೂಪಕ್ಕೆ ಬರದೆ 29.45 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ ಮತ್ತು 15.79 ಕೋಟಿ ರೂ.ಗಳನ್ನು ನೆಲದ ಬಾಡಿಗೆಯಲ್ಲಿ ಬಾಕಿ ಉಳಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

14,527 ಬಿಡ್‌ಗಳನ್ನು ಒಳಗೊಂಡ 1,185 ಹಸ್ತಚಾಲಿತ ಟೆಂಡರ್‌ಗಳ ನಡವಳಿಕೆಯನ್ನು ಅವರು ಪ್ರಶ್ನಿಸಿದರು, ಕೇವಲ 3 ಪ್ರತಿಶತ ಟೆಂಡರ್ಗಳಿಗೆ ಮಾತ್ರ ಒಪ್ಪಂದಕ್ಕೆ ಸಂಬಂಧಿಸಿದ ಫೈಲ್ಗಳು ಲಭ್ಯವಿವೆ ಮತ್ತು ಉಳಿದ 97 ಪ್ರತಿಶತದಲ್ಲಿ ಕಾಣೆಯಾಗಿದೆ ಎಂದು ಹೇಳಿಕೊಂಡರು. ಎಲ್‌ಎನ್‌ಜೆಪಿ ಆಸ್ಪತ್ರೆ ಯೋಜನೆಯ ಅನುಷ್ಠಾನದ ಸಮಯದಲ್ಲಿ ಅದರ ವೆಚ್ಚವು ಪ್ರತಿ ಹಾಸಿಗೆಗೆ ಸುಮಾರು 33 ಲಕ್ಷ ರೂ.ಗಳಿಂದ 72 ಲಕ್ಷ ರೂ.ಗಳಿಗೆ ಏರಿತು, ಇದು ಮಾಜಿ ಸಚಿವ ಸತ್ಯೇಂದರ್ ಜೈನ್ ಅವರ ಅಧಿಕಾರಾವಧಿಗೆ ಸಂಬಂಧಿಸಿದೆ ಎಂದು ಸಿಂಗ್ ಆರೋಪಿಸಿದರು. "ಅರವಿಂದ್ ಕೇಜ್ರಿವಾಲ್ ಈಗ ತಮ್ಮ 11 ವರ್ಷಗಳ ಅವಧಿಯಲ್ಲಿ ಮಾಡಿದ ಪ್ರತಿಯೊಂದು ಭ್ರಷ್ಟಾಚಾರದ ಕೃತ್ಯಕ್ಕೂ ಹೊಣೆಗಾರರಾಗಬೇಕಾಗುತ್ತದೆ" ಎಂದು ಸಿಂಗ್ ಹೇಳಿದರು.

# ದೆಹಲಿ ಸರ್ಕಾರದಲ್ಲಿ ಯಾವುದೇ ಹಗರಣ ನಡೆದಿಲ್ಲ; ಆರೋಪಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಎಪಿ ನಾಯಕರಿಗೆ ಬಿಜೆಪಿ ಎಚ್ಚರಿಕೆ




**ನವದೆಹಲಿ, ಆ.9:** ದೆಹಲಿ ಸರ್ಕಾರದಲ್ಲಿನ ಭ್ರಷ್ಟಾಚಾರದ ಆರೋಪಗಳನ್ನು ದೆಹಲಿ ಬಿಜೆಪಿ ಭಾನುವಾರ ತಿರಸ್ಕರಿಸಿದೆ ಮತ್ತು ಆಮ್ ಆದ್ಮಿ ಪಕ್ಷದ ನಾಯಕರು ರಾಜಕೀಯ ಲಾಭಕ್ಕಾಗಿ "ಆಧಾರರಹಿತ ಮತ್ತು ಬೇಜವಾಬ್ದಾರಿ" ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದೆ, ಪಕ್ಷದ ವಕ್ತಾರ ಪ್ರವೀಣ್ ಶಂಕರ್ ಕಪೂರ್ ಆರೋಪಗಳನ್ನು ಮಾಡುವವರು ಕ್ಷಮೆಯಾಚಿಸಬೇಕು ಅಥವಾ ಕಾನೂನು ಕ್ರಮ ಎದುರಿಸಬೇಕು ಎಂದು ಹೇಳಿದ್ದಾರೆ. ದೆಹಲಿ ಸರ್ಕಾರದ ಸಚಿವ ಮಂಜಿಂದರ್ ಸಿಂಗ್ ಸಿರ್ಸಾ ಅವರು ಬಿಜೆಪಿ ನೇತೃತ್ವದ ದೆಹಲಿ ಸರ್ಕಾರದ ವಿರುದ್ಧ ಇತ್ತೀಚೆಗೆ ಎಎಪಿ ದೆಹಲಿ ಸಂಚಾಲಕ ಸೌರಭ್ ಭಾರದ್ವಾಜ್ ಮತ್ತು ಶಾಸಕ ಸಂಜೀವ್ ಝಾ ಅವರಿಗೆ ಬಲವಾದ ಎಚ್ಚರಿಕೆ ನೀಡಿದ್ದಾರೆ ಎಂದು ಕಪೂರ್ ಹೇಳಿದ್ದಾರೆ. ಕಪೂರ್ ಅವರ ಪ್ರಕಾರ, ಸಿರ್ಸಾ ಅವರು ಪತ್ರಿಕಾಗೋಷ್ಠಿಯಲ್ಲಿ ಭಾರದ್ವಾಜ್ ಮತ್ತು ಝಾ ಮತ್ತೊಮ್ಮೆ ಸುಳ್ಳು ಮತ್ತು ಆಧಾರರಹಿತ ಆರೋಪಗಳ ಮೂಲಕ ದೆಹಲಿ ಸರ್ಕಾರವನ್ನು ಗುರಿಯಾಗಿಸಲು ಪ್ರಯತ್ನಿಸಿದ್ದಾರೆ ಎಂದು ಹೇಳಿದರು. "ದೆಹಲಿ ಸರ್ಕಾರದಲ್ಲಿ ಯಾವುದೇ ಹಗರಣ ನಡೆದಿಲ್ಲ. ಸೌರಭ್ ಭಾರದ್ವಾಜ್ ಮತ್ತು ಸಂಜೀವ್ ಝಾ ಅವರ ಸುಳ್ಳು ಮತ್ತು ವಂಚನೆಯ ರಾಜಕೀಯವನ್ನು ನಿಲ್ಲಿಸಿ ಕ್ಷಮೆಯಾಚಿಸುವಂತೆ ನಾನು ಬಲವಾಗಿ ಎಚ್ಚರಿಸುತ್ತೇನೆ, ಇಲ್ಲದಿದ್ದರೆ ಕಾನೂನು ಕ್ರಮ ಎದುರಿಸಲು ಸಿದ್ಧರಾಗಿರಿ" ಎಂದು ಸಿರ್ಸಾ ಹೇಳಿದರು ಎಂದು ಕಪೂರ್ ಹೇಳಿದ್ದಾರೆ.

ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಸೇರಿದಂತೆ ಎಎಪಿ ನಾಯಕರು ಪಕ್ಷದೊಳಗೆ ಹೆಚ್ಚುತ್ತಿರುವ ಹತಾಶೆಯಿಂದಾಗಿ ಹೆಚ್ಚು ಆಕ್ರಮಣಕಾರಿ ರಾಜಕೀಯ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಬಿಜೆಪಿ ವಕ್ತಾರರು ಹೇಳಿದ್ದಾರೆ.

ದೆಹಲಿ ಸರ್ಕಾರದ ಅಭಿವೃದ್ಧಿ ಉಪಕ್ರಮಗಳು ಮತ್ತು ಕಲ್ಯಾಣ ಕ್ರಮಗಳು, ವಿಶೇಷವಾಗಿ ಮಹಿಳೆಯರು ಮತ್ತು ಹುಡುಗಿಯರನ್ನು ಗುರಿಯಾಗಿರಿಸಿಕೊಂಡ ಯೋಜನೆಗಳು, ರಾಜಧಾನಿಯಲ್ಲಿ ಎಎಪಿಯ ರಾಜಕೀಯ ಸ್ಥಾನವನ್ನು ದುರ್ಬಲಗೊಳಿಸಿವೆ ಎಂದು ಕಪೂರ್ ಆರೋಪಿಸಿದರು. ಪಂಜಾಬ್ನಲ್ಲಿ ಎಎಪಿಯ ಚುನಾವಣಾ ನಿರೀಕ್ಷೆಗಳ ಸುತ್ತಲಿನ ಊಹಾಪೋಹಗಳು ಪಕ್ಷದ ರಾಜಕೀಯ ಕಾಳಜಿಯನ್ನು ಹೆಚ್ಚಿಸಿವೆ ಮತ್ತು ಅದರ ನಾಯಕರು ಸಾರ್ವಜನಿಕ ಗಮನದಲ್ಲಿರಲು ವೈಯಕ್ತಿಕ ದಾಳಿಗಳು ಮತ್ತು ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಎಎಪಿ ನಾಯಕರು ಬಳಸುತ್ತಿರುವ ಭಾಷೆ ರಾಜಕೀಯ ಚರ್ಚೆಯನ್ನು ಕಡಿಮೆ ಮಾಡಿದೆ ಮತ್ತು ಸಾಕಷ್ಟು ಪುರಾವೆಗಳಿಲ್ಲದೆ ಅವರು ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಕಪೂರ್ ಹೇಳಿದರು. ದೆಹಲಿಯ ಜನರು ಭಾರದ್ವಾಜ್ ಮತ್ತು ಝಾ ಅವರ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ ಎಂದು ಬಿಜೆಪಿ ವಕ್ತಾರರು ಪ್ರತಿಪಾದಿಸಿದರು, ಆದರೆ ಎಎಪಿ ನಾಯಕರು ಬಿಜೆಪಿ ಮತ್ತು ದೆಹಲಿ ಸರ್ಕಾರಕ್ಕೆ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು. ಹಾಗೆ ಮಾಡಲು ವಿಫಲವಾದರೆ ಕಾನೂನು ಕ್ರಮಕ್ಕೆ ಕಾರಣವಾಗಬಹುದು ಎಂದು ಅವರು ಎಚ್ಚರಿಸಿದರು ಮತ್ತು ದೆಹಲಿ, ಪಂಜಾಬ್ ಮತ್ತು ಇತರೆಡೆ ಮತದಾರರು ಚುನಾವಣಾ ಪ್ರಕ್ರಿಯೆಯ ಮೂಲಕ ಎಎಪಿಯ "ಸುಳ್ಳು ಮತ್ತು ವಂಚನೆಯ ರಾಜಕೀಯ" ಎಂದು ವಿವರಿಸಿದ್ದಕ್ಕೆ ಪ್ರತಿಕ್ರಿಯಿಸುತ್ತಾರೆ ಎಂದು ಹೇಳಿದರು.

# ಪ್ರತಿಮನೆಯಲ್ಲೂ ತ್ರಿವರ್ಣ ಧ್ವಜ ಅಭಿಯಾನಕ್ಕೆ ಚಾಲನೆ
# ಆ.17 ರವರೆಗೆ ದೇಶಾಭಿಮಾನದ ಧ್ವಜಾರೋಹಣ



**ಬೆಂಗಳೂರು,ಆ.9:** ಸ್ವಾತಂತ್ರ್ಯ ದಿನಾಚರಣೆ ಹತ್ತಿರ ಬರುತ್ತಿದ್ದಂತೆ ಇಡೀ ದೇಶದಲ್ಲಿ ದೇಶಭಕ್ತಿಯ ಅಲೆ ಮೂಡುವುದು ಸಹಜ. ನಮ್ಮ ಮನೆಯಂಗಳದಲ್ಲಿ ತ್ರಿವರ್ಣ ಧ್ವಜ ಹಾರಿದಾಗ ಸಿಗುವ ಹೆಮ್ಮೆ ಹಾಗೂ ಸಂಭ್ರಮ ಅಷ್ಟಿಷ್ಟಲ್ಲ. ದೇಶದ ಪ್ರತಿಯೊಬ್ಬ ನಾಗರಿಕನಲ್ಲೂ ಇದೇ ದೇಶಭಕ್ತಿ ಮತ್ತು ರಾಷ್ಟ್ರೀಯ ಏಕತೆಯನ್ನು ಬಡಿದೆಬ್ಬಿಸಲು ಪ್ರತಿವರ್ಷದಂತೆ ಈ ವರ್ಷವೂ 'ಪ್ರತಿ ಮನೆಯಲ್ಲೂ ತ್ರಿವರ್ಣ ಧ್ವಜ' ಅಭಿಯಾನಕ್ಕೆ ಇಂದಿನಿಂದ ಚಾಲನೆ ದೊರೆತಿದೆ.

ಒಂದು ದೇಶದ ಅಸ್ಮಿತೆ ಮತ್ತು ಒಗ್ಗಟ್ಟಿನ ಅತಿದೊಡ್ಡ ಸಂಕೇತ ಎಂದರೆ ಆ ದೇಶದ ರಾಷ್ಟ್ರಧ್ವಜ. ಪ್ರತಿಯೊಬ್ಬ ನಾಗರಿಕನೂ ತನ್ನ ದೇಶದ ಧ್ವಜವನ್ನು ಹೆಮ್ಮೆಯಿಂದ ಹಿಡಿದಾಗ, ಅಲ್ಲಿ ಇಡೀ ರಾಷ್ಟ್ರವೇ ಒಗ್ಗೂಡುತ್ತದೆ. ದೇಶದ ಸ್ವಾತಂತ್ರ್ಯದ ಅಮೃತಮಹೋತ್ಸವದ ಧ್ಯೋತಕವಾಗಿ 2022 ರಲ್ಲಿ ಆರಂಭವಾದ 'ಹರ್ ಘರ್ ತಿರಂಗಾ' ಅಂದರೆ 'ಪ್ರತಿ ಮನೆಯಲ್ಲಿಯೂ ಧ್ವಜಾರೋಹಣ' ಅಭಿಯಾನ ಇಂದು ದೇಶದ ಅತಿದೊಡ್ಡ ಸಾರ್ವಜನಿಕ ಭಾಗವಹಿಸುವಿಕೆಯ ಕಾರ್ಯಕ್ರಮವಾಗಿ ರೂಪುಗೊಂಡಿದೆ.

ಈ ವರ್ಷದ ಅಭಿಯಾನವು ಇಂದಿನಿಂದ ಆರಂಭಗೊಂಡು ಆ.17 ರವರೆಗೆ ದೇಶಾದ್ಯಂತ ಅತ್ಯಂತ ಸಡಗರದಿಂದ ನಡೆಯಲಿದೆ. ಜಾತಿ, ಧರ್ಮ ಮತ್ತು ಪ್ರದೇಶಗಳ ಗಡಿಯನ್ನು ಮೀರಿ ಸಮುದಾಯಗಳಾದ್ಯಂತ ನಾಗರಿಕರು ಭಾರತದ ಏಕತೆ, ಗೌರವ ಮತ್ತು ಸಾಮೂಹಿಕ ರಾಷ್ಟ್ರೀಯ ಗುರುತಿನ ಸಂಕೇತವಾಗಿ ತ್ರಿವರ್ಣ ಧ್ವಜವನ್ನು ಹಾರಿಸಲು ಈ ಅಭಿಮಾನದ ಅಭಿಯಾನ ಪ್ರೇರೇಪಿಸುತ್ತಿದೆ.

ನಮ್ಮ ತ್ರಿವರ್ಣ ಧ್ವಜವು ಕೇವಲ ಮೂರು ಬಣ್ಣಗಳ ಬಟ್ಟೆಯಲ್ಲ. ಅದು ಲಕ್ಷಾಂತರ ಸ್ವಾತಂತ್ರ್ಯ ಯೋಧರ ತ್ಯಾಗ ಮತ್ತು ಬಲಿದಾನಗಳ ಜೀವಂತ ಸಂಕೇತ. ಧ್ವಜದಲ್ಲಿರುವ ಕೇಸರಿ ಬಣ್ಣವು ದೇಶದ ಶಕ್ತಿ ಮತ್ತು ಧೈರ್ಯವನ್ನು ಪ್ರತಿನಿಧಿಸಿದರೆ. ಬಿಳಿ ಬಣ್ಣವು ಶಾಂತಿ ಮತ್ತು ಸತ್ಯದ ಮಾರ್ಗವನ್ನು ತೋರುತ್ತದೆ. ಇನ್ನು ಹಸಿರು ಬಣ್ಣವು ನಾಡಿನ ಸಮೃದ್ಧಿ ಹಾಗೂ ಕೃಷಿಯನ್ನು ಬಿಂಬಿಸುತ್ತದೆ.

ಮಧ್ಯದಲ್ಲಿರುವ 24 ನೀಲಿ ಬಣ್ಣದ ಅಶೋಕ ಚಕ್ರವು ದೇಶದ ನಿರಂತರ ಪ್ರಗತಿ ಮತ್ತು ಧರ್ಮದ ಚಲನಶೀಲತೆಯ ದ್ಯೋತಕವಾಗಿದೆ. ಈ ಧ್ವಜದ ಅಡಿಯಲ್ಲಿ ನಿಂತಾಗ ಎಲ್ಲ ಭಾರತೀಯರೂ ಒಂದೇ ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಹೆಮ್ಮೆಯ ಭಾವ ಸೃಷ್ಟಿಸುತ್ತದೆ. ಒಂದು ಕಾಲದಲ್ಲಿ ಕೇವಲ ಸರ್ಕಾರಿ ಕಚೇರಿಗಳು ಮತ್ತು ಶಾಲಾ-ಕಾಲೇಜುಗಳಿಗೆ ಮಾತ್ರ ಸೀಮಿತವಾಗಿದ್ದ ಧ್ವಜಾರೋಹಣ ಮಾಡಲಾಗುತ್ತಿತ್ತು. ಇಂದು ಪ್ರತಿಯೊಬ್ಬ ಸಾಮಾನ್ಯ ನಾಗರಿಕನ ಮನೆಯಂಗಳವನ್ನು ರಾಷ್ಟ್ರಧ್ವಜ ತಲುಪಿದೆ. ಇದು ಪ್ರಜಾಪ್ರಭುತ್ವದ ನೈಜ ವಿಜಯವಾಗಿದೆ.

ಪ್ರತಿಯೊಬ್ಬರೂ ತಮ್ಮ ಮನೆಗಳ ಮೇಲೆ ಹಾಗೂ ಕಚೇರಿಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ರಾಷ್ಟ್ರದ ಮೇಲಿನ ತಮ್ಮ ಗೌರವವನ್ನು ಸಮರ್ಪಿಸುತ್ತಿದ್ದಾರೆ. ಅದೇ ಸಮಯದಲ್ಲಿ, ರಾಷ್ಟ್ರಧ್ವಜದ ಘನತೆ ಮತ್ತು ನಿಯಮಗಳನ್ನು ಎತ್ತಿಹಿಡಿಯುವುದು ಕೂಡ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಅಭಿಯಾನ ಕೇವಲ ಒಂದು ಸರ್ಕಾರಿ ಆದೇಶವಾಗಿ ಉಳಿಯದೆ, ಜನರ ಭಾವನೆಗಳೊಂದಿಗೆ ಬೆರೆತ ರಾಷ್ಟ್ರೀಯ ಹಬ್ಬವಾಗಿ ಮಾರ್ಪಟ್ಟಿದೆ.

ಇನ್ನು ಈ ವರ್ಷದ ಈ ಅಭಿಯಾನಕ್ಕೆ ಮತ್ತೊಂದು ವಿಶೇಷ ಮೆರಗಿದೆ. ಈ ಬಾರಿಯ ರಾಷ್ಟ್ರವ್ಯಾಪಿ ಆಚರಣೆಯನ್ನು ಭಾರತದ ರಾಷ್ಟ್ರೀಯ ಗೀತೆಯಾದ 'ವಂದೇ ಮಾತರಂ'ನ 150 ನೇ ವಾರ್ಷಿಕೋತ್ಸವಕ್ಕೆ ವಿಶಿಷ್ಟವಾಗಿ ಸಮರ್ಪಿಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರಲ್ಲಿ ಹೊಸ ಚೈತನ್ಯ ಮೂಡಿಸಿದ್ದ ಈ ಐತಿಹಾಸಿಕ ಗೀತೆಯ 150 ನೇ ವರ್ಷದ ನೆನಪಿಗಾಗಿ ಈ ಬಾರಿಯ ಅಭಿಯಾನದ ಉದ್ದಕ್ಕೂ ದೇಶಾದ್ಯಂತ 'ವಂದೇ ಮಾತರಂ'ನ ಸಾಮೂಹಿಕ ಗಾಯನ ಸೇರಿದಂತೆ, ದೇಶಭಕ್ತಿ ಮೂಡಿಸುವ ಹತ್ತು ಹಲವು ವಿಶೇಷ ಕಾರ್ಯಕ್ರಮಗಳು ನಡೆಯಲಿವೆ.

ಮನೆಯಂಗಳದಲ್ಲಿ ಹಾರುವ ಪ್ರತಿಯೊಂದು ತ್ರಿವರ್ಣ ಧ್ವಜವೂ ನಮ್ಮ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗವನ್ನು ನೆನಪಿಸುತ್ತದೆ. ಈ ಅಭಿಯಾನ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಸಂಭ್ರಮಿಸುವ ಜೊತೆಗೆ ನಮ್ಮ ದೇಶವನ್ನು ಆಂತರಿಕವಾಗಿ ಮತ್ತಷ್ಟು ಬಲಪಡಿಸುವ ಶಕ್ತಿಯಾಗಬೇಕಿದೆ. ನಮ್ಮೆಲ್ಲರ ಎದೆಯಲ್ಲೂ ಇದೇ ಒಗ್ಗಟ್ಟು ಮತ್ತು ರಾಷ್ಟ್ರೀಯತೆಯ ಕಿಚ್ಚು ಸದಾ ಜಾಗೃತವಾಗಿದ್ದರೆ 2047 ರ ವೇಳೆಗೆ ಭಾರತವನ್ನು "ವಿಕಸಿತ ಭಾರತವನ್ನಾಗಿ ನಿರ್ಮಾಣ ಮಾಡುವ ಸಂಕಲ್ಪ ಸಾಕರವಾಗಲಿದೆ.




ಬೆಂಗಳೂರಿನ ಗುಂಡೂರಾವ್ ಸಭಾಂಗಣದಲ್ಲಿ ಭಾನುವಾರ ನಡೆದ SUCI (ಕಮ್ಯುನಿಸ್ಟ್) ಸ್ಥಾಪಕ ಶಿವದಾಸ್ ಘೋಷ್ ಅವರ 50ನೇ ಪುಣ್ಯತಿಥಿಯ ಸಂದರ್ಭದಲ್ಲಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ನ ಪಾಲಿಟ್ ಬ್ಯೂರೋ ಸದಸ್ಯ ಕೆ. ರಾಧಾಕೃಷ್ಣ, ರಾಜ್ಯ ಕಾರ್ಯದರ್ಶಿ ಕೆ. ಸೋಮಶೇಖರ್, ರಾಜ್ಯ ಕಾರ್ಯದರ್ಶಿ ಕೆ. ಉಮಾ ಮತ್ತು ಇತರರು ಘೋಷಣೆಗಳನ್ನು ಕೂಗಿದರು.

# ವಿಧಾನ ಪರಿಷತ್ ಸಭಾನಾಯಕನ ಹೊಣೆ ಯತೀಂದ್ರ ಹೆಗಲಿಗೆ

**ಬೆಂಗಳೂರು, ಆ.9:** ಮಾಜಿ ಸಿಎಂ ಸಿದ್ದರಾಮಯ್ಯ ಅವರ ಪುತ್ರ ಸಚಿವ ಯತೀಂದ್ರ ಅವರಿಗೆ ಮತ್ತೊಂದು ಪ್ರಮುಖ ಜವಾಬ್ದಾರಿ ಸಿಗುವುದು ಬಹುತೇಕ ಖಚಿತವಾಗಿದೆ. ಖಾಲಿ ಇರುವ ವಿಧಾನ ಪರಿಷತ್ ಸಭಾ ನಾಯಕನ ಹೊಣೆ ಯತೀಂದ್ರ ಸಿದ್ದರಾಮಯ್ಯನವರ ಹೆಗಲಿಗೆ ಬೀಳುವ ಸಾಧ್ಯತೆ ಇದ್ದು, ಪರಿಷತ್ನಿಂದ ಯತೀಂದ್ರ ಸಿದ್ದರಾಮಯ್ಯ ಮಾತ್ರ ಏಕೈಕ ಸಚಿವರಾಗಿರೋದೆ ಇದಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ.



ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ಎನ್ಎಸ್ ಬೋಸರಾಜ್ ಅವರು ಸಚಿವರಾಗಿದ್ದರು. ಜೊತೆಗೆ ವಿಧಾನಪರಿಷತ್ ಸಭಾನಾಯಕರಾಗಿದ್ದರು. ಅದರಂತೆ ಇದೀಗ ಯತೀಂದ್ರ ಸಿದ್ದರಾಮಯ್ಯ ನವರಿಗೆ ಸಭಾನಾಯಕ ಸ್ಥಾನ ಒಲಿಯಲಿದೆ. ಇನ್ನು ಆಗಸ್ಟ್ 13 ರಿಂದ ಮಳೆಗಾಲದ ಅಧಿವೇಶನ ನಡೆಯಲಿದ್ದು, ಈ ಸಂದರ್ಭದಲ್ಲಿ ಪರಿಷತ್ ನಲ್ಲಿ ಆಡಳಿತ ಪಕ್ಷವನ್ನು ಯತೀಂದ್ರ ಮುನ್ನಡೆಸಲಿದ್ದಾರೆ. ಇನ್ನು ಯತೀಂದ್ರಗೆ ಸಭಾ ನಾಯಕ ಸ್ಥಾನದ ಮೂಲಕ ಸಿದ್ದರಾಮಯ್ಯ ಮುನಿಸು ಕೂಡ ತಣಿಸುವ ಪ್ರಯತ್ನ ನಡೆದಿದೆ ಎನ್ನಲಾಗಿದೆ.

# ಪೊಲೀಸರ ಕಾರ್ಯಾಚರಣೆ: 105 ಅಕ್ರಮ ಬಾಂಗ್ಲಾದೇಶಿ ಪ್ರಜೆಗಳ ಬಂಧನ, ವಿಚಾರಣೆ



**ಬೆಂಗಳೂರು,ಆ.9:** ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳ ವಿರುದ್ಧ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದು, ಶನಿವಾರ ಒಟ್ಟು 105 ಮಂದಿ ಬಾಂಗ್ಲಾದೇಶಿ ಪ್ರಜೆಗಳನ್ನು ವಶಕ್ಕೆ ಪಡೆದಿದ್ದಾರೆ. ವೈಟ್‌ಫೀಲ್ಡ್ ಮತ್ತು ಎಲೆಕ್ಟ್ರಾನಿಕ್ ಸಿಟಿ ವಿಭಾಗಗಳಲ್ಲಿ ನಡೆಸಿದ ಕಾರ್ಯಾಚರಣೆ ಯಲ್ಲಿ 2,944 ಜನ ಶಂಕಿತರ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿದೆ. ಈ ಪೈಕಿ 105 ಬಾಂಗ್ಲಾದೇಶಿ ಪ್ರಜೆಗಳು ಪತ್ತೆಯಾಗಿದ್ದಾರೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿ ಮಾಧ್ಯಮ ಪ್ರಕಟಣೆಯ ಮೂಲಕ ಮಾಹಿತಿ ನೀಡಿದೆ.592 ಪೊಲೀಸ್ ಸಿಬ್ಬಂದಿ ಯನ್ನೊಳಗೊಂಡ ಒಟ್ಟು 58 ವಿಶೇಷ ತಂಡಗಳು ಕಾರ್ಯಾಚರಣೆ ಯಲ್ಲಿ ಪಾಲ್ಗೊಂಡಿದ್ದವು. ವೈಟ್ಫೀಲ್ಡ್ ವಿಭಾಗದಲ್ಲಿ 35 ವಿಶೇಷ ತಂಡಗಳು 1,035 ಜನರನ್ನು ಪರಿಶೀಲಿಸಿ, 62 ಅಕ್ರಮ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಿವೆ. ಎಲೆಕ್ಟ್ರಾನಿಕ್ ಸಿಟಿ ವಿಭಾಗದಲ್ಲಿ 23 ವಿಶೇಷ ತಂಡಗಳು 1,909 ಜನರನ್ನು ತಪಾಸಣೆ ನಡೆಸಿದ್ದು 43 ಅಕ್ರಮ ಬಾಂಗ್ಲಾ ವಲಸಿಗರು ಪತ್ತೆಯಾಗಿದ್ದಾರೆ.

## ಮೊದಲನೇ ಪುಟದಿಂದ- ಹರ್ ಘರ್ ತಿರಂಗಾ

ನಮ್ಮ ತ್ರಿವರ್ಣ ಧ್ವಜವು ನಮ್ಮ ಹೆಮ್ಮೆ ಮತ್ತು ರಾಷ್ಟ್ರಕ್ಕಾಗಿ ಯಾವಾಗಲೂ ನಮ್ಮ ಅತ್ಯುತ್ತಮ ವಾದದ್ದನ್ನು ನೀಡಲು ನಿರಂತರ ಸ್ಫೂರ್ತಿಯ ಮೂಲವಾಗಿದೆ" ಎಂದು ಪ್ರಧಾನಿ ಹೇಳಿದರು. ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಜನರನ್ನು ಒತ್ತಾಯಿಸುತ್ತಾ, 'ವಿಕಸಿತ ಭಾರತ' ಅಥವಾ ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ಸಾಮೂಹಿಕ ಸಂಕಲ್ಪವನ್ನು ನವೀಕರಿಸಲು ಈ ಉಪಕ್ರಮವು ಒಂದು ಅವಕಾಶವಾಗಿಯೂ ಕಾರ್ಯನಿರ್ವಹಿಸಬೇಕು ಎಂದು ಮೋದಿ ಹೇಳಿದರು. ಈ ವರ್ಷದ ಅಭಿಯಾನದ ವಿಶೇಷ ಮಹತ್ವವನ್ನು ಮೋದಿ ಅವರು ಒತ್ತಿ ಹೇಳಿದರು, ದೇಶವು ದೇಶಭಕ್ತಿ ಗೀತೆಯ 150 ನೇ ವಾರ್ಷಿಕೋತ್ಸವವನ್ನು ಸ್ಮರಿಸುತ್ತಿರುವ ಸಮಯದಲ್ಲಿ ಇದನ್ನು 'ವಂದೇ ಮಾತರಂ'ಗೆ ಸಮರ್ಪಿಸ ಲಾಗಿದೆ ಎಂದು ಗಮನಿಸಿದರು. "ಈ ವರ್ಷದ ಪ್ರಯತ್ನಗಳು ವಂದೇ ಮಾತರಂಗೆ ಸಮರ್ಪಿತವಾಗಿರುವುದಕ್ಕೆ ಸಂತೋಷವಾಗಿದೆ, ಅದರಲ್ಲೂ ನಾವು ಅದರ 150 ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ಸಮಯದಲ್ಲಿ" ಎಂದು ಅವರು ಹೇಳಿದರು. ಭಾರತದ 75ನೇ ಸ್ವಾತಂತ್ರ್ಯೋತ್ಸವದ ಆಚರಣೆಯ ಸಂದರ್ಭದಲ್ಲಿ ನಾಗರಿಕರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲು ಮತ್ತು ತ್ರಿವರ್ಣ ಧ್ವಜವನ್ನು ಆಚರಿಸುವ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲು ಹರ್ ಘರ್ ತಿರಂಗಾ ಅಭಿಯಾನವನ್ನು ಪ್ರಾರಂಭಿಸಲಾಯಿತು. ವರ್ಷಗಳಲ್ಲಿ, ದೇಶಭಕ್ತಿಯನ್ನು ಬೆಳೆಸುವ ಮತ್ತು ರಾಷ್ಟ್ರಧ್ವಜದೊಂದಿಗೆ ನಾಗರಿಕರ ಸಂಪರ್ಕವನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ರಾಷ್ಟ್ರವ್ಯಾಪಿ ಸಾರ್ವಜನಿಕ ಭಾಗವಹಿಸುವಿಕೆಯ ಉಪಕ್ರಮವಾಗಿ ಇದು ವಿಕಸನಗೊಂಡಿದೆ.

# ಮುಂದಿನ ಮೂರು ದಿನ ಮಳೆ ಮುಂದುವರಿಕೆ: ಹವಾಮಾನ ಇಲಾಖೆ



**ಬೆಂಗಳೂರು,ಆ.9:** ರಾಜ್ಯದ ಮಲೆನಾಡು, ಕರಾವಳಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅಬ್ಬರಿಸಿದ್ದ ಮುಂಗಾರು ಮಳೆ ಕೊಂಚ ದುರ್ಬಲ ಗೊಂಡಿದೆ. ಒಳನಾಡು ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಹಗುರ ಮಳೆ ಸುರಿಯುತ್ತಿದ್ದು, ಪಶ್ಚಿಮ ಘಟ್ಟಗಳ ಸಾಲಿನ ಕೆಲವು ಜಿಲ್ಲೆಗಳಲ್ಲಿ ಭಾರೀ ಮಳೆ ಆಗುತ್ತಿದೆ. ಈ ಮಳೆ ಮುಂದಿನ ಮೂರು ದಿನ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ಬಂಗಾಳಕೊಲ್ಲಿ, ಅರಬ್ಬಿ ಸಮುದ್ರ ಮಟ್ಟದಲ್ಲಿ ಸಾಮಾನ್ಯ ವಾತಾವರಣವಿದ್ದು, ತೀವ್ರ ಸ್ವರೂಪ ಬದಲಾವಣೆ, ವಾಯು ಚಂಡಮಾರುತ ಪ್ರಸರಣ, ವಾಯುಭಾರ ಕುಸಿತದಂತಹ ಬದಲಾವಣೆಗಳು ಸದ್ಯಕ್ಕಿಲ್ಲ. ಈ ಕಾರಣದಿಂದ ಕರಾವಳಿ, ಮಲೆನಾಡಿನಲ್ಲಿ ಮಳೆ ತಗ್ಗಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಹಗುರದಿಂದ ಸಾಮಾನ್ಯ ಮಳೆ ಆಗುತ್ತಿದೆ.

ಗಂಟೆಗೆ 30 ಕಿಲೋ ಮೀಟರ್ ವೇಗದಲ್ಲಿ ಗಾಳಿ ಸಹಿತ 65 ರಿಂದ 115ಮಿಲಿ ಮೀಟರ್ ವರೆಗೆ ಭಾರೀ ಮಳೆ ಆಗಲಿದ್ದು, 'ಯೆಲ್ಲೋ ಅಲರ್ಟ್' ನೀಡಲಾಗಿದೆ.ಒಟ್ಟು ಐದು ದಿನಗಳ ಪೈಕಿ ಕೇವಲ ಎರಡು ದಿನ ಭಾರೀ ಮಳೆ ನಿರೀಕ್ಷೆ ಇದೆ.

ರಾಜಧಾನಿ ಬೆಂಗಳೂರಿನಲ್ಲಿ ಕಳೆದೊಂದು ವಾರದಿಂದ ಮಬ್ಬು ಕವಿದ ವಾತಾವರಣವೇ ಕಂಡು ಬರುತ್ತಿದೆ. ವಿವಿಧೆಡೆ ಸಂಜೆ ಹೊತ್ತಿಗೆ ಮಳೆ ಜಮಾಯಿಸುತ್ತಿದ್ದು, ಅಲ್ಲಲ್ಲಿ ಹಗುರ ಮಳೆ, ಜಿಟಿ ಜಿಟಿ ಮಳೆ ಸುರಿಯುತ್ತಿದೆ. ಮುಂದಿನ ಇನ್ನೂ ಕೆಲವು ದಿನಗಳ ಕಾಲ ಇದೇ ರೀತಿಯ ವಾತಾವರಣ ಕಂಡು ಬರಲಿದೆ. ಕೇರಳ, ಪಶ್ಚಿಮ ಘಟ್ಟಗಳು, ರಾಜ್ಯದ ಮಲೆನಾಡಿನಲ್ಲಿ ಸುರಿದ ನಿರಂತರ ಮಳೆಯಿಂದಾಗಿ ವಾಣಿವಿಲಾಸ, ತುಂಗಾ, ಭದ್ರಾ, ತುಂಗಭದ್ರಾ, ಲಿಂಗನಮಕ್ಕಿ, ಆಲಮಟ್ಟಿ, ಹಾರಂಗಿ, ಕೆ.ಆರ್ ಎಸ್ ಸೇರಿದಂತೆ ಅನೇಕ ಜಲಾಶಯಗಳಲ್ಲಿ ಒಳಹರಿವು ಏರಿಕೆ ಆಗಿದೆ. ಬರಗಾಲ ಛಾಯೆ ಆವರಿಸಿದ್ದ ಕರ್ನಾಟಕದಲ್ಲಿ ನೀರಾವರಿ ಅವಲಂಬಿತ ರೈತರಿಗೆ ಕೊಂಚ ನೆಮ್ಮದಿ ಸಿಕ್ಕಂತಾಗಿದೆ. ಒಣಬೇಸಾಯ ಅಥವಾ ಮಳೆ ಆಶ್ರಿತ ರೈತರ ಸಂಕಷ್ಟ ಮುಂದುವರಿದಿದೆ.

# ಆ.15ರಂದು ಸ್ವಾತಂತ್ರ್ಯ ಹಬ್ಬ: ವಿಧಾನಸೌಧ ಸಭಾಂಗಣ ವೀಕ್ಷಿಸುವ ಅಪರೂಪದ ಅವಕಾಶ



**ಬೆಂಗಳೂರು,ಆ.9:** ಸ್ವಾತಂತ್ರ್ಯ ದಿನಾಚರಣೆಯಂದು ಬೆಂಗಳೂರಿನ ಮಕ್ಕಳಿಗೆ ವಿಧಾನಸೌಧದೊಳಗೆ ಪ್ರವೇಶಿಸಿ ಭವ್ಯ ವಿಧಾನಸಭಾ ಸಭಾಂಗಣವನ್ನು ವೀಕ್ಷಿಸುವ ಅಪರೂಪದ ಅವಕಾಶ ದೊರೆಯಲಿದೆ.

ಆಗಸ್ಟ್ 15ರಂದು ಆಯೋಜಿಸಿರುವ 'ಫ್ರೀಡಂ ಹಬ್ಬ'ದ ಅಂಗವಾಗಿ ಮಕ್ಕಳಿಗಾಗಿ ವಿಶೇಷ ಮಾರ್ಗದರ್ಶಿತ ವಿಧಾನಸೌಧ ಪ್ರವಾಸವನ್ನು ಆಯೋಜಿಸಲಾಗಿದೆ.

ಮಕ್ಕಳೊಂದಿಗೆ ಬರುವ ಪೋಷಕರಿಗೂ ವಿಧಾನಸೌಧ ಪ್ರವೇಶಿಸಿ ವಿಧಾನಸಭಾ ಸಭಾಂಗಣ ವೀಕ್ಷಿಸಲು ಅವಕಾಶವಿದೆ. ಫ್ರೀಡಂ ಹಬ್ಬದಲ್ಲಿ ಮಕ್ಕಳಿಗಾಗಿ ಮಕ್ಕಳ ಮೇಳ, ಸಂವಾದಾತ್ಮಕ ಆಟಗಳು, ಕಥೆ ಹೇಳುವ ಕಾರ್ಯಕ್ರಮಗಳು, ಕಲೆ-ಕರಕುಶಲ ಚಟುವಟಿಕೆಗಳು, ಸೃಜನಾತ್ಮಕ ಕಾರ್ಯಾಗಾರಗಳು, ರಸಪ್ರಶ್ನೆಗಳು ಹಾಗೂ ವಿವಿಧ ಕುಟುಂಬ ಚಟುವಟಿಕೆಗಳನ್ನು ಆಯೋಜಿಸಲಾಗಿದೆ.

'ಸ್ವಾತಂತ್ರ್ಯ ಗ್ರಾಮ'ದಲ್ಲಿ ಕಲಾವಿದರು, ಸ್ವಾತಂತ್ರ್ಯ ಹೋರಾಟಗಾರರ ಬದುಕು ಮತ್ತು ಹೋರಾಟವನ್ನು ಮಕ್ಕಳಿಗೆ ಪರಿಚಯಿಸಲಿದ್ದಾರೆ. ವಿಧಾನಸೌಧ ವೀಕ್ಷಣೆಯ ಜೊತೆಗೆ ಸ್ವಾತಂತ್ರ್ಯ ಹೋರಾಟದ ಜೀವಂತ ವಸ್ತುಸಂಗ್ರಹಾಲಯ, ಕರ್ನಾಟಕ ಸ್ವಾತಂತ್ರ್ಯ ಪಥ, ಸಂವಿಧಾನ ಚೌಕ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಮಕ್ಕಳು ಮತ್ತು ಕುಟುಂಬಗಳು ವೀಕ್ಷಿಸ ಬಹುದಾಗಿದೆ.

ಇತ್ತೀಚೆಗೆ ಫ್ರೀಡಂ ಹಬ್ಬದ ಬಗ್ಗೆ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ, ಸಮಾಲೋಚಿಸಿದರು.

'ನಮ್ಮ ಮಕ್ಕಳಿಗಾಗಿ ವಿಧಾನ ಸೌಧದ ಬಾಗಿಲುಗಳನ್ನು ತೆರೆಯುತ್ತಿದ್ದೇವೆ. ಆಗಸ್ಟ್ 15ರಂದು ಒಳಗೆ ಕಾಲಿಡುವ ಪ್ರತಿಯೊಬ್ಬ ಮಗುವೂ ಜೀವನಪರ್ಯಂತ ಉಳಿಯುವ ನೆನಪಿನೊಂದಿಗೆ ಮನೆಗೆ ಮರಳಬೇಕು ಎಂಬುದು ನಮ್ಮ ಆಶಯ. ಮಕ್ಕಳು ಸ್ವಾತಂತ್ರ್ಯವನ್ನು ಸಂಭ್ರಮಿಸುವುದರ ಜೊತೆಗೆ ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ನಾಗರಿಕ ಹೊಣೆಗಾರಿಕೆಯನ್ನು ಅರ್ಥಮಾಡಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

'ನಮ್ಮ ಊರು. ನಿಮ್ಮ ಊರು. ಎಲ್ಲರ ಬೆಂಗಳೂರು' ಎಂಬ ಆಶಯದೊಂದಿಗೆ ನಡೆಯಲಿರುವ ಫ್ರೀಡಂ ಹಬ್ಬದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಇಂಡಿಯಾ ಪೆರೇಡ್, ವಿವಿಧ ಪ್ರದೇಶಗಳ ಪಾಕಪದ್ಧತಿ, ಕರಕುಶಲ ವಸ್ತುಗಳು, ಜೀವಂತ ವಸ್ತುಸಂಗ್ರಹಾಲಯ, ವಿವಿಧ ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟವನ್ನು ಬಿಂಬಿಸುವ ಮಂಟಪಗಳು, ಸಂವಿಧಾನ ಚೌಕ ಹಾಗೂ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ. ವಿಧಾನಸೌಧ ಪ್ರವೇಶಕ್ಕಾಗಿ ನೋಂದಣಿ ಕಡ್ಡಾಯ ವಾಗಿದ್ದು, ಕಾರ್ಯಕ್ರಮದ ಪೋಸ್ಟ್ ನಲ್ಲಿರುವ ಕ್ಯೂ ಆರ್ ಕೋಡ್ ಮೂಲಕ ಮಕ್ಕಳು ಹಾಗೂ ಕುಟುಂಬಗಳು ನೋಂದಣಿ ಮಾಡಿ ಕೊಳ್ಳಬಹುದಾಗಿದೆ.

# ಮತದಾರರಲ್ಲದವರ ಪಾಸ್‌ಪೋರ್ಟ್ ರದ್ದಾಗುವ ಆತಂಕ: ಮತದಾರರ ಗುರುತಿನ ಚೀಟಿಯೊಂದಿಗೆ ಪಾಸ್‌ಪೋರ್ಟ್ ಜೋಡಿಸಲು ಚಿಂತನೆ

**ಬೆಂಗಳೂರು,ಆ.9:** ಮೊದಲ ಹಂತದ ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ನಾಪತ್ತೆ, ಸ್ಥಳಾಂತರ, ಡೂಪ್ಲಿಕೇಟ್, ಸಾವು ಹಾಗೂ ಇತರೆ ಕಾರಣಗಳಿಂದಾಗಿ ಒಂದು ಕೋಟಿಗೂ ಅಧಿಕ ಮಂದಿ ಮತದಾರರು ಮತದಾರರ ಕರಡು ಪಟ್ಟಿಯಿಂದ ಹೊರಗುಳಿಯುವ ಭೀತಿಯ ನಡುವೆಯೇ ಮತದಾರರ ಗುರುತಿನ ಚೀಟಿಯನ್ನು ಪಾಸ್ ಪೋರ್ಟ್ ಜೊತೆ ಜೋಡಿಸಲು ಚುನಾವಣಾ ಆಯೋಗ ಗಂಭೀರ ಚಿಂತನೆ ನಡೆಸಿದೆ.

ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿದ್ದಲ್ಲಿ ಪಾಸ್ ಪೋರ್ಟ್ ರದ್ದುಪಡಿಸುವ ಬಗ್ಗೆಯೂ ಆಯೋಗದ ಮಟ್ಟದಲ್ಲಿ ಚರ್ಚೆ ನಡೆಯುತ್ತಿವೆ. ಇದರಿಂದಾಗಿ ದೇಶ, ವಿದೇಶಗಳಲ್ಲಿ ನೆಲೆಸಿರುವವರಲ್ಲಿ, ಅದರಲ್ಲೂ ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ಭಾಗಿಯಾದವರಲ್ಲಿ ತಳಮಳ ಶುರುವಾಗಿದೆ. ಮತದಾರರ ಗುರುತಿನ ಚೀಟಿಯೊಂದಿಗೆ ಆಧಾರ್ ಜೋಡಿಸಿದ ಬಳಿಕ ಪಾಸ್ ಪೋರ್ಟ್ ನೊಂದಿಗೆ ಜೋಡಿಸಲು ಉದ್ದೇಶಿಸಲಾಗಿದೆ ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ದೇಶದ ಪ್ರಜೆ ಕಡ್ಡಾಯವಾಗಿ ಮತದಾನದ ಹಕ್ಕು ಹೊಂದಿರಬೇಕು. ಮತದಾರರು ಮಾತ್ರ ಎಲ್ಲಾ ಸೌಲಭ್ಯಗಳನ್ನು ಪಡೆಯಬೇಕು ಎಂಬುದು ಚರ್ಚಾ ಹಂತದಲ್ಲಿದೆ. ಒಂದು ಕಾಲದಲ್ಲಿ ಪಾಸ್ ಪೋರ್ಟ್ ಹೊಂದುವುದು ಪ್ರತಿಷ್ಠೆಯಾಗಿತ್ತು. ಆದರೀಗ ಪಾಸ್ ಪೋರ್ಟ್ ಪಡೆಯುವುದು ಸರ್ವೆ ಸಾಮಾನ್ಯವಾಗಿದೆ. ಎಲ್ಲಾ ದಾಖಲೆಗಳನ್ನು ನೀಡಿ ಪಾಸ್ ಪೋರ್ಟ್ ಪಡೆಯುವಾಗ ಮತದಾರರ ಗುರುತಿನ ಚೀಟಿಯನ್ನು ಸಹ ಕಡ್ಡಾಯಗೊಳಿಸಬೇಕು ಎನ್ನುವ ಚಿಂತನೆ ಕೇಂದ್ರ ಸರ್ಕಾರದ ಹಂತದಲ್ಲೂ ನಡೆಯುತ್ತಿದೆ.

ರಾಜ್ಯದಲ್ಲೂ ಪಂಚ ಗ್ಯಾರೆಂಟಿ ಯೋಜನೆಗಳ ಸೌಲಭ್ಯ ಪಡೆಯಲು ಫಲಾನುಭವಿಗಳು ರಾಜ್ಯದ ಮತದಾರರಾಗಿರಬೇಕು ಎನ್ನುವ ನಿಯಮವನ್ನು ತರಲಾಗುತ್ತಿದೆ. ಎಸ್.ಐ.ಆರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಪಂಚ ಗ್ಯಾರೆಂಟಿ ಸೌಲಭ್ಯಗಳನ್ನು ಮತದಾರರಿಗೆ ಅನ್ವಯಿಸಲಾಗುತ್ತಿದೆ. ಅನ್ಯ ರಾಜ್ಯದ ಮತದಾರರನ್ನು ಸೌಲಭ್ಯದಿಂದ ಹೊರಗಿಡಲು ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದೆ.

ಕರ್ನಾಟಕ, ದೆಹಲಿ, ಮಹಾರಾಷ್ಟ್ರ, ಮೇಘಾಲಯ ಮತ್ತು ಜಾರ್ಖಂಡ್ ಸೇರಿದಂತೆ ದೇಶದ ಐದು ರಾಜ್ಯಗಳಲ್ಲಿ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ' ಪ್ರಕ್ರಿಯೆ ಆರಂಭವಾಗಿದೆ. ಇದೇ ಸಮಯದಲ್ಲಿ, ಪಾಸ್‌ಪೋರ್ಟ್ ಅನ್ನು ಗುರುತಿನ ಚೀಟಿಯಾಗಿ ಬಳಸುವ ಬಗ್ಗೆ ಸಾರ್ವಜನಿಕರಲ್ಲಿ ಮೂಡಿದ್ದ ದೊಡ್ಡ ಗೊಂದಲಕ್ಕೂ ಕೇಂದ್ರ ಚುನಾವಣಾ ಆಯೋಗ ತೆರೆ ಎಳೆದಿದೆ.

ಇತ್ತೀಚೆಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ 1967ರ ಪಾಸ್‌ಪೋರ್ಟ್ ಕಾಯ್ದೆಯನ್ನು ಉಲ್ಲೇಖಿಸಿ ಮಹತ್ವದ ಸ್ಪಷ್ಟನೆಯೊಂದನ್ನು ನೀಡಿತ್ತು. "ಪಾಸ್‌ಪೋರ್ಟ್ ಕೇವಲ ವಿದೇಶ ಪ್ರವಾಸಕ್ಕಾಗಿ ಬಳಸುವ ಪ್ರಯಾಣ ದಾಖಲೆಯಾಗಿದೆಯೇ ಹೊರತು, ಅದು ಭಾರತದ ಪೌರತ್ವಕ್ಕೆ ಪುರಾವೆಯಲ್ಲ. ಈ ನಿಯಮದಲ್ಲಿ ಮೋದಿ ಸರ್ಕಾರ ಕಳೆದ 12 ವರ್ಷಗಳಲ್ಲಿ ಯಾವುದೇ ಹೊಸ ನಿರ್ಧಾರ ಕೈಗೊಂಡಿಲ್ಲ" ಎಂದು ಸಚಿವಾಲಯ ತಿಳಿಸಿತ್ತು. ವಿದೇಶ ಪ್ರವಾಸದ ಸಂದರ್ಭದಲ್ಲಿ ಪಾಸ್‌ಪೋರ್ಟ್ ನಿಮ್ಮ ರಾಷ್ಟ್ರೀಯತೆಯನ್ನು ದೃಢೀಕರಿಸುತ್ತದೆಯಾದರೂ, ಅದನ್ನು ಪೌರತ್ವದ ದೃಢೀಕರಣ ಪತ್ರ ಎಂದು ಪರಿಗಣಿಸಲಾಗದು ಎಂದು ಅಧಿಕಾರಿಗಳು ಮಾಧ್ಯಮ ಸಂವಾದದಲ್ಲಿ ಹೇಳಿದ್ದರು. ಸಚಿವಾಲಯದ ಈ ಹೇಳಿಕೆಯ ಬೆನ್ನಲ್ಲೇ, ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಪಾಸ್‌ಪೋರ್ಟ್ ಮಾನ್ಯತೆ ಪಡೆಯುತ್ತದೆಯೇ ಅಥವಾ ಇಲ್ಲವೇ ಎಂಬ ಸಂಶಯಗಳು ವ್ಯಕ್ತವಾಗಿದ್ದವು.

ಮತದಾರರ ಪಟ್ಟಿ ಪರಿಷ್ಕರಣೆಯ ಹೊಸ್ತಿಲಲ್ಲಿ ಎದ್ದಿರುವ ಈ ಗೊಂದಲ ಕುರಿತು ಆಯೋಗ ಸ್ಪಷ್ಟನೆ ನೀಡಿದ್ದು, ಮತದಾರರ ಪಟ್ಟಿ ಪರಿಷ್ಕರಣೆಗೆ ಪಾಸ್‌ಪೋರ್ಟ್ ಸಂಪೂರ್ಣವಾಗಿ ಮಾನ್ಯವಾಗಿದೆ. ಅಗತ್ಯವಿರುವ ಒಟ್ಟು 12 ಅಧಿಕೃತ ದಾಖಲೆಗಳ ಪಟ್ಟಿಯಲ್ಲಿ ಪಾಸ್‌ಪೋರ್ಟ್ ಕೂಡ ಒಂದಾಗಿದೆ ಎಂದು ಆಯೋಗ ಖಚಿತಪಡಿಸಿದೆ. "ಪಾಸ್‌ಪೋರ್ಟ್ ಈ ಹಿಂದೆಯೂ ವ್ಯಕ್ತಿಯ ಗುರುತನ್ನು ಸ್ಥಾಪಿಸುವ ಪ್ರಮುಖ ದಾಖಲೆಯಾಗಿತ್ತು ಮತ್ತು ಮುಂದೆಯೂ ಹಾಗೆಯೇ ಮುಂದುವರಿಯಲಿದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ" ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಮತದಾರರ ಪಟ್ಟಿಯಲ್ಲಿ ಹೆಸರು




ನೋಂದಾಯಿಸಲು ಅಥವಾ ತಿದ್ದುಪಡಿ ಮಾಡಲು ಪಾಸ್‌ಪೋರ್ಟ್ ಮಾತ್ರವಲ್ಲದೆ ಇತರೆ ಪ್ರಮುಖ ದಾಖಲೆಗಳನ್ನೂ ಬಳಸಬಹುದಾಗಿದೆ. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಜನ್ಮ ಪ್ರಮಾಣ ಪತ್ರ, ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು ನೀಡಿರುವ ಶೈಕ್ಷಣಿಕ ಪ್ರಮಾಣಪತ್ರಗಳು ಮತ್ತು ಸರ್ಕಾರ ಅಂಗೀಕರಿಸಿರುವ ಇತರ ಅಗತ್ಯ ಗುರುತಿನ ಚೀಟಿಗಳನ್ನು ಇದಕ್ಕಾಗಿ ಬಳಸಬಹುದು ಎಂದು ಆಯೋಗ ತಿಳಿಸಿದೆ.

ಮತದಾರರ ಗುರುತಿನ ಚೀಟಿಯನ್ನು ಪಾಸ್ ಪೋರ್ಟ್ ಜೊತೆ ಜೋಡಿಸುವ ಕುರಿತ ಚರ್ಚೆ ಮಹತ್ವದ ಬೆಳವಣಿಗೆಯಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರ ಗುರುತನ್ನು ಇನ್ನಷ್ಟು ನಿಖರವಾಗಿ ದೃಢೀಕರಿಸುವ, ನಕಲಿ ಅಥವಾ ಒಂದಕ್ಕಿಂತ ಹೆಚ್ಚು ಮತದಾರರ ನೋಂದಣಿಯನ್ನು ತಡೆಯುವುದು ಹಾಗೂ ಮತದಾರರ ಪಟ್ಟಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವುದು ಇಂತಹ ಕ್ರಮಗಳ ಹಿಂದಿನ ಉದ್ದೇಶಗಳಾಗಿವೆ.

ಪಾಸ್ ಪೋರ್ಟ್ ದೇಶದ ಅತ್ಯಂತ ವಿಶ್ವಾಸಾರ್ಹ ಗುರುತಿನ ದಾಖಲೆಗಳಲ್ಲೊಂದು. ವ್ಯಕ್ತಿಯ ಹೆಸರು, ಜನ್ಮ ದಿನಾಂಕ, ವಿಳಾಸ ಸೇರಿದಂತೆ ಹಲವು ವಿವರಗಳು ಅದರಲ್ಲಿವೆ. ಮತದಾರರ ಗುರುತಿನ ಚೀಟಿಯೊಂದಿಗೆ ಪಾಸ್ ಪೋರ್ಟ್ ಮಾಹಿತಿಯನ್ನು ಜೋಡಿಸುವುದರಿಂದ ಒಬ್ಬ ವ್ಯಕ್ತಿಯ ಗುರುತನ್ನು ಎರಡು ಪ್ರತ್ಯೇಕ ವ್ಯವಸ್ಥೆಗಳ ಮೂಲಕ ಪರಿಶೀಲಿಸುವ ಸಾಧ್ಯತೆ ಸಿಗಲಿದ್ದು, ಇದರಿಂದ ಮತದಾರರ ಪಟ್ಟಿಯಲ್ಲಿನ ನಕಲಿ ದಾಖಲೆಗಳನ್ನು ಪತ್ತೆಹಚ್ಚಲು ಸಹಾಯವಾಗಬಹುದು.

ಚುನಾವಣಾ ಪಟ್ಟಿಗಳಲ್ಲಿ ಒಂದಕ್ಕಿಂತ ಹೆಚ್ಚು ಕಡೆ ಇದ್ದರೆ ತೆಗೆಯಲು, ಪಾಸ್‌ಪೋರ್ಟ್ ಅನ್ನು ಮತ್ತೊಂದು ಗುರುತಿನ ದಾಖಲೆಯೊಂದಿಗೆ ಜೋಡಿಸುವ ವ್ಯವಸ್ಥೆ ಜಾರಿಗೆ ಆಯೋಗ ಚಿಂತಿಸಿದೆ. ಇದನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸಿದರೆ ಮತದಾರರಿಗೂ ಕೆಲವು ಅನುಕೂಲಗಳನ್ನು ನೀಡಬಹುದು. ಗುರುತಿನ ಪರಿಶೀಲನೆಗೆ ವೇಗವಾಗಬಹುದು. ವಿಳಾಸ ಬದಲಾವಣೆ ಅಥವಾ ವೈಯಕ್ತಿಕ ಮಾಹಿತಿಯಲ್ಲಿನ ತಿದ್ದುಪಡಿಗಳನ್ನು ಸುಲಭವಾಗಿ ನಿರ್ವಹಿಸಲು ಅವಕಾಶ ಸಿಗಬಹುದು. ಚುನಾವಣಾ ಪಟ್ಟಿಗಳ ನಿರ್ವಹಣೆಯಲ್ಲಿಯೂ ಹೆಚ್ಚಿನ ನಿಖರತೆ ಬರಬಹುದು.

ಆದರೆ ಪಾಸ್‌ಪೋರ್ಟ್ ಹೊಂದಿರದ ನಾಗರಿಕರ ವಿಚಾರದಲ್ಲಿ ವಿಶೇಷ ವ್ಯವಸ್ಥೆ ಅಗತ್ಯವಾಗುತ್ತದೆ. ಭಾರತದಲ್ಲಿ ಎಲ್ಲರೂ ಪಾಸ್ ಪೋರ್ಟ್ ಹೊಂದಿಲ್ಲ. ಹೀಗಾಗಿ ಮತದಾನದ ಹಕ್ಕು ಮತ್ತು ಪಾಸ್ ಪೋರ್ಟ್ ಹೊಂದಿರುವುದನ್ನು ಪರಸ್ಪರ ಅವಲಂಬಿತಗೊಳಿಸುವ ಯಾವುದೇ ವ್ಯವಸ್ಥೆ ಅಸಮಾನತೆಯನ್ನು ಉಂಟುಮಾಡಬಾರದು.

ಈ ಪ್ರಸ್ತಾವನೆಯ ಅತ್ಯಂತ ಸೂಕ್ಷ್ಮ ಅಂಶವೆಂದರೆ ವೈಯಕ್ತಿಕ ಮಾಹಿತಿಯ ಗೌಪ್ಯತೆ. ಮತದಾರರ ಮಾಹಿತಿ ಮತ್ತು ಪಾಸ್ ಪೋರ್ಟ್ ಮಾಹಿತಿಯನ್ನು ಪರಸ್ಪರ ಜೋಡಿಸಿದಾಗ ದೊಡ್ಡ ಪ್ರಮಾಣದ ವೈಯಕ್ತಿಕ ದತ್ತಾಂಶ ಒಂದೇ ವ್ಯವಸ್ಥೆಯಲ್ಲಿ ಲಭ್ಯವಾಗುವ ಸಾಧ್ಯತೆ ಇದೆ. ಈ ಮಾಹಿತಿಯನ್ನು ಯಾರು ನಿರ್ವಹಿಸುತ್ತಾರೆ? ಯಾವ ಉದ್ದೇಶಕ್ಕಾಗಿ ಬಳಸುತ್ತಾರೆ? ಯಾರಿಗೆ ಪ್ರವೇಶ ಇರುತ್ತದೆ? ಮಾಹಿತಿ ಸೋರಿಕೆಯಾದರೆ ಹೊಣೆಗಾರರು ಯಾರು? ಇಂತಹ ಪ್ರಶ್ನೆಗಳಿಗೆ ಸ್ಪಷ್ಟವಾದ ಕಾನೂನು ಮತ್ತು ತಾಂತ್ರಿಕ ಸುರಕ್ಷತಾ ಕ್ರಮಗಳು ಸಹ ಅಗತ್ಯವಾಗಿವೆ.

ಚುನಾವಣಾ ವ್ಯವಸ್ಥೆಯಲ್ಲಿ ವಿಶ್ವಾಸ ಅತ್ಯಂತ ಮುಖ್ಯ. ಆದ್ದರಿಂದ ದತ್ತಾಂಶದ ಸುರಕ್ಷತೆ ಮಾತ್ರವಲ್ಲದೆ, ನಾಗರಿಕರಿಗೆ ತಮ್ಮ ಮಾಹಿತಿಯನ್ನು ಹೇಗೆ ಬಳಸಲಾಗುತ್ತಿದೆ ಎಂಬುದರ ಕುರಿತು ಪಾರದರ್ಶಕ ಮಾಹಿತಿ ನೀಡುವುದು ಕೂಡ ಅಗತ್ಯ. ಮತದಾರರ ಗುರುತಿನ ಚೀಟಿ ಮತ್ತು ಪಾಸ್‌ಪೋರ್ಟ್ ಜೋಡಣೆಯ ಉದ್ದೇಶ ಚುನಾವಣಾ ಪ್ರಕ್ರಿಯೆಯನ್ನು ಬಲಪಡಿಸುವುದಾಗಿರಬೇಕು; ಮತದಾರರ ಹಕ್ಕನ್ನು ನಿರ್ಬಂಧಿಸುವುದಾಗಿರಬಾರದು. ತಾಂತ್ರಿಕ ದೋಷ, ದಾಖಲೆಗಳಲ್ಲಿನ ವ್ಯತ್ಯಾಸ ಅಥವಾ ಪಾಸ್ ಪೋರ್ಟ್ ಮಾಹಿತಿಯ ಕೊರತೆಯಿಂದ ಅರ್ಹ ಮತದಾರರ ಹೆಸರು ಚುನಾವಣಾ ಪಟ್ಟಿಯಿಂದ ಹೊರಗುಳಿಯುವ ಪರಿಸ್ಥಿತಿ ಉಂಟಾಗಬಾರದು.

ಯಾವುದೇ ಜೋಡಣಾ ವ್ಯವಸ್ಥೆ ಜಾರಿಯಾದರೂ, ತಪ್ಪಾಗಿ ಹೆಸರು ತೆಗೆದುಹಾಕಲ್ಪಟ್ಟರೆ ಅದನ್ನು ಸರಿಪಡಿಸಿಕೊಳ್ಳಲು ಸರಳ ಮತ್ತು ತ್ವರಿತ ಮೇಲ್ಮನವಿ ವ್ಯವಸ್ಥೆ ಇರಬೇಕು. ಮತದಾರರಿಗೆ ತಮ್ಮ ದಾಖಲೆಗಳನ್ನು ಪರಿಶೀಲಿಸುವ ಮತ್ತು ತಪ್ಪುಗಳನ್ನು ತಿದ್ದಿಕೊಳ್ಳುವ ಅವಕಾಶವೂ ದೊರೆಯಬೇಕು.

ಚುನಾವಣಾ ಸುಧಾರಣೆಯಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸಬಹುದು. ಆದರೆ ಕೇವಲ ಎರಡು ಗುರುತಿನ ದಾಖಲೆಗಳನ್ನು ಜೋಡಿಸುವುದರಿಂದಲೇ ಚುನಾವಣಾ ವ್ಯವಸ್ಥೆಯ ಎಲ್ಲ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಚುನಾವಣಾ ಪಟ್ಟಿಗಳ ನಿರಂತರ ಪರಿಷ್ಕರಣೆ, ಪಾರದರ್ಶಕ ಪ್ರಕ್ರಿಯೆಗಳು, ಬಲವಾದ ದತ್ತಾಂಶ ಭದ್ರತೆ ಮತ್ತು ಸ್ವತಂತ್ರ ಮೇಲ್ವಿಚಾರಣೆ ಕೂಡ ಅಗತ್ಯ ಎನ್ನುತ್ತಾರೆ ಚುನಾವಣಾ ತಜ್ಞರು.

ಪಾಸ್ ಪೋರ್ಟ್ ಜೋಡಿಸುವ ಚಿಂತನೆ ಚುನಾವಣಾ ಪಟ್ಟಿಗಳ ನಿಖರತೆ ಮತ್ತು ನಕಲಿ ನೋಂದಣಿಯನ್ನು ನಿಯಂತ್ರಿಸುವ ದೃಷ್ಟಿಯಿಂದ ಪ್ರಯೋಜನವಾಬಹುದು. ಅದರ ಅನುಷ್ಠಾನದಲ್ಲಿ ಗೌಪ್ಯತೆ, ಸಮಾನತೆ, ದತ್ತಾಂಶ ಭದ್ರತೆ ಮತ್ತು ಮತದಾನದ ಹಕ್ಕಿನ ರಕ್ಷಣೆಗಳಿಗೆ ಮೊದಲ ಆದ್ಯತೆ ನೀಡಬೇಕು. ಚುನಾವಣಾ ವ್ಯವಸ್ಥೆಯ ತಂತ್ರಜ್ಞಾನದ ಅಂತಿಮ ಗುರಿ ಕೇವಲ ದಾಖಲೆಗಳನ್ನು ಜೋಡಿಸುವುದಲ್ಲ; ಪ್ರತಿಯೊಬ್ಬ ಅರ್ಹ ನಾಗರಿಕನ ಮತದಾನದ ಹಕ್ಕು ಸುರಕ್ಷಿತವಾಗಿರುವ, ಪಾರದರ್ಶಕ ಮತ್ತು ವಿಶ್ವಾಸಾರ್ಹ ಚುನಾವಣಾ ವ್ಯವಸ್ಥೆಯನ್ನು ನಿರ್ಮಿಸುವುದಾಗಿರಬೇಕು.

– ನಂಜುಂಡಪ್ಪ.ವಿ

### ರತ್ನಪಾಲ ಶೆಟ್ಟಿ ಅವರ ತತ್ವಾದರ್ಶಗಳನ್ನು ಮುನ್ನಡೆಸುತ್ತಿರುವುದು ಶ್ಲಾಘನೀಯ

# ಕಾನೂನುಗಳು ಸರಳವಾಗಿದ್ದಾಗ ಮಾತ್ರ ಜನಸಾಮಾನ್ಯರಿಗೆ ಅನುಕೂಲ: ಬೊಮ್ಮಾಯಿ ಪ್ರತಿಪಾದನೆ




ಹುಬ್ಬಳ್ಳಿ: ಹೊಸ ಕಾನೂನುಗಳು ಬಂದಾಗ ಹಳೆಯ ಮತ್ತು ಹೊಸ ವ್ಯವಸ್ಥೆಯ ನಡುವೆ 'ಸಂಕ್ರಮಣ ಕಾಲ' ಏರ್ಪಡುತ್ತದೆ. ಉದ್ಯಮಿಗಳು ಹಾಗೂ ವ್ಯಾಪಾರಸ್ಥರು ಹಳೆಯ ನಿಯಮಗಳ ಪ್ರಕಾರ ಸಲ್ಲಿಸಿದ ದಾಖಲೆಗಳಿಗೂ ಅಧಿಕಾರಿಗಳು ಹೊಸ ನಿಯಮಗಳಡಿ ನೋಟಿಸ್ ನೀಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಬದಲಾವಣೆಯ ಅವಧಿ ಅತ್ಯಂತ ಸೂಕ್ಷ್ಮ ಹಾಗೂ ಅಪಾಯಕಾರಿಯಾದುದು. ಕಾನೂನುಗಳು ಸರಳವಾಗಿದ್ದಾಗ ಮಾತ್ರ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಹುಬ್ಬಳ್ಳಿಯ ಕೇಶ್ವಾಪುರದ ಗ್ರ್ಯಾಂಡ್ ಲಾನ್ಸ್‌ನಲ್ಲಿ ರತ್ನಪಾಲ್ ಶೆಟ್ಟಿ ಅವರ ತೆರಿಗೆ ವಕೀಲರ ಕಚೇರಿಯ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ದಿವಂಗತ ರತ್ನಪಾಲ ಎ. ಶೆಟ್ಟಿ ಅವರು ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಅತ್ಯಂತ ಸರಳ ಹಾಗೂ ಆತ್ಮೀಯವಾದ ಸ್ನೇಹ ಬಾಂಧವ್ಯವನ್ನು ಹೊಂದಿದ್ದರು. ಅವರನ್ನು ಒಮ್ಮೆ ಭೇಟಿಯಾದವರಿಗೂ ಅವರೊಂದಿಗೆ ಶಾಶ್ವತವಾದ ಸ್ನೇಹ ಬೆಳೆದು ಬಿಡುತ್ತಿತ್ತು. ಸಮಾಜದ ಪ್ರತಿಯೊಂದು ವರ್ಗದ ಜನರೊಂದಿಗೆ ಅವರು ಅತ್ಯಂತ ಸರಳವಾಗಿ ಬೆರೆಯುತ್ತಿದ್ದರು. ಹುಬ್ಬಳ್ಳಿಯ ಅಭಿವೃದ್ಧಿ, ಅಲ್ಲಿನ ಜನರ ಸೌಹಾರ್ದತೆ ಹಾಗೂ ತೆರಿಗೆ ವ್ಯವಸ್ಥೆಯ ಸರಳೀಕರಣ ಮತ್ತು ಸುಧಾರಣೆಗಳ ಬಗ್ಗೆ ರತ್ನಪಾಲ ಶೆಟ್ಟಿ ಅವರು ತಮ್ಮದೇ ಆದ ವೈಚಾರಿಕ ನಿಲುವುಗಳನ್ನು ಹೊಂದಿದ್ದರು. ಸೆಮಿನಾರ್‌ಗಳು, ಕಾರ್ಯಕ್ರಮಗಳು ಹಾಗೂ ನಾವು ಸಚಿವರಾಗಿದ್ದಾಗ ಹಲವು ಬಾರಿ ಬಂದು ಈ ಕುರಿತು ಚರ್ಚೆ ನಡೆಸಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು ಎಂದು ಹೇಳಿದರು.

**ಉತ್ತಮ ಕೆಲಸಕ್ಕೆ ಕಾಲಮಿತಿ ಕಾಯಬಾರದು:**

ಮನುಷ್ಯನ ಜೀವನಕ್ಕೆ ಯಾವುದೇ 'ಓಪನ್ ಎಂಡ್' ಇಲ್ಲ, ನಾವೆಲ್ಲರೂ ಒಂದು ಕಾಲಮಿತಿ ಅಥವಾ ಬ್ರಾಕೆಟ್‌ಗಳ ಮಧ್ಯೆ ಕೆಲಸ ಮಾಡುತ್ತೇವೆ. ಆದ್ದರಿಂದ ಉತ್ತಮ ಕೆಲಸಗಳನ್ನು ತಕ್ಷಣವೇ ಮಾಡುವ ತುರ್ತು ಪ್ರತಿಯೊಬ್ಬರಲ್ಲೂ ಇರಬೇಕು. ದ್ವೇಷ- ಅಸೂಯೆಗಳನ್ನು ಬದಿಗಿಟ್ಟು ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ರತ್ನಪಾಲ ಶೆಟ್ಟಿ ಅವರು ಕಟ್ಟಿದ ಸಂಸ್ಥೆ ಹಾಗೂ ಅವರ ತತ್ವ-ಸಿದ್ಧಾಂತಗಳನ್ನು ಅವರ ಮಗಳಾದ ಶಿಲ್ಪಾ ಶೆಟ್ಟಿ ಅವರು ಅತ್ಯಂತ ದಕ್ಷತೆ ಮತ್ತು ಪರಿಣಾಮಕಾರಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿರುವುದು ಸಂತಸದ ವಿಷಯ ಎಂದು ಶ್ಲಾಘಿಸಿದರು.

**ಅಸ್ಪಷ್ಟತೆ ಮತ್ತು ಸಾರ್ವಜನಿಕರ ಸಮಸ್ಯೆಗಳು**

ಶಾಸನ ಅಥವಾ ಕಾನೂನು ರೂಪಿಸುವಾಗ ಅದರಲ್ಲಿ ಸ್ಪಷ್ಟತೆ ಇಲ್ಲದಿದ್ದರೆ ಸಾರ್ವಜನಿಕರಿಗೆ ಹಾಗೂ ನಾಗರಿಕರಿಗೆ ಹೆಜ್ಜೆಗೊಂದರಂತೆ ತೊಂದರೆಗಳು ಎದುರಾಗುತ್ತವೆ. "ನಾವು ಸಂಸತ್ತಿನಲ್ಲಿ ಎಷ್ಟೇ ಚರ್ಚಿಸಿ ಕಾನೂನು ರೂಪಿಸಿದರೂ, ಅದನ್ನು ಬರೆಯುವ ಅಧಿಕಾರಿಗಳ ಅಸ್ಪಷ್ಟತೆಯಿಂದಾಗಿ ಸಮಸ್ಯೆಗಳು ಸೃಷ್ಟಿಯಾಗುತ್ತವೆ" ಎಂದರು.

**ಅನುಸರಣೆಯ ಕ್ಲಿಷ್ಟತೆ:** ಕಾನೂನು ಪಾಲನೆ ಅಥವಾ ನಿಯಮಗಳ ಅನುಸರಣೆ ಎಷ್ಟು ಕಠಿಣವಾಗಿರುತ್ತದೆ ಎಂದರೆ, ಸ್ವತಃ ಅಧಿಕಾರಿಗಳಿಗೆ ಹೊರತುಪಡಿಸಿ ಸಾಮಾನ್ಯ ಜನರಿಗೆ ಅದನ್ನು ಪಾಲಿಸುವುದು ಸವಾಲಾಗುತ್ತದೆ. ದಿವಂಗತ ರತ್ನಪಾಲ ಎ. ಶೆಟ್ಟಿ ಅವರು ಯಾವಾಗಲೂ ತೆರಿಗೆ ವ್ಯವಸ್ಥೆ ಮತ್ತು ಕಾನೂನುಗಳ ಅತ್ಯಂತ ಸರಳೀಕರಣ ಆಗಬೇಕೆಂದು ಪ್ರತಿಪಾದಿಸುತ್ತಿದ್ದರು. ಈ ಕುರಿತು ಅವರು ಹಲವು ವೇದಿಕೆಗಳಲ್ಲಿ ಮತ್ತು ಸಚಿವರೊಂದಿಗಿನ ಭೇಟಿಯ ಸಮಯದಲ್ಲಿ ಗಂಭೀರ ಚರ್ಚೆಗಳನ್ನು ನಡೆಸುತ್ತಿದ್ದರು ಎಂದು ಬೊಮ್ಮಾಯಿ ಸ್ಮರಿಸಿದರು.

**ಅಪರಾಧ ಮತ್ತು ಕಾನೂನು ಬಾಂಧವ್ಯ:**

"ಮೊದಲು ಅಪರಾಧ ಸಂಭವಿಸುತ್ತದೆ, ನಂತರ ಅದನ್ನು ತಡೆಯಲು ಅಥವಾ ನಿಯಂತ್ರಿಸಲು ಕಾನೂನು ರೂಪುಗೊಳ್ಳುತ್ತದೆ. ಉದಾಹರಣೆಗೆ ಸೈಬರ್ ಅಪರಾಧಗಳು ಹೆಚ್ಚಾದ ಮೇಲೆಯೇ ಸೈಬರ್ ಕಾನೂನುಗಳು ಬಂದವು" ಎಂದು ವಿವರಿಸಿದ ಅವರು, ದೇಶದಲ್ಲಿ ಕಾನೂನು ಪ್ರಕ್ರಿಯೆಗಳು ಸರಳ ಹಾಗೂ ಸ್ಪಷ್ಟವಾಗಿದ್ದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಅಭಿಪ್ರಾಯಪಟ್ಟರು.

**ಬ್ಯಾಂಕಿಂಗ್ ವ್ಯವಸ್ಥೆ ಸರಳೀಕರಣ ಅಗತ್ಯ**

ನಾವು ಬ್ಯಾಂಕ್‌ಗೆ ಸಾಲ ಪಡೆಯಲು ಹೋದಾಗ ಹತ್ತಾರು ಪುಟಗಳಷ್ಟು ದಾಖಲೆಗಳಿಗೆ ಸಹಿ ಮಾಡಿಸಿಕೊಳ್ಳಲಾಗುತ್ತದೆ. ನಾವು ಸಾಲವನ್ನು ಸರಿಯಾಗಿ ಮರುಪಾವತಿಸದಿದ್ದರೆ ವಸೂಲಿ ಮಾಡುತ್ತೇವೆ" ಎಂಬ ಸರಳ ಉದ್ದೇಶದ ಒಪ್ಪಂದಕ್ಕೆ 50 ಪುಟಗಳಷ್ಟು ದೊಡ್ಡ ದಾಖಲೆಗಳನ್ನು ಸಿದ್ಧಪಡಿಸಿ, ಪ್ರತಿ ಪುಟದಲ್ಲೂ ಸಹಿ ಮಾಡಿಸಿಕೊಳ್ಳುವ ಪ್ರಕ್ರಿಯೆ ಅಗತ್ಯವಿಲ್ಲದ್ದು. ಇದು ವ್ಯವಸ್ಥೆಯಲ್ಲಿ ಜನರ ಮೇಲಿರುವ ನಂಬಿಕೆಯ ಕೊರತೆಯನ್ನು ತೋರಿಸುತ್ತದೆ ಎಂದು ಹೇಳಿದರು.

ಭಾರತವು ರಷ್ಯಾ ಅಥವಾ ಚೀನಾದಂತಹ ಸರ್ವಾಧಿಕಾರಿ ದೇಶವಲ್ಲ; ಇದು ಪ್ರಜಾಸತ್ತಾತ್ಮಕ ದೇಶ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಳ್ಳೆಯದು ಮತ್ತು ಸವಾಲುಗಳು ಎರಡೂ ಇರುತ್ತವೆ. ಇಲ್ಲಿ ಬದಲಾವಣೆಗಳು ಸಹಜ ಹಾಗೂ ಪ್ರಕೃತಿಯ ನಿಯಮದಂತೆ ಸಂಭವಿಸುತ್ತವೆ. ಭಾರತವು ಜಾಗತಿಕವಾಗಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಜಪಾನ್ ದೇಶವನ್ನು ಹಿಂದಿಕ್ಕಿ ವಿಶ್ವದ 3ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗುವತ್ತ ದೇಶ ದಾಪುಗಾಲು ಹಾಕುತ್ತಿದೆ. ಈ ಪ್ರಗತಿಯ ವೇಗ ಕಾಯ್ದುಕೊಳ್ಳಲು ಆಡಳಿತಾತ್ಮಕ ಸರಳೀಕರಣ ಅಗತ್ಯವಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಅಧಿಕಾರಿಗಳ ಮಟ್ಟದಲ್ಲಿ ನಿಯಮಗಳನ್ನು ಸರಳೀಕರಿಸಲು ಹಲವು ಬಾರಿ ಸೂಚನೆ ನೀಡಿದ್ದರೂ, ಬದಲಾವಣೆಗಳ ವೇಗ ಕಮ್ಮಿ ಇತ್ತು. ಸರಕಾರ ಮತ್ತು ಬ್ಯಾಂಕಿಂಗ್ ಪ್ರಕ್ರಿಯೆಗಳು ಸರಳವಾಗಿದ್ದಾಗ ಮಾತ್ರ ಸಾರ್ವಜನಿಕರಿಗೆ ಹಾಗೂ ಉದ್ದಿಮೆದಾರರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

**ಜಿಎಸ್‌ಟಿಯಿಂದ ತೆರಿಗೆ ಸಂಗ್ರಹ ಹೆಚ್ಚಳ**

ಜಿಎಸ್ಟಿ ಜಾರಿಗೆ ಬಂದ ಆರಂಭದಲ್ಲಿ ಸಣ್ಣಪುಟ್ಟ ಸಮಸ್ಯೆಗಳು ಇದ್ದವು. ಆದರೆ ಜಿಎಸ್ಟಿ ಕೌನ್ಸಿಲ್ ಸದಸ್ಯನಾಗಿ ಕಾರ್ಯನಿರ್ವಹಿಸಿದ ಅನುಭವದಿಂದ ಹೇಳುವುದಾದರೆ, ಕಾಲಕ್ರಮೇಣ ಈ ವ್ಯವಸ್ಥೆ ಬಹಳಷ್ಟು ಸರಳೀಕರಣಗೊಂಡಿದೆ. ಇದರಿಂದಾಗಿ ದೇಶದಲ್ಲಿ ತೆರಿಗೆ ಸಂಗ್ರಹದ ಬೆಳವಣಿಗೆ ಹೆಚ್ಚಾಗಿದ್ದು, ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಗೆ ನೀಡಲಾಗುತ್ತಿದ್ದ ಕಿರುಕುಳು ಗಣನೀಯವಾಗಿ ಕಡಿಮೆಯಾಗಿದೆ. ಸಮಾಜದಲ್ಲಿ ಸೈಲೆಂಟ್ ಆಗಿರುವ ಬಹುಸಂಖ್ಯಾತರಿಗಿಂತ ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗಾಗಿ ಜೋರಾಗಿ ಮಾತನಾಡುವವರ ಸದ್ದು ಹೆಚ್ಚಾಗಿ ಕೇಳಿಸುತ್ತದೆ. ಹೀಗಾಗಿ ಒಳ್ಳೆಯ ಉದ್ದೇಶ ಹಾಗೂ ಸಮಾಜದ ಸಕಾರಾತ್ಮಕ ಬದಲಾವಣೆಗಾಗಿ ಪ್ರತಿಯೊಬ್ಬರೂ ತಮ್ಮ ಧ್ವನಿಯನ್ನು ಎತ್ತಬೇಕಿದೆ. ದೇಶವು ಬದಲಾವಣೆಯ ಹಂತದಲ್ಲಿದೆ. ಉತ್ತಮ ಕಾರ್ಯಗಳನ್ನು ಉಳಿಸಿಕೊಂಡು, ಎಲ್ಲೆಲ್ಲಿ ಬದಲಾವಣೆಯ ಅಗತ್ಯವಿದೆಯೋ ಅಲ್ಲೆಲ್ಲ ಧನಾತ್ಮಕ ಬದಲಾವಣೆ ತರುವುದರ ಮೂಲಕ ಭಾರತವು ಆರ್ಥಿಕವಾಗಿ ಮಾತ್ರವಲ್ಲದೆ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿಯೂ ಮುನ್ನಡೆಯಬೇಕಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾಜಿ ಸಂಸದ ವಿಜಯ ಸಂಕೇಶ್ವರ, ಲಲಿತಾ ಸಂಕೇಶ್ವರ, ಶೋಭಾ ಶೆಟ್ಟಿ, ಶಿಲ್ಪಾ ಶೆಟ್ಟಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ಒಂದಲ್ಲಾ, ಎರಡಲ್ಲಾ – ಸಿದ್ದು ಮೂರು ಬಾರಿ ಮಾತಿಗೆ ತಪ್ಪಿದರು ಎಂದ ಬಿ.ಆರ್. ಪಾಟೀಲ್!



**ಕಲಬುರಗಿ, ಆ. 9:** ಸಚಿವ ಸಂಪುಟ ವಿಸ್ತರಣೆಯ ಬಳಿಕ ಕಾಂಗ್ರೆಸ್ ಶಾಸಕರಲ್ಲಿ ಅಸಮಾಧಾನದ ಧ್ವನಿ ಇನ್ನಷ್ಟು ಜೋರಾಗಿದೆ. ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಜಿಲ್ಲೆಯ ಆಳಂದ ಶಾಸಕ ಬಿ.ಆರ್. ಪಾಟೀಲ್ ಮತ್ತೆ ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಬೇಸರ ವ್ಯಕ್ತಪಡಿಸಿದ್ದು, ತಮಗೆ ಮೂರು ಬಾರಿ ನೀಡಿದ್ದ ಭರವಸೆ ಈಡೇರಿಸಲಿಲ್ಲ ಎಂದು ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿ.ಆರ್.ಪಾಟೀಲ್, ತಮ್ಮ ಸಚಿವ ಸ್ಥಾನಕ್ಕೆ ಕಲಬುರಗಿ ಜಿಲ್ಲೆಯ ಕೆಲ ನಾಯಕರು ಅಡ್ಡಿಯಾಗಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾಗಿ ತಿಳಿಸಿದರು. ಆದರೆ, ಆ ನಾಯಕರು ಯಾರು ಎಂಬುದು ನನಗೆ ಗೊತ್ತಿಲ್ಲ. ಸಿದ್ದರಾಮಯ್ಯ ಅವರು ಪರಿಸ್ಥಿತಿಯಿಂದ ಹೊರಬರಲು ಈ ಮಾತು ಹೇಳಿದ್ದಾರೋ ಅಥವಾ ನಿಜವಾಗಿಯೇ ಹೇಳಿದ್ದಾರೋ ಗೊತ್ತಿಲ್ಲ ಎಂದು ಹೇಳಿದರು.

ನಾನು ಯಾರಲ್ಲಿಯೂ ಹೋಗಿ ನನ್ನನ್ನು ಸಚಿವನನ್ನಾಗಿ ಮಾಡಿ ಎಂದು ಕೇಳಿಕೊಂಡಿರಲಿಲ್ಲ. ವಿಧಾನಸಭೆ ಚುನಾವಣೆ ವೇಳೆ ಸಿದ್ದರಾಮಯ್ಯ ಅವರು 'ನನ್ನ ಗೆಳೆಯನನ್ನು ಗೆಲ್ಲಿಸಿ ಕಳುಹಿಸಿ, ಸಚಿವನನ್ನಾಗಿ ಮಾಡುತ್ತೇನೆ' ಎಂದು ಸಾರ್ವಜನಿಕವಾಗಿ ಭರವಸೆ ನೀಡಿದ್ದರು. ಆದರೆ ಅವರೇ ಮುಖ್ಯಮಂತ್ರಿಯಾಗಿದ್ದಾಗಲೂ ಆ ಮಾತು ಈಡೇರಲಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಮೂರು ಬಾರಿ ವೈಯಕ್ತಿಕವಾಗಿ ಕರೆದು ಸಚಿವ ಸ್ಥಾನ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಕೊನೆಗೆ ಆ ಮಾತು ಉಳಿಯಲಿಲ್ಲ. ನನಗೆ ಸಚಿವ ಸ್ಥಾನ ತಪ್ಪಿರುವುದಕ್ಕಿಂತಲೂ ಸಿದ್ದರಾಮಯ್ಯ ಅವರು ಪದೇ ಪದೇ ಮಾತು ಕೊಟ್ಟು ಮಾತು ತಪ್ಪಿರುವುದೇ ನನಗೆ ಹೆಚ್ಚು ನೋವು ತಂದಿದೆ ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆಯ ಬಳಿಕ ಅಸಮಾಧಾನಿತ ಶಾಸಕರನ್ನು ಪಕ್ಷದ ನಾಯಕರು ಮನವೊಲಿಸುವ ಪ್ರಯತ್ನ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈಗ ಕಾಂಗ್ರೆಸ್‌ನಲ್ಲಿ 140ಕ್ಕೂ ಹೆಚ್ಚು ಶಾಸಕರಿದ್ದಾರೆ. ಎಲ್ಲರನ್ನೂ ಕರೆದು ಮಾತನಾಡುವುದು ಸುಲಭವಲ್ಲ. ಸದ್ಯದ ಪರಿಸ್ಥಿತಿಯಿಂದ ಹೊರಬರಲು ಹಾಗೆ ಹೇಳುತ್ತಿದ್ದಾರೆ ಅಷ್ಟೆ ಎಂದರು.

2028ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವಿರಾ? ಎಂಬ ಪ್ರಶ್ನೆಗೆ ನೇರ ಉತ್ತರ ನೀಡದ ಬಿ.ಆರ್.ಪಾಟೀಲ್, "ಕಾದು ನೋಡಿ" ಅಂದಿನ ಪರಿಸ್ಥಿತಿ ಏನಿರುತ್ತೋ ಎಂದು ಹೇಳುವ ಮೂಲಕ ಕುತೂಹಲ ಮೂಡಿಸಿದರು.

ಸಚಿವ ಸ್ಥಾನ ವಂಚಿತರ ಅಸಮಾಧಾನ ಇನ್ನೂ ಸಂಪೂರ್ಣವಾಗಿ ಶಮನವಾಗದಿರುವ ಹೊತ್ತಿನಲ್ಲಿ, ಬಿ.ಆರ್.ಪಾಟೀಲ್ ಅವರ ಈ ಹೇಳಿಕೆ ಕಾಂಗ್ರೆಸ್ ಒಳರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ.

## ಮಲೆ ಮಹದೇಶ್ವರ ವನ್ಯಜೀವಿ ಅಭಯಾರಣ್ಯ ಹುಣಸೆಬಯಲು ಅರಣ್ಯ ಪ್ರದೇಶದಲ್ಲಿ ಕಾಡು ಆನೆಯ ದಾಳಿಗೆ ಅರಣ್ಯ ರಕ್ಷಕ ಬಲಿ

**ಚಾಮರಾಜನಗರ, ಆ.09:** ಏಕಾಏಕಿ ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ಅರಣ್ಯ ವೀಕ್ಷಕ ಮೃತಪಟ್ಟ ಘಟನೆ ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿಧಾಮದ ಪೊನ್ನಾಚಿ ಅರಣ್ಯ ವಲಯದ ಹುಣಸೆಬಯಲು ಅರಣ್ಯ ಪ್ರದೇಶದಲ್ಲಿ ಶನಿವಾರ ರಾತ್ರಿ ಸಂಭವಿಸಿದೆ.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ನಿವಾಸಿ ಮಹಾದೇವಸ್ವಾಮಿ (48) ಮೃತ ದುರ್ದೈವಿ. ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಅರಣ್ಯ ವೀಕ್ಷಕರಾಗಿ ಸುಮಾರು 20 ವರ್ಷಗಳಿಂದಲೂ ಇವರು ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ತಿಳಿದುಬಂದಿದೆ.

ಮಹಾದೇವಸ್ವಾಮಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಎಂದಿನಂತೆ ಶನಿವಾರ ರಾತ್ರಿ ಹುಣಸೆಬಯಲು ಅರಣ್ಯ ಪ್ರದೇಶದ ಕಳ್ಳ ಬೇಟೆ ತಡೆ ಶಿಬಿರದಲ್ಲಿದ್ದ ವೇಳೆ ಆನೆ ಶಬ್ದ ಕೇಳಿ ಹೊರಬಂದಾಗ ದಿಢೀರನೇ ಕಾಡಾನೆ ಎದುರಾಗಿ ದಾಳಿ ಮಾಡಿದೆ. ಮಹಾದೇವಸ್ವಾಮಿ ಕಾಡಾನೆ ಪ್ರಹಾರದಿಂದ ತಪ್ಪಿಸಿಕೊಳ್ಳಲಾಗದೇ ತೀವ್ರವಾಗಿ ಗಾಯಗೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದರು. ಕೂಡಲೇ ಇತರ ಸಿಬ್ಬಂದಿ ಅವರನ್ನು ಕೊಳ್ಳೇಗಾಲ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆತಂದರಾದರೂ ಮಾರ್ಗಮಧ್ಯದಲ್ಲೇ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ.

ಘಟನೆಯಲ್ಲಿ ಜೊತೆಗಿದ್ದ ಇನ್ನಿಬ್ಬರು ಸಿಬ್ಬಂದಿ ಸ್ವಲ್ಪದರಲ್ಲೇ ಕಾಡಾನೆ ದಾಳಿಯಿಂದ ಪಾರಾಗಿದ್ದಾರೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.



ಮೃತ ಮಹಾದೇವಸ್ವಾಮಿ ಅವರ ಪತ್ನಿ ನೀಡಿರುವ ದೂರಿನಡಿ ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್ ನಂ-31/2026 ಕಲಂ 194 ಬಿ.ಎನ್.ಎಸ್.ಎಸ್ ರೀತ್ಯಾ ಪ್ರಕರಣ ದಾಖಲಾಗಿ. ಮೃತ ಮಹಾದೇವಸ್ವಾಮಿ ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗೂ ಕುಟುಂಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.



ಆರು ಬಾರಿ ಶಾಸಕರಾಗಿರುವ ತಮ್ಮ ನಾಯಕ ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನ ನಿರಾಕರಿಸಿದ್ದನ್ನು ಖಂಡಿಸಿ ಅವರ ಬೆಂಬಲಿಗರು ಭಾನುವಾರ ಮೈಸೂರಿನ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಮಣಿಪಾಲ ಆಸ್ಪತ್ರೆ ಜಂಕ್ಷನ್‌ನಲ್ಲಿ ಪ್ರತಿಭಟನೆ ನಡೆಸಿದರು.

## ಅಲರ್ಜಿಗೆ ಚಿಕಿತ್ಸೆಯ ಜೊತೆಗೆ ನಿಖರ ತಪಾಸಣೆ ಅಗತ್ಯ: ಡಾ.ಗೌತಮ್ ಮೋದಿ



**ಕಲಬುರಗಿ, ಆ. 9:** ಶ್ವಾಸಕೋಶದ ಅಲರ್ಜಿ ಮತ್ತು ಆಸ್ತಮಾದಂತಹ ಸಮಸ್ಯೆಗಳನ್ನು ತಡೆಗಟ್ಟಲು ರೋಗಿಗೆ ಚಿಕಿತ್ಸೆಯ ಜೊತೆಗೆ ವೈದ್ಯಕೀಯ ಇತಿಹಾಸ ಹಾಗೂ ನಿಖರವಾದ ಅಲರ್ಜಿ ತಪಾಸಣೆ ಅತ್ಯಂತ ಮುಖ್ಯ ಎಂದು ಎಫ್‌ಸಿಜಿಪಿ, ಎಫ್‌ಐಸಿಎಐ, ಎಂಎನ್‌ಸಿಸಿಪಿ(ಐ) ಡಾ.ಗೌತಮ್ ಮೋದಿ ಹೇಳಿದರು.

'ಅಲರ್ಜಿ ಮತ್ತು ರೋಗನಿರೋಧ ಶಾಸ್ತ್ರ ವಿವಿಧ ಚಿಕಿತ್ಸೆಗಳು' ಎಂಬ ವಿಷಯದ ಮೇಲೆ ಒಂದು ದಿನದ ಬಹುಶಾಖಾ ವೈಜ್ಞಾನಿಕ ಕಾರ್ಯಾಗಾರ ಕುರಿತು ಉಪನ್ಯಾಸ ನೀಡಿ, ವೈದ್ಯರು ರೋಗಿಯ ಇತಿಹಾಸ ವನ್ನು ವಿವರವಾಗಿ ಆಲಿಸುವುದು ರೋಗ ನಿರ್ಣಯದ ಶೇಕಡಾ 80% ಭಾಗವನ್ನು ಪೂರ್ಣಗೊಳಿಸುತ್ತದೆ. ರೋಗಿಗೆ ರೋಗಲಕ್ಷಣಗಳು ಹೇಗೆ ಮತ್ತು ಯಾವಾಗ ಪ್ರಾರಂಭವಾದವು ಎಂಬುದನ್ನು ತಿಳಿಯುವುದು ಅತ್ಯಂತ ಪ್ರಮುಖ. ಅಲರ್ಜಿ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಸರಿಯಾದ ಸಮಯದಲ್ಲಿ ಸೂಕ್ತ ಇಮ್ಯುನೊಥೆರಪಿ ಹಾಗೂ ಚಿಕಿತ್ಸೆ ನೀಡುವುದರಿಂದ ಸಮಸ್ಯೆಯನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿಡಬಹುದು ಎಂದು ತಜ್ಞರು ತಿಳಿಸಿದರು.

ಔಷಧೀಯ ಅಲರ್ಜಿ ಸೇರಿದಂತೆ ವಿವಿಧ ರೀತಿಯ ಅಲರ್ಜಿಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿವೆ. ರೋಗಿಗಳಿಗೆ ಚಿಕಿತ್ಸೆ ನೀಡುವ ಮುನ್ನ ರೋಗಿಯ ಹಳೆಯ ಆರೋಗ್ಯ ಸಮಸ್ಯೆಗಳು ಹಾಗೂ ಬಾಲ್ಯದ ಆಸ್ತಮಾ ಇತಿಹಾಸವನ್ನು ವಿವರವಾಗಿ ಆಲಿಸುವುದು ಸೂಕ್ತ ರೋಗನಿರ್ಣಯಕ್ಕೆ ಸಹಾಯಕಾರಿ ಹಾಗೂ ಅಲರ್ಜಿನ್ ಪ್ರೊವೊಕೇಶನ್ ಟೆಸ್ಟ್ ಮೂಲಕ ನಿಖರವಾದ ರೋಗಕಾರಕಗಳನ್ನು ಗುರುತಿಸಿ, ಆಧಾರಿತ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ ಎಂದರು.

ಹೀಗಾಗಿ ಇದರ ನಿಖರ ಪತ್ತೆ ಹಾಗೂ ಚಿಕಿತ್ಸೆಗೆ ವಿವಿಧ ವಿಭಾಗಗಳ ವೈದ್ಯರನ್ನೊಳಗೊಂಡ ಬಹುಶಿಸ್ತೀಯ ವಿಧಾನ ಅತ್ಯಗತ್ಯ. ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಈ ವಿಷಯದ ಬಗ್ಗೆ ಆಳವಾದ ಜ್ಞಾನ ಒದಗಿಸಲು ಈ ಕಾರ್ಯಾಗಾರ ಉತ್ತಮ ವೇದಿಕೆಯಾಗಿದೆ ಎಂದ ಅವರು, ಭವಿಷ್ಯದಲ್ಲೂ ಹಲವು ವಿಭಾಗಗಳನ್ನು ಒಗ್ಗೂಡಿಸಿ ಇಂತಹ ಜಂಟಿ ಕಾರ್ಯಾಗಾರಗಳನ್ನು ಆಯೋಜಿಸಲಾಗುವುದು ಎಂದರು.

## ಸಿರುಗುಪ್ಪ ರಸ್ತೆಯ ಸೇತುವೆ ಉದ್ಘಾಟಿಸಿದ ಶಾಸಕ ನಾರಾ ಭರತ್‌ರೆಡ್ಡಿ




**ಬಳ್ಳಾರಿ, ಆ.09:** ಬಳ್ಳಾರಿ ನಗರದ ಹಾವಂಭಾವಿ ಪ್ರದೇಶದಲ್ಲಿರುವ ಬಳ್ಳಾರಿ ನಗರವನ್ನು ಸಪರ್ಕಿಸುವ ಸಿರುಗುಪ್ಪ ರಸ್ತೆಯ ಸೇತುವೆಯನ್ನು ಶಾಸಕ ನಾರಾ ಭರತ್ ರೆಡ್ಡಿ ರವಿವಾರ ಉದ್ಘಾಟಿಸಿದರು.

ಲೋಕೋಪಯೋಗಿ ಇಲಾಖೆ ವತಿಯಿಂದ ಅಂದಾಜು 1.05 ಕೋಟಿ ರೂ.ಗಳ ವೆಚ್ಚದಲ್ಲಿ ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಕೇವಲ 2 ತಿಂಗಳ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ಶಾಸಕರು ಅಭಿನಂಧಿಸಿದರು.

### ಶಿಥಿಲಗೊಂಡ ಹಳೆಯ ಕಟ್ಟಡದಲ್ಲೇ ಚಿಕಿತ್ಸೆ

## ಮಳೆ ಬಂದ್ರೆ ಜೀವ ಭಯದಲ್ಲಿ ನರಳುವ ಬ್ರಿಮ್ಸ್ ರೋಗಿಗಳು



**ಬೀದರ್, ಆ. 9:** ಮಳೆಗಾಲ ಆರಂಭವಾಗುತ್ತಿದ್ದಂತೆ ಜಿಲ್ಲೆಯ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಬ್ರಿಮ್ಸ್) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಜೀವಭಯ ಆವರಿಸಿಕೊಳ್ಳುತ್ತದೆ.

ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣವಾಗಿದ್ದರೂ, ಹಳೆಯ ಕಟ್ಟಡದಲ್ಲೇ ಜನರಲ್ ವಾರ್ಡ್ ಮುಂದುವರಿಸಲಾಗಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಜಿಲ್ಲೆಯ ಜನರು ಚಿಕಿತ್ಸೆಗಾಗಿ ನೆರೆಯ ಹೈದರಾಬಾದ್ ಅಥವಾ ಮಹಾರಾಷ್ಟ್ರದ ನಗರಗಳಿಗೆ ಅಲೆದಾಡುವುದನ್ನು ತಪ್ಪಿಸಲು ಬ್ರಿಮ್ಸ್ ಸಂಸ್ಥೆಯನ್ನು ಅಭಿವೃದ್ಧಿಪಡಿಸಲಾಗಿತ್ತು. ಆದರೆ ಹಳೆಯ ಕಟ್ಟಡದ ಮೇಲ್ಛಾವಣಿ ಹಾಗೂ ಗೋಡೆಗಳು ತೀವ್ರವಾಗಿ ಶಿಥಿಲಗೊಂಡಿದ್ದು, ಮಳೆ ಬಂದಾಗ ನೀರು ನೇರವಾಗಿ ರೋಗಿಗಳ ಬೆಡ್‌ಗಳ ಮೇಲೆಯೇ ತೊಟ್ಟಿಕ್ಕುತ್ತಿದೆ. ಗೋಡೆಗಳು ಪಾಚಿ ಕಟ್ಟಿ ತೇವಗೊಂಡಿದ್ದು, ಆಸ್ಪತ್ರೆಯ ವಾತಾವರಣವೇ ಭಯಾನಕವಾಗಿದೆ.

## ಒಲವಿನ ಮಾತುಗಳು ಕವಯಿತ್ರಿಯ ಕವನಗಳಲ್ಲಿ ಒಡಮೂಡಿವೆ ಬಳ್ಳಾರಿ ಅಪರ ಜಿಲ್ಲಾಧಿಕಾರಿ ಮಹಮದ್ ಝುಬೇರ್ ಅಭಿಮತ



**ಬಳ್ಳಾರಿ,ಆ.09**.ಒತ್ತಡದ ಬದುಕಿನಲ್ಲಿ ಅರಳಿದ, ಪ್ರೀತಿಯ ಪರಿಮಳವನ್ನು ತುಂಬಿದ ಭಾವಗಳು ಕಾವ್ಯದಲ್ಲಿ ಒಡಮೂಡಿವೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಅಭಿಪ್ರಾಯಪಟ್ಟರು.

ಭಾನುವಾರ ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಬಸವ ಪಬ್ಲಿಕೇಷನ್ಸ್, ಸಂಡೂರು ಇವರ ಸಹಯೋಗದಲ್ಲಿ ಆಯೋಜಿಸಿದ್ದ ಕವಯಿತ್ರಿ ಟಿ. ಲೀಲಾವತಿ (ಸಾಯಿಲೀಲಾ) ಅವರ 'ಒಲವು ಮೂಡಿದಾಗ' ಕವನ ಸಂಕಲನ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಉದ್ಯೋಗದ ನಡುವೆ ಸಾಹಿತ್ಯದ ಪ್ರೀತಿಯನ್ನು ಬೆಳೆಸಿಕೊಂಡಿರುವ ಲೀಲಾವತಿಯವರು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆ ನೀಡಲಿ ಎಂದು ತಿಳಿಸಿದರು.

ಒಲವು ಮೂಡಿದಾಗ ಕವನ ಸಂಕಲನವನ್ನು ಲೋಕಾರ್ಪಣೆ ಮಾಡಿದ ಕುರುಗೋಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಾಂತಲಾ ಅವರು ಮಾತನಾಡಿ, ಈ ಕವನ ಸಂಕಲನದ ಕವನಗಳೆಲ್ಲವೂ ಸಹ ನಮ್ಮ ಸುತ್ತಮುತ್ತಲಿನ ಘಟನೆಗಳಿಗೆ ಸಂಬಂಧಿಸಿವೆ. ಕೌಟುಂಬಿಕ ಸಾಮರಸ್ಯ, ಒಲವು, ಸಾಮಾಜಿಕ ಕಳಕಳಿ ಕವನಗಳ ಜೀವಾಳವಾಗಿದ್ದು, ಕವಯತ್ರಿ ಲೀಲಾವತಿಯವರ ಅವರ ಸಾಹಿತ್ಯದ ಅಭಿರುಚಿ ಹೀಗೆ ಮುಂದುವರಿಯಲಿ ಎಂದು ಶುಭ ಹಾರೈಸಿದರು.

ಡಾ. ವೇಣುಗೋಪಾಲ ಎನ್.ಎಸ್ ಕೃತಿ ಕುರಿತು ಮಾತನಾಡಿ, ಜ್ಞಾನದ ಹಸಿವನ್ನು ಹೊಂದಿದ ಪ್ರೀತಿಯ ವಿದ್ಯಾರ್ಥಿನಿ ಲೀಲಾವತಿ ಅವರು 'ಒಲವು ಮೂಡಿದಾಗ' ಎಂಬ ಕವನ ಸಂಕಲನವನ್ನು ಹೊರ ತರುತ್ತಿರುವುದು ತುಂಬಾ ಸಂತೋಷದ ಸಂಗತಿ. ಉದ್ಯೋಗ ಮತ್ತು ಸಂಸಾರಗಳ ನಡುವೆ ಸಾಹಿತ್ಯದ ಸದಭಿರುಚಿಯ ಸಹವಾಸ. ಇದರ ಪ್ರತಿಫಲವೇ ಈ ಕವನ ಸಂಕಲನ ಮೂಡಿಬಂದಿದೆ ಎಂದು ಹೇಳಿದರು.

ಇದರಲ್ಲಿ 35 ಕವನಗಳಿದ್ದು ಒಲುಮೆ, ಪುಸ್ತಕ ಪ್ರೀತಿ, ದೈವದ ಸ್ಮರಣೆ, ಹಸಿವು, ವಿಧಿ, ಸ್ನೇಹ, ವ್ಯಕ್ತಿಚಿತ್ರಣ, ನಿರಾಸೆ, ಛಲ ಮುಂತಾದ ಭಾವಗಳನ್ನು ಒಳಗೊಂಡ ಕವನಗಳು ಇವೆ. ಒಲುಮೆಗೆ ಸಂಬಂಧಿಸಿದ ಕವನಗಳೇ ಹೆಚ್ಚಾಗಿರುವುದರಿಂದ ಕವನ ಸಂಕಲನಕ್ಕೆ 'ಒಲವು ಮೂಡಿದಾಗ 'ಎಂಬ ಶೀರ್ಷಿಕೆ ಸೂಕ್ತವೆನಿಸಿದೆ.

ಇಲ್ಲಿಯ ಕವನಗಳು ಅತ್ಯಂತ ಶಕ್ತಿಯುತವಾಗಿದ್ದು, ಆರಂಭದ ಕವನ ಸಂಕಲನ ಇದಾಗಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಬುದ್ಧವಾದ ಕವನಗಳು ಈಕೆಯಿಂದ ಹೊರಹೊಮ್ಮಲಿ, ನಾಡಿನ ಎಲ್ಲರ ಮನೆ- ಮನಗಳಲ್ಲಿ ಈ ಸಾಹಿತ್ಯದ ಸುಗಂಧ ಹರಡಲಿ ಎಂದು ಶುಭ ಹಾರೈಸಿದರು.

ಕವಿಯತ್ರಿ ಟಿ.ಲೀಲಾವತಿ ಮಾತನಾಡಿ 'ಸಾಯಿಲೀಲಾ' ಕಾವ್ಯನಾಮದಲ್ಲಿ ರಚಿಸಿದ ನನ್ನ ಮೊದಲ ಕವನ ಸಂಕಲನ ಒಲವು ಮೂಡಿದಾಗ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿ. ಈ ಕೃತಿಯ ಪ್ರಕಟಣೆಗೆ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳನ್ನು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದ್ದು ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ, ಇಂತಹ ಕಾರ್ಯಕ್ರಮಗಳ ಆಯೋಜನೆಯ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶವನ್ನು ನೀಡುವ ವೇದಿಕೆಯಾಗಿದೆ ಎಂದು ತಿಳಿಸಿದರು.

### ವಿಕೋಪಕ್ಕೆ ತಿರುಗಿದ ಜಮೀನು ವಿವಾದ

## ದಲಿತ ಕುಟುಂಬದ ಮೇಲೆ ಜಾತಿ ನಿಂದನೆ ಆರೋಪ



**ಕಲಬುರಗಿ, ಆ.9:** ಜಿಲ್ಲೆಯ ಕಮಲಾಪುರ ತಾಲೂಕಿನ ಕಟ್ಟೊಳ್ಳಿ ಗ್ರಾಮದ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ದಲಿತ ಕುಟುಂಬದ ವಿರುದ್ಧ ಜಾತಿ ನಿಂದನೆ, ಅಕ್ರಮ ಪ್ರವೇಶ, ಹಲ್ಲೆಗೆ ಯತ್ನ ಹಾಗೂ ಜೀವ ಬೆದರಿಕೆ ಆರೋಪದಡಿ 12 ಮಂದಿಯ ವಿರುದ್ಧ ಮಹಾಗಾಂವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಮಲಾಪುರ ತಾಲೂಕಿನ ಕಟ್ಟೊಳ್ಳಿ ಗ್ರಾಮದ ಪ್ರಕಾಶ್ ಸಿಂಗೆ (48) ನೀಡಿದ ದೂರಿನ ಮೇರೆಗೆ ಅದೇ ಗ್ರಾಮದ ಸಂಗಪ್ಪ ಗುರುಪಾದಪ್ಪ, ನಿಖಿಲ ರೇವಣಸಿದ್ದಪ್ಪ, ಜಗದೇವಪ್ಪ ಗುರುಪಾದಪ್ಪ, ರೇವಣಸಿದ್ದ ಗುರುಪಾದಪ್ಪ, ಅನಿಲ್ ರೇವಣಸಿದ್ದಪ್ಪ, ಚೇತನ್ ಸಂಗಪ್ಪ, ಸರೋಜನಿ ಸಂಗಪ್ಪ, ಲಕ್ಷ್ಮೀ ರೇವಣಸಿದ್ದಪ್ಪ, ಸಿದ್ದಮ್ಮ ಜಗದೇವಪ್ಪ, ಸುನೀಲ್ ಜಗದೇವಪ್ಪ, ಗುಂಡಮ್ಮ ಹಾಗೂ ಸುಲೇಮಾ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ದೂರಿನ ಪ್ರಕಾರ, ಮಹಾಗಾಂವ ಗ್ರಾಮದ ವ್ಯಾಪ್ತಿಯ ಸರ್ವೆ ನಂ.94/1ರಲ್ಲಿರುವ ತಮ್ಮ 3 ಎಕರೆ 30 ಗುಂಟೆ ಜಮೀನಿನಲ್ಲಿ ಜುಲೈ 20ರಂದು ತೊಗರಿ ಬಿತ್ತನೆ ಮಾಡಲಾಗಿತ್ತು. ಬಳಿಕ ಮಧ್ಯಾಹ್ನ ಜಮೀನಿಗೆ ತೆರಳಿದಾಗ ಆರೋಪಿಗಳು ಅನುಮತಿಯಿಲ್ಲದೆ ಹೊಲಕ್ಕೆ ಪ್ರವೇಶಿಸಿ ಮತ್ತೊಮ್ಮೆ ಬಿತ್ತನೆ ಮಾಡುತ್ತಿರುವುದನ್ನು ಕಂಡು ಪ್ರಶ್ನಿಸಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜಾತಿ ನಿಂದನೆ ಮಾಡಲಾಗಿದೆ.

ಅಲ್ಲದೇ, ಕೆಲ ಮಹಿಳೆಯರು ಕಣ್ಣಿಗೆ ಖಾರದ ಪುಡಿ ಎರಚಿದ್ದಾರೆ. ಟ್ರ್ಯಾಕ್ಟರ್ ಹಾಯಿಸಲು ಯತ್ನಿಸಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಸಂಬಂಧ ಮಹಾಗಾಂವ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಅವರು, ಈ ಘಟನೆಗೆ ಸಂಬಂಧಿಸಿದಂತೆ ಮಹಾಗಾಂವ ಪೊಲೀಸ್ ಠಾಣೆಯಲ್ಲಿ ಅಟ್ರಾಸಿಟಿ ಕೇಸ್ ದಾಖಲಾಗಿದ್ದು, ಜಾತಿ ನಿಂದನಾ ಪ್ರಕರಣವಿರುವುದರಿಂದ ಅದನ್ನು ಡಿಸಿಆರ್ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ. ಈ ಕುರಿತು ಅವರೇ ತನಿಖೆ ನಡೆಸಿ, ದೋಷಾರೋಪಣಾ ಪಟ್ಟಿ ಸಲ್ಲಿಸಲಿದ್ದಾರೆ ಎಂದು ತಿಳಿಸಿದರು.

### ಉತ್ತರ ಕರ್ನಾಟಕದ ಗ್ರಾಮೀಣ ಹಾಗೂ ಬಡ ಪ್ರತಿಭಾವಂತ ಮಕ್ಕಳಿಗೆ ಗುಣಮಟ್ಟದ ತರಬೇತಿ

# ತರಬೇತಿ ಚಟುವಟಿಕೆಗಳನ್ನು ನಿರ್ಧರಿಸಲು ತಜ್ಞರ ನೇತೃತ್ವದಲ್ಲಿ ಕ್ರಿಯಾ ಸಮಿತಿ: ಸಂಸದ ಬಸವರಾಜ ಬೊಮ್ಮಾಯಿ



ಹುಬ್ಬಳ್ಳಿ: ಉತ್ತರ ಕರ್ನಾಟಕದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವಂತೆ ಅತ್ಯುತ್ತಮ ತರಬೇತಿ ನೀಡುವ ಶಿಕ್ಷಣ ಸಂಸ್ಥೆಯೊಂದನ್ನು ಕಟ್ಟುವ ನಿಟ್ಟಿನಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಉತ್ತರ ಕರ್ನಾಟಕ ಪ್ರತಿಭಾವಂತ ಮಕ್ಕಳ ಸ್ಪರ್ಧಾತ್ಮಕ ಪರೀಕ್ಷಾ ಹಿತರಕ್ಷಣಾ ಸಮಿತಿ ಏರ್ಪಡಿಸಿದ ರಾಜ್ಯ ಮಟ್ಟದ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ, ಎಲ್ಲರ ಮನಸಿನಲ್ಲಿ ಏನಿದೆಯೊ ಅದು ಆಗಬೇಕು, ಜಗತ್ತಿನಲ್ಲಿ ಮನಸಿನೊಳಗ ಎರಡು ಬಾರಿ ಆಗುತ್ತದೆ. ಮೊದಲನೇಯದ್ದು ಮನಸಿನ್ಯಾಗ ಸಿದ್ಧಿ ಅಗುತ್ತದೆ ಆ ನಂತರ ಕಾರ್ಯಗತ ಆದಾಗ ಸಿದ್ಧಿ ಆಗುತ್ತದೆ. ಇವತ್ತು ಕೂಡಿರುವುದು ಸಿದ್ಧಿ ಆಗಬೇಕು. ಎಲ್ಲವನ್ನು ಎದುರಿಸಿ ಸಾಧಿಸುತ್ತೇವೆ ಎಂದಾಗ ಅದು ಕಾರ್ಯಗತ ಆಗುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ತರಬೇತಿ ಕೇಂದ್ರ ಆರಂಭಿಸುವುದು ನಮ್ಮೆಲ್ಲರ ಸಂಕಲ್ಪ ಎಂದು ಹೇಳಿದರು.

ಪ್ರಭಾಕರ ಕೊರೆಯವರ ಉಪಸ್ಥಿತಿಯೆ ದೊಡ್ಡ ಶಕ್ತಿ, ಉತ್ತರ ಕರ್ನಾಟಕದ ಮಕ್ಕಳಿಗೆ ಪಿಯುಸಿಯಿಂದ ಪದವಿ ಹಂತದವರೆಗೆ ಸಮಗ್ರ ಶಿಕ್ಷಣ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುವ ಸಂಸ್ಥೆಯನ್ನು ಆರಂಭಿಸುವುದು ಮೊದಲ ಸಂಕಲ್ಪವಾಗಿದೆ. ಯೋಜನೆಗಾಗಿ ಸೂಕ್ತ ಸ್ಥಳ ಆಯ್ಕೆ, ಶಿಕ್ಷಣ ಸಂಸ್ಥೆಯ ಮಾದರಿ ಹಾಗೂ ಪ್ರಥಮ ವರ್ಷದ ತರಬೇತಿ ಚಟುವಟಿಕೆಗಳನ್ನು ನಿರ್ಧರಿಸಲು ತಜ್ಞರ ನೇತೃತ್ವದಲ್ಲಿ ಸಣ್ಣ ಕ್ರಿಯಾ ಸಮಿತಿಯನ್ನು ರಚಿಸಲಾಗುವುದು ಎಂದು ಹೇಳಿದರು.

**ಆರ್ಥಿಕ ಹಾಗೂ ಮೂಲಸೌಕರ್ಯ ಕ್ರೋಡೀಕರಣ:** ಸರಸ್ವತಿ ಒಲಿಯ ಬೇಕೆಂದರೆ ಲಕ್ಷ್ಮೀ ಒಲಿದಾಗ ಮಾತ್ರ ಸರಸ್ವತಿ ಒಲಿಯುತ್ತಾಳೆ, ಸಂಸ್ಥೆಯ ನಿರ್ಮಾಣ ಮತ್ತು ಮೂಲಸೌಕರ್ಯಕ್ಕಾಗಿ ಅಗತ್ಯವಿರುವ ನಿಧಿ ಸಂಗ್ರಹಣೆಗೆ ಪ್ರತ್ಯೇಕ ಸಮಿತಿ ಕಾರ್ಯನಿರ್ವಹಿಸಲಿದ್ದು, ಮುಂಬರುವ ಏಪ್ರಿಲ್ ವೇಳೆಗೆ ತರಬೇತಿ ಪ್ರಕ್ರಿಯೆಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ. ಹಿಂದೆಲ್ಲ ಬಹಳ ಪ್ರಯತ್ನ ಆಗಿದೆ ಎಂದು ತಿಳಿಸಿದರು.

**ಬೆಂಗಳೂರಿಗೂ ಯೋಜನೆ ವಿಸ್ತರಣೆ:** ತಾವು ಮುಖ್ಯಮಂತ್ರಿ ಯಾಗಿದ್ದಾಗ ಬೆಂಗಳೂರಿನ ಯಲಹಂಕ ಬಳಿ ಉತ್ತರ ಕರ್ನಾಟಕ ಒಕ್ಕೂಟಕ್ಕೆ ನೀಡಿದ್ದ 3 ಎಕರೆ ಜಾಗವನ್ನು ಬಳಸಿಕೊಂಡು, ಬೆಂಗಳೂರಿನಲ್ಲಿ ಲಭ್ಯವಿರುವ ಅನುಭವಿ ಬೋಧಕರ ಪ್ರಯೋಜನವನ್ನು ಪಡೆಯಲು ಎರಡನೇ ಹಂತದಲ್ಲಿ ಯೋಜನೆ ರೂಪಿಸಲಾಗುವುದು. ಬೆಂಗಳೂರು ನಮ್ಮ ರಾಜಧಾನಿಯಾಗಿದ್ದು, ಅಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯ ತಜ್ಞರನ್ನು ಬಳಸಿಕೊಂಡು ತರಬೇತಿ ನೀಡುವ ವ್ಯವಸ್ಥೆ ಮಾಡೋಣ, ಈ ನಿಟ್ಟಿನಲ್ಲಿ ನಾನು ಬೆಂಗಳೂರಿನಲ್ಲಿರುವ ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆಯ ಪದಾಧಿಕಾರಿಗಳ ಜೊತೆಗೆ ಮಾತುಕತೆ ನಡೆಸುವುದಾಗಿ ತಿಳಿದರು.

**10 ವರ್ಷಗಳ ದೂರದೃಷ್ಟಿ:** "ಸಮಸ್ಯೆಗಳನ್ನು ಮುಂದಿಟ್ಟು ಕೊಂಡು ಕಾರ್ಯಕ್ರಮ ತಡೆಹಿಡಿಯದೆ, ಬರುವ ಸವಾಲುಗಳನ್ನು ಎದುರಿಸಿ ಮುನ್ನಡೆಯಬೇಕು. ಮುಂಬರುವ 10 ವರ್ಷಗಳಲ್ಲಿ ಇದನ್ನು ದೇಶದಲ್ಲೇ ಪ್ರಸಿದ್ಧವಾದ ಅತ್ಯುನ್ನತ ಸಂಸ್ಥೆಯಾಗಿ ಬೆಳೆಸುವ ಗುರಿ ಹೊಂದಲಾಗಿದೆ, ನಾವು ಇತಿಹಾಸವನ್ನು ಸೃಷ್ಟಿಸುವ ಕೆಲಸ ಮಾಡೋಣ ಪ್ರಭಾಕರ್ ಕೋರೆ ಅವರಿಗೆ ಶಿಕ್ಷಣ ಸಂಸ್ಥೆಗಳ ನಿರ್ವಹಣಾ ಅನುಭವ ದೊಡ್ಡದಿದೆ, ಒಂದೂವರೆ ವರ್ಷದಲ್ಲಿ ಹುಬ್ಬಳ್ಳಿ ಮೆಡಿಕಲ್ ಕಾಲೇಜು ಮಟ್ಟಿಸಿದ್ದಾರೆ.

ಈ ಸಂಸ್ಥೆಯ ನಿರ್ಮಾಣದ ಜವಾಬ್ದಾರಿಯನ್ನು ಕೋರೆಯವರಿಗೆ ಕೊಟ್ಟರೆ ಎಲ್ಲ ರೀತಿಯ ಅನುಕೂಲ ವಾಗುತ್ತದೆ. ಹಾಗೂ ಕನೇರಿ ಸ್ವಾಮೀಜಿಯವರ ಸಾಮಾಜಿಕ ಸಂಕಲ್ಪ ಈ ಯೋಜನೆಗೆ ದೊಡ್ಡ ಬಲ ನೀಡಿದೆ. ಅವರ ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಈ ಯೋಜನೆ ಕಾರ್ಯಗತ ಆಗಲಿ ನಾವೆಲ್ಲರೂ ಜೊತೆಯಾಗಿ ನಿಲ್ಲುತ್ತೇವೆ ಎಂದು ಹೇಳಿದರು.



ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಭಾನುವಾರ ನಡೆದ ಸ್ವಾತಂತ್ರ್ಯ ದಿನಾಚರಣೆಯ ಫಲಪುಷ್ಪ ಪ್ರದರ್ಶನದಲ್ಲಿ ವಾರಾಂತ್ಯದ ಜನಸಂದಣಿ.

# ಬರ ಘೋಷಿಸಿ, ರೈತರ ಸಾಲ ಮನ್ನಾಮಾಡಿ ಶಾಸಕ ಶಿವರಾಜ ಪಾಟೀಲ ಒತ್ತಾಯ



**ರಾಯಚೂರು, ಆ. 9:** ಜಿಲ್ಲೆಯಲ್ಲಿ ಮುಂದುವರಿದ ಬರಗಾಲದಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಮುಂಗಾರು ಬಿತ್ತನೆ ಮುಂತದವುಗಳಿಗೆ ಕೃಷಿಗೆ ಮಾಡಿದ ಅಪಾರ ವೆಚ್ಚವೂ ಕೈಗೆ ಸಿಗದ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ಸರ್ಕಾರ ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಬೇಕು. ಬರ ಪರಿಹಾರ ಕೊಡುವ ಜತೆಗೆ ರೈತರ ಸಾಲ ಮನ್ನಾ ಮಾಡಬೇಕು ಎಂದು ಎಂದು ನಗರ ಶಾಸಕ ಡಾ.ಶಿವರಾಜ ಪಾಟೀಲ ಒತ್ತಾಯಿಸಿದರು. ರೈತರು ಮೂರು ಬಾರಿ ಬಿತ್ತನೆ ಮಾಡಿದ್ದಾರೆ. ಪ್ರತಿ ಎಕರೆಗೆ ಸುಮಾರು 15 ಸಾವಿರಕ್ಕೂ ಹೆಚ್ಚು ವೆಚ್ಚ ಮಾಡಿ ಬಿತ್ತನೆ ನಡೆಸಿದರೂ ಮಳೆ ಕೊರತೆಯಿಂದ ಬೆಳೆ ಸಂಪೂರ್ಣ ನಷ್ಟವಾಗಿದೆ. ರಾಜ್ಯ ಸರ್ಕಾರ ಪ್ರತಿ ಎಕರೆಗೆ ಕನಿಷ್ಠ ರೂ.50 ಸಾವಿರ ಬರ ಪರಿಹಾರ ಘೋಷಿಸಿ ರೈತರ ನೆರವಿಗೆ ಧಾವಿಸಬೇಕು ಎಂದು ಮಾಧ್ಯಮ ಗೋಷ್ಠಿಯಲ್ಲಿ ಆಗ್ರಹಿಸಿದರು.

ರೈತರು ದೇಶದ ಬೆನ್ನೆಲುಬು ಮತ್ತು ರಾಷ್ಟ್ರದ ಅಮೂಲ್ಯ ಆಸ್ತಿಯಾಗಿದ್ದಾರೆ. ಆದರೆ, ನಿರಂತರ ನಷ್ಟದಿಂದ ರೈತ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ತಮ್ಮ ಮಕ್ಕಳನ್ನು ಉದ್ಯೋಗ ಅರಸಿ ಬೆಂಗಳೂರಿನಂತಹ ಮಹಾನಗರಗಳಿಗೆ ಕಳುಹಿಸುವ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ. ಕೃಷಿ ಲಾಭದಾಯಕ ವಾಗದ ಕಾರಣ ಗ್ರಾಮೀಣ ಜೀವನವೇ ಸಂಕಷ್ಟಕ್ಕೆ ಸಿಲುಕುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಈ ವರ್ಷ ಹತ್ತಿ ಸೇರಿದಂತೆ ವಿವಿಧ ಬೆಳೆಗಳು ಬರದ ಹೊಡೆತಕ್ಕೆ ಸಿಲುಕಿವೆ. ಅದರಲ್ಲೂ ಹತ್ತಿ ಬೆಳೆಗೆ ಪಿಂಕ್ ಬೋಲ್‌ವರ್ಮ್ (ಪಿಂಕ್ ರೋಗ) ಕಾಟ ಹೆಚ್ಚಾಗಿರುವುದರಿಂದ ರೈತರು ಮತ್ತಷ್ಟು ನಷ್ಟ ಅನುಭವಿಸು ತ್ತಿದ್ದಾರೆ. ಬೆಳೆ ಹಾನಿ, ಉತ್ಪಾದನೆ ಕುಸಿತ ಮತ್ತು ಹೆಚ್ಚುತ್ತಿರುವ ಕೃಷಿ ವೆಚ್ಚದಿಂದ ರೈತರು ಆರ್ಥಿಕವಾಗಿ ಸಂಪೂರ್ಣ ಕುಗ್ಗುವಂತಾಗಿದೆ ಎಂದು ಹೇಳಿದರು.

ನನಗೆ ಬಾಲ್ಯದಿಂದಲೇ ಕೃಷಿಯ ಬಗ್ಗೆ ಚೆನ್ನಾಗಿ ಗೊತ್ತು. ರೈತರ ನೋವು, ಕಷ್ಟಗಳನ್ನು ಹತ್ತಿರದಿಂದ ಕಂಡಿದ್ದೇನೆ. ರೈತರು ಉಳಿದರೆ ಮಾತ್ರ ದೇಶ ಉಳಿಯುತ್ತದೆ. ಆದ್ದರಿಂದ ಸರ್ಕಾರ ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣವೇ ಬರ ಪರಿಹಾರ, ಸಾಲಮನ್ನಾ ಹಾಗೂ ಇತರೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಬರಗಾಲದಿಂದ ಜಾನುವಾರುಗಳಿಗೆ ಮೇವು ಕೊರತೆಯೂ ತೀವ್ರವಾಗಿ ಎದುರಾ ಗಿದ್ದು, ರೈತರು ಜಾನುವಾರುಗಳನ್ನು ಸಾಕುವುದೂ ಕಷ್ಟಕರವಾಗಿದೆ. ಸರ್ಕಾರ ತುರ್ತು ಕ್ರಮ ಕೈಗೊಂಡು ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಬೇಕು. ಜಾನುವಾರುಗಳಿಗೆ ಅಗತ್ಯ ಮೇವು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಬರ ನಿರ್ವಹಣೆಗೆ ಸಮಗ್ರ ಪರಿಹಾರ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಅವರು ಒತ್ತಾಯಿಸಿದರು.

ರೈತ ಸಮುದಾಯವನ್ನು ಸಂಕಷ್ಟದಿಂದ ಹೊರತರುವ ನಿಟ್ಟಿನಲ್ಲಿ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಿ, ಕೃಷಿ ಚಟುವಟಿಕೆಗಳಿಗೆ ಹೊಸ ಚೈತನ್ಯ ತುಂಬುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

### ವರ್ಷಧಾರೆಯಿಲ್ಲದೆ ಬರಗಾಲ; ವಲಸೆ ತಡೆಗೆ ಕ್ರಮ

# 'ವಿಬಿ–ಜಿ ರಾಮ್ ಜಿ' ಆಸರೆ–ಪರಿಣಾಮಕಾರಿ ಅನುಷ್ಠಾನಕ್ಕೆ ಸಚಿವ ಈಶ್ವರ ಖಂಡ್ರೆ ಸೂಚನೆ



**ಬಳ್ಳಾರಿ,ಆ.09.** ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಕೃಷಿ ಚಟುವಟಿಕೆಗಳು ಕ್ಷೀಣಿಸಿರುವುದರಿಂದ ಜನರು ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುವ ಸಾಧ್ಯತೆಯಿದೆ. ಗ್ರಾಮೀಣ ಭಾಗದಲ್ಲೇ ಪ್ರತಿಯೊಬ್ಬ ಅರ್ಹ ಕೂಲಿಕಾರನಿಗೆ ವಿ ಬಿ – ಜಿ ರಾಮ್ ಜಿ ಯೋಜನೆಯಡಿ ಕೆಲಸ ನೀಡುವ ಮೂಲಕ ವಲಸೆಯನ್ನು ತಡೆಯಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್‌ನ ಹೊಸ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಗ್ರಾಮೀಣ ಭಾಗದ ಜನರಿಗೆ ಸ್ಥಳೀಯವಾಗಿಯೇ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ 'ವಿಕಸಿತ್ ಭಾರತ್–ಗ್ಯಾರಂಟಿ ಫಾರ್ ರೋಜ್ ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ)' ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ 'ಗೊಳಿಸ'ಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಜೂನ್ ತಿಂಗಳವರೆಗೆ ನಿಗದಿಪಡಿಸಿದ್ದ ಮಾನವ ದಿನಗಳ ಸೃಷ್ಟಿಯ ಗುರಿಯಲ್ಲಿ ಶೇ. 46 ರಷ್ಟು ಮಾತ್ರ ಸಾಧನೆಯಾಗಿದ್ದು, ನಿರೀಕ್ಷಿತ ಮಟ್ಟ ತಲುಪದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಜಿಲ್ಲೆಯಲ್ಲಿ ಪ್ರಸಕ್ತ ವರ್ಷಕ್ಕೆ ಒಟ್ಟು 51.30 ಲಕ್ಷ ಮಾನವ ದಿನಗಳ ಸೃಷ್ಟಿಯ ಗುರಿ ಹೊಂದಲಾಗಿದೆ. ಜುಲೈ ತಿಂಗಳಿನಿಂದ ಉದ್ಯೋಗ ಸೃಷ್ಟಿ ವೇಗವನ್ನು ಹೆಚ್ಚಿಸಬೇಕಿದ್ದು, ಪ್ರತಿ ತಿಂಗಳು ಕನಿಷ್ಠ 5 ರಿಂದ 6 ಲಕ್ಷ ಮಾನವ ದಿನಗಳನ್ನು ಸೃಷ್ಟಿಸುವಂತೆ ಸಚಿವರು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 1.84 ಲಕ್ಷ ಸಕ್ರಿಯ ಜಾಬ್ ಕಾರ್ಡ್‌ಗಳಿದ್ದು, 4.60 ಲಕ್ಷ ಕಾರ್ಮಿಕರಿದ್ದಾರೆ. ಇದರಲ್ಲಿ ಸುಮಾರು 1.30 ಲಕ್ಷ ಜಾಬ್ ಕಾರ್ಡ್‌ಗಳಿಗೆ ಇ–ಕೆವೈಸಿ ಪ್ರಕ್ರಿಯೆ ಪೂರ್ಣಗೊಂಡಿದೆ. ಆದಷ್ಟು ಬೇಗ ಬಾಕಿ ಇರುವ ಪ್ರಕ್ರಿಯೆ ಮುಗಿಸುವಂತೆ ತಿಳಿಸಿದರು.

**ಬಳ್ಳಾರಿ ತಾಲೂಕು ಸಾಧನೆಗೆ ಅಸಮಾಧಾನ:** ಬಳ್ಳಾರಿ ತಾಲೂಕಿನಲ್ಲಿ 48,000 ಸಕ್ರಿಯ ಜಾಬ್ ಕಾರ್ಡ್‌ಗಳಿದ್ದರೂ ದಿನಕ್ಕೆ ಕೇವಲ 11,000 ದಷ್ಟು ಕಾರ್ಮಿಕರಿಗೆ ಮಾತ್ರ ಕೆಲಸ ನೀಡುತ್ತಿರುವುದಕ್ಕೆ ಸಚಿವರು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಬಳ್ಳಾರಿ ತಾಲೂಕು ಇಓ ಪ್ರತಿಕ್ರಿಯಿಸಿ, ಹಳೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಸ ಕಾಮಗಾರಿಗಳಿಗೆ ಆಕ್ಷನ್ ಪ್ಲಾನ್ ಸಿದ್ಧಪಡಿಸಿ ಉದ್ಯೋಗ ನೀಡುವುದರಲ್ಲಿ ವಿಳಂಬವಾಗುತ್ತಿದೆ ಎಂದು ವಿವರಿಸಿದರು.

ಇದಕ್ಕೆ ಸಚಿವರು ಸಾಬೂಬುಗಳನ್ನು ನೀಡದೆ ವೈಯಕ್ತಿಕ ಹಾಗೂ ಸಮುದಾಯ ಆಧಾರಿತ ಕಾಮಗಾರಿಗಳನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಎಚ್ಚರಿಸಿದರು.

'ವಿ ಬಿ–ಜಿ ರಾಮ್ ಜಿ' ಯೋಜನೆಯ ಸ್ವರೂಪ ಬದಲಾವಣೆಯಿಂದಾಗಿ ಆರಂಭದಲ್ಲಿ ಕೆಲವೊಂದು ಗೊಂದಲಗಳಿದ್ದವು. ಆದರೆ, ಈಗ ಆ ಗೊಂದಲಗಳಿಗೆ ಸ್ಪಷ್ಟೀಕರಣ ದೊರೆತಿದ್ದು, ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳ ಲಾಗಿದೆ. ಈವರೆಗೆ ಬೃಹತ್ ಪ್ರಮಾಣದ ಅನುದಾನ ವೆಚ್ಚಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬಲವಾದ ಹಣಕಾಸು ಬೆಂಬಲ ಒದಗಿಸಲಾಗಿದ್ದು, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದ ಸಹಯೋಗದೊಂದಿಗೆ ಯೋಜನೆ ಮುನ್ನಡೆಯುತ್ತಿದೆ ಎಂದು ಸಚಿವ ಖಂಡ್ರೆ ತಿಳಿಸಿದರು.

# ಬೀದರ್ ಸಿಲ್ವರ್‌ಸ್ಟಾರ್ ರೋಟರಿ ಕ್ಲಬ್‌ಗೆ ಒಲಿದ 10 ಪ್ರಶಸ್ತಿಗಳು



**ಬೀದರ್, ಆ. 9:** ಗೋವಾದಲ್ಲಿ ಇತ್ತೀಚೆಗೆ ಜರುಗಿದ ರೊಟರಿ ಇಂಟರ್ ನ್ಯಾಷನಲ್ ಜಿಲ್ಲೆ 3160ರ (ಕರ್ನಾಟಕ ಮತ್ತು ಆಂಧ್ರಪ್ರದೇಶ) ಅಂತರ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೀದರ್ ಸಿಲ್ವರ್‌ಸ್ಟಾರ್ ರೋಟರಿ ಕ್ಲಬ್‌ಗೆ ಹತ್ತು ಪ್ರಶಸ್ತಿಗಳು ಒಲಿದು ಬಂದಿವೆ.

ಸಮುದಾಯ ಸೇವೆ, ವೃತ್ತಿಪರ ಸೇವೆ, ಶಾಶ್ವತ ಸೇವಾ ಯೋಜನೆ, ಜನಸಂಪರ್ಕ ಯೋಜನೆ, ಜನಸಂಪರ್ಕ, ನಿಧಿ ಸಂಗ್ರಹ ಸೇರಿದಂತೆ ಹಲವು ಕಾರ್ಯಗಳನ್ನು ನೋಡಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕ್ಲಬ್ ಅಧ್ಯಕ್ಷ ಆದೀಶ್ ಆರ್. ವಾಲಿ ಪ್ರಶಸ್ತಿ ಸ್ವೀಕರಿಸಿದರು. ಐಪಿಡಿಜಿ ಎಂ.ಕೆ.ರವೀಂದ್ರ, ಡಿಜಿ ಕೇಶವ ರೆಡ್ಡಿ, ಡಿಜಿ ಡಾ.ಲೆನ್ನಿ ಡ ಕಸ್ಟ, ಪಿಡಿಜಿ ಮಧುಪ್ರಸಾದ್, ರಘು ಕೃಷ್ಣಮೂರ್ತಿ, ರವಿ ಮೂಲಗೆ, ನವೀನ್ ಗೋಯಲ್, ಭಾವೇಶ್ ಪಟೇಲ್, ಹರ್ಷದ್ ಪಟೇಲ್ ಉಪಸ್ಥಿತರಿದ್ದರು.

# ಸಿಇಓ ಕಚೇರಿ ಮುಂದೆ ಕುಸಿದು ಬಿದ್ದ ಜೆಡಿಎಸ್ ನಾಯಕಿ ಮಹೇಶ್ವರಿ ವಾಲಿ



**ಕಲಬುರಗಿ, ಆ. 9:** ಜಿಲ್ಲೆಯ ಆಳಂದ್ ಕ್ಷೇತ್ರದಲ್ಲಿ ಸಾರ್ವಜನಿಕ ಶೌಚಾಲಯಗಳ ದುರಾವಸ್ಥೆ ಖಂಡಿಸಿ ಮತ್ತು ಮಹಿಳಾ ಶೌಚಾಲಯಗಳ ಸಮಸ್ಯೆಯನ್ನು ಪರಿಹರಿಸುವಂತೆ ಒತ್ತಾಯಿಸಿ, ಆಳಂದ್ ಪಟ್ಟಣದಿಂದ ಜಾತ್ಯಾತೀತ ಜನತಾದಳದ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಮಹೇಶ್ವರಿ ವಾಲಿ ಅವರು ಆರಂಭಿಸಿದ ಜನ ಪರ ಪಾದಯಾತ್ರೆ ಜಿಲ್ಲಾ ಪಂಚಾಯಿತಿ ಕಚೇರಿಯನ್ನು ತಲುಪುತ್ತಿದ್ದಂತೆಯೇ ಕಾಲ್ನಡಿಗೆಯಿಂದ ಸುಸ್ತಾಗಿದ್ದ ಜೆಡಿಎಸ್ ನಾಯಕಿ ಮಹೇಶ್ವರಿ ವಾಲಿ ಅವರು ಜಿಲ್ಲಾ ಪಂಚಾಯಿತಿ ಕಚೇರಿ ಮುಂದೆ ಇರುವ ರಾಷ್ಟ್ರಧ್ವಜ ಕಂಬದ ಬಳಿ ಸುಸ್ತಾಗಿ ಕುಸಿದುಬಿದ್ದರು. ಕಾರ್ಯಕರ್ತರ ಆರೈಕೆಯಿಂದ ಎಚ್ಚೆತ್ತ ಮಹೇಶ್ವರಿ ವಾಲಿ ಅವರು ತಮ್ಮ ಬೇಡಿಕೆಗಳ ಮನವಿ ಪತ್ರ ಜಿಲ್ಲಾ ಪಂಚಾಯಿತಿ ಸಿಇಓಗೆ ಸಲ್ಲಿಸಿದರು.

ಆಳಂದ್ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮರ್ಪಕ ಹಾಗೂ ಸೂಕ್ತ ಶೌಚಾಲಯಗಳು ಇಲ್ಲದೇ ರಸ್ತೆ ಬದಿ ಹಾಗೂ ಹೊಲ, ಗದ್ದೆಗಳಲ್ಲಿ ಬಹಿರ್ದೆಸೆ ಮಾಡುವಂತಾಗಿದೆ. ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಬಹಿರ್ದೆಸೆಯಿಂದ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ.

ನಿತ್ಯ ಬೆಳಗ್ಗೆ ಮತ್ತು ಸಂಜೆ ಹಾಗೂ ಹಗಲು ಹೊತ್ತಿನಲ್ಲಿಯೇ ಮಹಿಳೆಯರು ರಸ್ತೆಬದಿ ಇಲ್ಲವೇ ಊರಿನ ಮುಂದಿನ ಬಯಲು ಸ್ಥಳದಲ್ಲಿ ಬಹಿರ್ದೆಸೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾದರೂ ಸಹ ಶಾಸಕರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಶಾಸಕ ಬಿ. ಆರ್. ಪಾಟೀಲ್ ಅವರ ಹೆಸರು ಹೇಳದೇ ಪರೋಕ್ಷವಾಗಿ ಮಹೇಶ್ವರಿ ವಾಲಿ ಅವರು ಹರಿಹಾಯ್ದರು.

ಪಟ್ಟಣದಲ್ಲಿ ಊರ ಹೊರಗಡೆ ಹಾಗೂ ದೂರದ ಸ್ಥಳದಲ್ಲಿ ಶೌಚಾಲಯ ನಿರ್ಮಿಸಿದ್ದರಿಂದ ಮಹಿಳೆಯರು ಅಲ್ಲಿಗೆ ಹೋಗಲಾಗದಂತಹ ಪರಿಸ್ಥಿತಿ ಇದೆ. ಕೇವಲ ಹಣ ಎತ್ತಿ ಹಾಕುವಂತಹ ಕೆಲಸ ಆಳಂದ್ ತಾಲ್ಲೂಕಿನಲ್ಲಿ ಆಗುತ್ತಿದೆ ಹೊರತು ಸುಲಭ ಶೌಚಾಲಯ ಕಲ್ಪಿಸುವಲ್ಲಿ ಕ್ಷೇತ್ರದಿಂದ ಆಯ್ಕೆಯಾಗಿರುವ ಇಬ್ಬರು ಶಾಸಕರು ಈವರೆಗೂ ಮಾಡಿಲ್ಲ ಎಂದು ಆರೋಪಿಸಿದರು.

## ಹೆದ್ದಾರಿ ಕಾಮಗಾರಿ ವಿಳಂಬ: ಗುಣಮಟ್ಟದ ಕಾಮಗಾರಿ ಕೈಗೊಳ್ಳಲು ಸಂಸದ ಕುಮಾರ ನಾಯಕ ಸೂಚನೆ



**ರಾಯಚೂರು, ಆ.9:** ರಾಯಚೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕೈಗೆತ್ತಿಕೊಂಡಿರುವ ವಿವಿಧ ಹೆದ್ದಾರಿ ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳಬೇಕು. ಸಕಾಲದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸಂಸದ ಜಿ.ಕುಮಾರ ನಾಯಕ ಸೂಚಿಸಿದರು.

ಕಾಮಗಾರಿ ಪ್ರಾರಂಭವಾಗಿ ಹಲವು ವರ್ಷಗಳು ಕಳೆದಿದ್ದರೂ ಇನ್ನೂ ಪೂರ್ಣಗೊಳ್ಳದಿರುವುದಿರುವುದು ಸರಿಯಲ್ಲ' ಎಂದು ಸಂಸದರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸಾರ್ವಜನಿಕರು ಹಾಗೂ ವಾಹನ ಸವಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಯಾವುದೇ ಕಾರಣಕ್ಕೂ ಕಾಮಗಾರಿಗಳು ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಹೆದ್ದಾರಿ ಕಾಮಗಾರಿಗಳ ಸಂದರ್ಭದಲ್ಲಿ ಸ್ಥಳೀಯರಿಗೆ ಹಾಗೂ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಅಗತ್ಯವಿರುವ ಕಡೆಗಳಲ್ಲಿ ಸರ್ವಿಸ್ ರಸ್ತೆ, ಅಂಡರ್‌ಪಾಸ್ ಹಾಗೂ ಸುರಕ್ಷಿತ ಸಂಪರ್ಕ ಮಾರ್ಗಗಳನ್ನು ಕಲ್ಪಿಸಬೇಕು ಎಂದು ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ರೈತರು ತಮ್ಮ ಜಮೀನುಗಳಿಗೆ ಸುಲಭವಾಗಿ ತೆರಳಲು ಹಾಗೂ ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಮೂಲಸೌಕರ್ಯಗಳನ್ನು ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಹೆದ್ದಾರಿ ಕಾಮಗಾರಿಗಳಿಂದಾಗಿ ಗ್ರಾಮೀಣ ಪ್ರದೇಶಗಳ ಸಂಪರ್ಕ ಕಡಿತಗೊಳ್ಳದಂತೆ ಸ್ಥಳೀಯ ಅಗತ್ಯಗಳನ್ನು ಪರಿಗಣಿಸಬೇಕು. ಶಾಲೆಗಳು, ಗ್ರಾಮಗಳು, ಕೃಷಿ ಜಮೀನುಗಳು ಹಾಗೂ ಪ್ರಮುಖ ಸಂಪರ್ಕ ಸ್ಥಳಗಳ ಬಳಿ ಸಾರ್ವಜನಿಕರ ಸುರಕ್ಷತೆಗೆ ಅಗತ್ಯವಿರುವ ಅಂಡರ್‌ಪಾಸ್ ಮತ್ತು ಇತರ ಸುರಕ್ಷತಾ ವ್ಯವಸ್ಥೆಗಳನ್ನು ಕಲ್ಪಿಸಬೇಕು ಕಾಮಗಾರಿಗಳ ಪ್ರಗತಿ ಯನ್ನು ನಿಯಮಿತವಾಗಿ ಪರಿಶೀಲಿಸಿ, ವಿಳಂಬವಾಗದಂತೆ ಕಾರ್ಯಯೋಜನೆ ರೂಪಿಸಬೇಕು ಎಂದು ಸಂಸದರು ಸೂಚಿಸಿದರು.

## ಕರ್ನಾಟಕದಲ್ಲಿ ಅನ್ನ, ಅಕ್ಷರ ದಾಸೋಹದ ಕ್ರಾಂತಿ, ಬ್ರಾಹ್ಮಣೇತರರಿಗೆ ಶಿಕ್ಷಣ ನೀಡಿದ ಹೆಗ್ಗಳಿಕೆ ವೀರಶೈವ ಲಿಂಗಾಯತ ಸಮಾಜದ್ದು: ಮಂಜುನಾಥ್ ಶ್ಲಾಘನೆ




**ಬಳ್ಳಾರಿ, ಆ.09:** ಕರ್ನಾಟಕದಲ್ಲಿ ಅನ್ನ ಅಕ್ಷರ ದಾಸೋಹದ ಕ್ರಾಂತಿ ನಡೆಸಿ ಬ್ರಾಹ್ಮಣೇತರರಿಗೆ ಶಿಕ್ಷಣ ನೀಡಿದ ಕಾರ್ಯವನ್ನು ವೀರಶೈವ ಲಿಂಗಾಯತ ಸಮಾಜ ಸಂಘ ಸಂಸ್ಥೆಗಳು ಮಾಡಿವೆ ಎಂದು ನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಹೇಳಿದರು.

ಅವರು ನಿನ್ನೆ ಸಂಜೆ ನಗರದ ವೀರಶೈವ ವಿದ್ಯಾವರ್ಧಕ ಸಂಘದ ಶಿಕ್ಷಣ ಸಂಸ್ಥೆ ಹೀರದ ಸೂಗಮ್ಮ ಶಾಲೆಯ ಶತಮಾನೋತ್ಸವದ ಮೊದಲ ದಿನದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿರು.

ಕಳೆದ ಒಂದು ಶತಮಾನದಲ್ಲಿ ಈ ರಾಜ್ಯದ ಜನತೆಗೆ ಶಿಕ್ಷಣ ನೀಡುವಲ್ಲಿ ವೀರಶೈವ ವಿದ್ಯಾವರ್ಧಕ ಸಂಘದ ಸೇವೆ ಸ್ಮರಣೀಯ. ಈ ದೇಶಕ್ಕೆ ಉತ್ತಮ ಮಾನವ ಸಂಪನ್ಮೂಲ ನೀಡುವಲ್ಲಿ ಸಂಘ–ಸಂಸ್ಥೆಗಳು ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು

ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ ಜಾನೆಕುಂಟೆ ಬಸವರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಇತರೇ ಶಿಕ್ಷಣ ಸಂಸ್ಥೆಗಳಂತೆ ಕೋಟಿಗಟ್ಟಕೆ ಆದಾಯ ಮಾಡದೆ. ಕೋಟಿಗಟ್ಟಲೆ ಮಕ್ಕಳಿಗೆ ವಿದ್ಯಾದಾನ ಮಾಡಿದೆ. ನಮ್ಮ ಇಂಜಿನಿಯರಿಂಗ್ ಕಾಕೇಜಿನಲ್ಲಿ ಮಾತ್ರ ಬಡ ಮಕ್ಕಳು ಕಡಿಮೆ ಶುಲ್ಕದಲ್ಲಿ ವಿದ್ಯೆ ಪಡೆಯುತ್ತಿದ್ದಾರೆ ಇದು ಹೆಮ್ಮೆಯ ಸಂಗತಿ. ಸರ್ಕಾರ ನಮ್ಮ ಶಾಲೆಗಳಲ್ಲಿ ಅಗತ್ಯ ಸಿಬ್ಬಂದಿ ನೀಡದಿದ್ದರೂ ಸಂಘದಿಂದಲೇ ವೇತನ ಭರಿಸಿ ವಿದ್ಯಾ ದಾನ ಮಾಡಿತ್ತುದೆಂದರು.

ಸಾನಿದ್ಯವಹಿಸಿದ್ದ ಕಲ್ಯಾಣ ಮಠದ ಶ್ರೀಗಳು ಮಾತನಾಡಿ, ಶಿಕ್ಷಣ ಸಂಸ್ಥೆಗಳು ಹಣ ಮಾಡುವ ಉದ್ದೇಶದಿಂದ ಆರಂಭವಾಗಬಾರದು. ಅಕ್ಷರಾ ದಾಸೋಹ ಎಂದು ಶಾಲಾ ಕಾಲೇಜುಗಳನ್ನು ನಡೆಸುವ ಕೆಲಸ ಆಗಬೇಕು ಅದನ್ನು ವೀರಶೈವ ವಿದ್ಯಾವರ್ಧಕ ಸಂಘ ಮಾಡುತ್ತಿರುವುದು ಉತ್ತಮ ಕಾರ್ಯ ಎಂದರು.

ವೇದಿಕೆಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಿಗೆ, ಶಾಲೆಯ, ಆಡಳಿತ ಮಂಡಳಿ ಅಧ್ಯಕ್ಷ ಯಾಳ್ಪಿ ಪಂಪನಗೌಡ ಮತ್ತು ಸದಸ್ಯರಿಗೆ, ಭೋದಕ, ಭೋದಕೇತರ ಸಿಬ್ಬಂದಿಗೆ ಗೌರವ ಸನ್ಮಾನ ನೆರವೇರಿಸಲಾಯ್ತು.

ವೇದಿಕೆಯಲ್ಲಿ ಸಂಘದ ಅಧ್ಯಕ್ಷ ಡಾ.ಕಣೇಕಲ್ ಮಹಾಂತೇಶ್, ಕಾರ್ಯದರ್ಶಿ ಡಾ.ಅರವಿಂದ ಪಾಟೀಲ್, ಖಜಾಂಚಿ ಬೈಲು ವದ್ದಿಗೇರಿ ಎರ್ರಿಸ್ವಾಮಿ ಮೊದಲಾದವರು ಇದ್ದರು

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವರಕನಹಳ್ಳಿ ಮೋಹನ್ ರೆಡ್ಡಿ ಸ್ವಾಗತ, ಗುಡೇಕೋಟೆ ನಾಗರಾಜ್ ವಂದನಾರ್ಪಣೆ ಮಾಡಿದರು.ಈ ವೇಳೆ ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಮತ್ತು ಶರಣ ಸಕ್ಕರೆ ಕರಡೀಶ ನಾಟಕ ಪ್ರದರ್ಶನ ನಡೆಯಿತು.

# ದಾನಗಳಲ್ಲಿ ರಕ್ತದಾನ ಶ್ರೇಷ್ಠ: ರಾಧಿಕಾ ಬಹನ್‌ಜೀ




**ಬೀದರ್, ಆ. 9:** ದಾನಗಳಲ್ಲಿ ಎಲ್ಲ ದಾನಗಳಿಗಿಂತ ರಕ್ತದಾನ ಅತ್ಯಂತ ಶ್ರೇಷ್ಠವಾದದ್ದು, ರಕ್ತದಾನ ಮಾಡುವುದರಿಂದ ಮತ್ತೊಬ್ಬರ ಜೀವ ಉಳಿಸಲು ಸಹಕಾರಿ ಆಗುತ್ತದೆ. ಹಾಗಾಗಿ ರಕ್ತದಾನ ಅತ್ಯಂತ ಶ್ರೇಷ್ಠವಾದುದು ಎಂದು ರಾಜಯೋಗ ಕೇಂದ್ರದ ಸಂಯೋಜಕಿ ಬ್ರಹ್ಮಕುಮಾರಿ ರಾಧಿಕಾ ಬಹನ್‌ಜೀ ಹೇಳಿದರು.

ನಗರದ ತಳವಾಡೆ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್ ಫೋರ್ಟ್–3160 ವತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಅಪಘಾತಗಳು, ಪ್ರಮುಖ ಶಸ್ತ್ರಚಿಕಿತ್ಸೆಗಳು ಮತ್ತು ತೀವ್ರ ರಕ್ತಹಿನತೆಯಿಂದ ಬಳಲುತ್ತಿರುವವರ ಪ್ರಾಣ ಉಳಿಸಲು ದಾನ ಮಾಡಿದ ರಕ್ತವು ತಕ್ಷಣದ ಜೀವನಾಡಿಯಾಗುತ್ತದೆ. ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಆರೋಗ್ಯವು ಉತ್ತಮಗೊಳ್ಳುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ರೋಟರಿ ಕ್ಲಬ್ ಅಧ್ಯಕ್ಷೆ ಡಾ.ಶೈಲಜಾ ತಳವಾಡೆ, ರಕ್ತದಾನ ಶಿಬಿರಕ್ಕೆ ವೈದ್ಯರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಸ್ವಯಂಪ್ರೇರಿತರಾಗಿ ಆಗಮಿಸಿ ರಕ್ತದಾನ ಮಾಡಿರುವುದು ಅತ್ಯಂತ ಖುಷಿ ಕೊಟ್ಟಿದೆ. ಇದು ಮುಂದಿನ ನಮ್ಮ ಸಾಮಾಜಿಕ ಕಾರ್ಯಕ್ಕೆ ಮತ್ತಷ್ಟು ಶಕ್ತಿ ತಂದು ಕೊಡಲಿದೆ ಎಂದು ತಿಳಿಸಿದರು.

ಡಾ.ಅನಿಲಕುಮಾರ ತಳವಾಡೆ ಮಾತನಾಡಿ, ಚಿತ್ರದುರ್ಗದಲ್ಲಿಂದು ಡೆಂಗ್ಯು ಜ್ವರದಿಂದ ಬಳಲುತ್ತಿದ್ದ ಒಬ್ಬ ವ್ಯಕ್ತಿಗೆ ಬೀದರ್ ಬ್ಲಡ್ ಬ್ಯಾಂಕ್ ಮೂಲಕ ರಕ್ತ ಕಳುಹಿಸಿ ಪ್ರಾಣ ಉಳಿಸಿ ಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಹಾಗಾಗಿ ರಕ್ತದಾನಕ್ಕೆ ಎಂದಿಗೂ ಬೆಲೆ ಕಟ್ಟಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ.ಶಶಿಕಾಂತ ಭೂರೆ, ಐಶ್ವರ್ಯ ಉದ್ಧವ ಕನಸೆ, ನಮೃತಾ ಗುಂಡೇರಾವ್ ಶೆಡೋಳೆ, ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಅಶೋಕ ಪಾಟೀಲ್, ಡಾ.ನಿತಿನ್ ಪಾಟೀಲ್, ಡಾ.ಅಮಿತ ಅಷ್ಟೂರೆ, ಡಾ.ವಿಕ್ರಮ ದೇವಪ್ಪ, ಡಾ.ಶ್ರೀರಂಗ ಬಿರಾದಾರ, ನ್ಯಾಯವಾದಿ ಉಮಾಕಾಂತ ವಾರದ, ಅಶ್ವಿನ ಭೋಸ್ಲೆ, ಅವಿನಾಶ ಮಾಲ್ಗೆ, ಸಾಗರ ನಾಯಕ, ಡಾ.ಯುವರಾಜ ಜಾಧವ, ಡಾ.ವಸಂತ ಪವಾರ, ಡಾ.ವಿಲಾಸ ಕನಸೆ, ಸಂಜಯ ಕುಮಾರ ಪಂಡರಗೆರೆ, ನ್ಯಾಯವಾದಿ ಸಂಜಯ ನಾಯಕ, ಬಸವ ಪಾಟೀಲ್?, ಪ್ರಭು ಕೋಟೆ, ಜಯಕಿಶನ ಬಿಯಾನಿ, ಡಾ.ವಿಜಯ ಕುಮಾರ, ಡಾ.ಶೃತಿ ಬುಳ್ಳಾ ಇತರರಿದ್ದರು.

ಶೋಭಾ ಪ್ರಾರ್ಥನೆ ಗೀತೆ ನಡೆಸಿ ಕೊಟ್ಟರು. ರೋಟರಿ ಕ್ಲಬ್? ಕಾರ್ಯದರ್ಶಿ ಅಶೋಕ ರಾಜೋಳೆ ನಿರೂಪಣೆ ಮಾಡಿ ವಂದಿಸಿದರು. ದಂಪತಿಗಳಿಂದ ರಕ್ತದಾನರಕ್ತದಾನ ಶಿಬಿರದಲ್ಲಿ ವಿವಿಧ ಸಂಸ್ಥೆಗಳ ಮುಖಂಡರು, ವೈದ್ಯರು ರಕ್ತದಾನ ಮಾಡಿದರು. ವಿಶೇಷವಾಗಿ ಸಾರ್ವಜನಿಕ ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ.ಶಶಿಕಾಂತ ಭೂರೆ, ರೀನಾ ಶಶಿಕಾಂತ, ಡಾ.ಶೈಲಜಾ ಡಾ.ಅನಿಲ ಕುಮಾರ ತಳವಾಡೆ, ಡಾ.ಗುಂಡೇರಾವ್ ಶೆಡೋಳೆ, ನಮೃತಾ ಗುಂಡೇರಾವ, ಹಿರಿಯ ನ್ಯಾಯವಾದಿ ಉಮಾಕಾಂತ ವಾರದ, ಗೌರಿ ಉಮಾಕಾಂತ, ಡಾ.ಶಿಕ್ಷಾ ದಯಾನಂದ ಸೂರ್ಯವಂಶಿ ಸೇರಿ 175 ಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

# ಒಮಾನ್ ಜೊತೆ ಮಾತುಕತೆ: ಹಾರ್ಮುಜ್ ಜಲಸಂಧಿ ಮತ್ತೆ ತೆರೆಯಲು ಬೇಡಿಕೆ ಮುಂದಿಟ್ಟ ಇರಾನ್

**ಟೆಹ್ರಾನ್, ಆಗಸ್ಟ್ 9:** ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಟೆಹ್ರಾನ್ ಒಪ್ಪುವ ಮೊದಲು ಅಮೆರಿಕ ಭೇಟಿಯಾಗಬೇಕೆಂದು ಇರಾನ್ ಹಲವಾರು ಬೇಡಿಕೆಗಳನ್ನು ಮುಂದಿಟ್ಟಿದೆ, ಇದು ಪ್ರಮುಖ ಜಲಮಾರ್ಗದ ಕುರಿತು ಮಾತುಕತೆಗಳಲ್ಲಿ ಪಾಲನ್ನು ಹೆಚ್ಚಿಸಿದೆ ಮತ್ತು ಎರಡೂ ದೇಶಗಳ ನಡುವಿನ ಆಳವಾದ ಅಪನಂಬಿಕೆಯನ್ನು ಒತ್ತಿಹೇಳುತ್ತದೆ. ಇರಾನ್ನ ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿ ಮೊಹಮ್ಮದ್ ಬಘರ್ ಜೊಲ್ಘಾದರ್, ಜಲಸಂಧಿಯನ್ನು ಮತ್ತೆ ತೆರೆಯುವ ಮೊದಲು ಅಮೆರಿಕವು ಟೆಹ್ರಾನ್ ತನ್ನ ಪ್ರತಿಕೂಲ ನಡವಳಿಕೆ ಎಂದು ವಿವರಿಸಿದ್ದನ್ನು ಬದಲಾಯಿಸಬೇಕಾಗುತ್ತದೆ ಎಂದು ಹೇಳಿದರು. "ಅಮೆರಿಕ ತನ್ನ ನಡವಳಿಕೆಯನ್ನು ಸರಿಪಡಿಸುವವರೆಗೆ, ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲಾಗುವುದಿಲ್ಲ" ಎಂದು ಜೊಲ್ಘಾದರ್ ಶನಿವಾರ ಇರಾನಿನ ರಾಜ್ಯ ಮಾಧ್ಯಮ ನಡೆಸಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಮೆರಿಕದ ನೌಕಾ ದಿಗ್ಬಂಧನವನ್ನು ಕೊನೆಗೊಳಿಸುವುದು, ಅಮೆರಿಕದ ಮಿಲಿಟರಿ ಪಡೆಗಳನ್ನು ಹಿಂತೆಗೆದುಕೊಳ್ಳುವುದು, ಇರಾನ್ ಮತ್ತು ಅದರ ಮಿತ್ರರಾಷ್ಟ್ರಗಳ ವಿರುದ್ಧದ ಮಿಲಿಟರಿ ಕಾರ್ಯಾಚರಣೆಗಳನ್ನು ಕೊನೆಗೊಳಿಸುವುದು ಮತ್ತು ನಿರ್ಬಂಧಗಳನ್ನು ತೆಗೆದುಹಾಕುವುದು ಬೇಡಿಕೆಗಳಲ್ಲಿ ಸೇರಿವೆ. ಸಂಘರ್ಷದಿಂದ ಉಂಟಾದ ಹಾನಿಗೆ ಪರಿಹಾರ ಮತ್ತು ವಿದೇಶಗಳಲ್ಲಿ ಸ್ಥಗಿತಗೊಳಿಸಲಾದ ಇರಾನಿನ ಸ್ವತ್ತುಗಳನ್ನು ಬೇಷರತ್ತಾಗಿ ಬಿಡುಗಡೆ ಮಾಡುವಂತೆಯೂ ಇರಾನ್ ಕೋರುತ್ತಿದೆ.

ವಾಷಿಂಗ್ಟನ್ ಇರಾನ್‌ಗೆ ಬೆದರಿಕೆ ಹಾಕುವುದನ್ನು ಮತ್ತು ದೇಶದ ಧಾರ್ಮಿಕ ಪವಿತ್ರತೆಗಳಿಗೆ ಅವಮಾನ ಎಂದು ಅವರು ವಿವರಿಸಿರುವುದನ್ನು ನಿಲ್ಲಿಸಬೇಕು ಎಂದು ಝೋಲ್ಘಾದರ್ ಹೇಳಿದರು. ತಿಂಗಳುಗಳ ಯುದ್ಧದ ನಂತರ ಇರಾನಿನ ಜನರ ನಿಲುವನ್ನು ಈ ಬೇಡಿಕೆಗಳು ಪ್ರತಿಬಿಂಬಿಸುತ್ತವೆ ಎಂದು ಅವರು ಹೇಳಿದರು. "ಇವು ಇರಾನಿನ ಜನರ ಬೇಡಿಕೆಗಳಾಗಿವೆ, ಇವುಗಳನ್ನು ಅವರು




160 ದಿನಗಳ ಕಾಲ ಕ್ಷೇತ್ರದಲ್ಲಿ ಮತ್ತು ಬೀದಿಗಳಲ್ಲಿ ದೃಢವಾದ ಉಪಸ್ಥಿತಿಯ ಸಂದರ್ಭದಲ್ಲಿ ಜೋರಾಗಿ ಘೋಷಿಸಿದ್ದಾರೆ" ಎಂದು ಅವರು ಹೇಳಿದರು. ವಿಶ್ವದ ಪ್ರಮುಖ ಇಂಧನ ಕಾರಿಡಾರ್‌ಗಳಲ್ಲಿ ಒಂದಾದ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯುವುದನ್ನು ನಿರ್ವಹಿಸುವ ಮಾರ್ಗವನ್ನು ಕಂಡುಕೊಳ್ಳುವ ಗುರಿಯನ್ನು ಇರಾನಿನ ಮತ್ತು ಒಮಾನಿ ಅಧಿಕಾರಿಗಳು ಮಾತುಕತೆಗಳನ್ನು ಮುಂದುವರಿಸುತ್ತಿರುವಾಗ ಈ ಹೇಳಿಕೆ ಬಂದಿದೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಶನಿವಾರ, ಟೆಹ್ರಾನ್ ಜಲಮಾರ್ಗದ ವ್ಯವಸ್ಥೆಗಳ ಕುರಿತು ಒಮಾನ್ನೊಂದಿಗೆ ಒಪ್ಪಂದಕ್ಕೆ ಬರಲು "ಬಹಳ ಹತ್ತಿರದಲ್ಲಿದೆ" ಎಂದು ಹೇಳಿದರು. ಆದರೆ ಜೂನ್ನಲ್ಲಿ ತಲುಪಿದ ಒಡಂಬಡಿಕೆ ಪತ್ರವನ್ನು ಉಲ್ಲಂಘಿಸಿದ್ದಕ್ಕಾಗಿ ವಾಷಿಂಗ್ಟನ್ ತಿದ್ದುಪಡಿ ಮಾಡುವ ಅಗತ್ಯವನ್ನು ಇರಾನ್ ಹೇಳಿದ್ದು ಸೇರಿದಂತೆ ಹೆಚ್ಚುವರಿ ಷರತ್ತುಗಳನ್ನು ಅವಲಂಬಿಸಿ ಜಲಸಂಧಿಯನ್ನು ಪುನಃ ತೆರೆಯಲಾಗಿದೆ ಎಂದು ಅವರು ಎಚ್ಚರಿಸಿದರು. ಒಮಾನ್ನ ವಿದೇಶಾಂಗ ಸಚಿವಾಲಯವು ಮಾತುಕತೆಗಳನ್ನು "ಸಕಾರಾತ್ಮಕ ಮತ್ತು ರಚನಾತ್ಮಕ" ಎಂದು ಬಣ್ಣಿಸಿದೆ. ವಾಷಿಂಗ್ಟನ್ ಮತ್ತು ಟೆಹ್ರಾನ್‌ನಿಂದ ಸಂಘರ್ಷದ ಸಂಕೇತಗಳ ಹಿನ್ನೆಲೆಯಲ್ಲಿ ಮಾತುಕತೆಗಳು ನಡೆದಿವೆ. ಜಲಮಾರ್ಗವನ್ನು ಮುಚ್ಚುವ ಯಾವುದೇ ಯೋಜನೆ ಇಲ್ಲ ಎಂದು ಇರಾನಿನ ಅಧಿಕಾರಿಗಳು ಅಮೆರಿಕಕ್ಕೆ ತಿಳಿಸಿದ್ದಾರೆ ಎಂದು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಶನಿವಾರ ಹೇಳಿದ್ದಾರೆ. ಇರಾನ್ನ ರಾಜ್ಯ ಪ್ರಸಾರಕ ಐಆರ್ಐಬಿ ಶುಕ್ರವಾರ ಶಾಸಕರು ಒಮಾನ್ ಜೊತೆ ಪ್ರಸ್ತಾವಿತ ಚೌಕಟ್ಟಿನ ಬಗ್ಗೆ ಹೆಚ್ಚಾಗಿ ಒಪ್ಪಿಕೊಂಡಿದ್ದಾರೆ ಆದರೆ ಅಂತಿಮ ಅನುಮೋದನೆಗಾಗಿ ಕಾಯುತ್ತಿದ್ದಾರೆ ಎಂದು ವರದಿ ಮಾಡಿದೆ. ವಿಶ್ವದ ತೈಲ ಸರಬರಾಜಿನ ಗಣನೀಯ ಪಾಲು ಹಾದುಹೋಗುವ ಹಾರ್ಮುಜ್ ಜಲಸಂಧಿಯು ಮುಖಾಮುಖಿಯಲ್ಲಿ ಹತೋಟಿಯ ಕೇಂದ್ರ ಬಿಂದುವಾಗಿದೆ. ಜಲಮಾರ್ಗಕ್ಕೆ ಯಾವುದೇ ದೀರ್ಘಕಾಲದ ಅಡಚಣೆಯು ಪ್ರದೇಶವನ್ನು ಮೀರಿ, ವಿಶೇಷವಾಗಿ ಜಾಗತಿಕ ಇಂಧನ ಮಾರುಕಟ್ಟೆಗಳಿಗೆ ಪರಿಣಾಮಗಳನ್ನು ಬೀರಬಹುದು. ಇರಾನ್ನ ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯು ಮಿಲಿಟರಿ ಮತ್ತು ರಾಜತಾಂತ್ರಿಕ ಮಾತುಕತೆಗಳಲ್ಲಿ ತನ್ನ ಸ್ಥಾನವನ್ನು ಕಾಯ್ದುಕೊಳ್ಳುತ್ತದೆ ಎಂದು ಜೊಲ್ಘಾದರ್ ಹೇಳಿದರು.

# ಇರಾನ್ ವಿರುದ್ಧ ಆರ್ಥಿಕ ಒತ್ತಡ ಅಭಿಯಾನ ತೀವ್ರಗೊಳಿಸಿದ ಅಮೆರಿಕ ಇಸ್ಲಾಮಿಕ್ ಗಣರಾಜ್ಯದ ಬ್ಯಾಂಕಿಂಗ್ ಜಾಲದ ಮೇಲೆ ನಿರ್ಬಂಧ

**ವಾಷಿಂಗ್ಟನ್/ಟೆಹ್ರಾನ್, ಆ.9:** ಇರಾನ್ ವಿರುದ್ಧದ ತನ್ನ ಆರ್ಥಿಕ ಒತ್ತಡ ಅಭಿಯಾನದ ಪೂರ್ವಭಾವಿಯಾಗಿ, ದೇಶದ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ನೂರಾರು ದಶಲಕ್ಷ ಡಾಲರ್‌ಗಳನ್ನು ಅಕ್ರಮವಾಗಿ ವರ್ಗಾಯಿಸಿದ ಆರೋಪ ಹೊತ್ತಿರುವ ಕಂಪನಿಗಳ ಅಂತರರಾಷ್ಟ್ರೀಯ ಜಾಲವನ್ನು ಗುರಿಯಾಗಿಸಿಕೊಂಡು ಅಮೆರಿಕ ಹೊಸ ಸುತ್ತಿನ ನಿರ್ಬಂಧಗಳನ್ನು ವಿಧಿಸಿದೆ. ರಾಜತಾಂತ್ರಿಕರು ಹಾರ್ಮುಜ್ ಜಲಸಂಧಿಯ ಮೇಲೆ ಒಪ್ಪಂದವನ್ನು ಪಡೆಯಲು ಕೆಲಸ ಮಾಡುತ್ತಿರುವಾಗ, ಖಜಾನೆ ಇಲಾಖೆಯು ಶುಕ್ರವಾರ ಘೋಷಿಸಿದ ಈ ಕ್ರಮಗಳು, ಇರಾನ್, ಯುಎಇ ಮತ್ತು ಇತರ ದೇಶಗಳಲ್ಲಿನ ಘಟಕಗಳನ್ನು ಗುರಿಯಾಗಿಸಿಕೊಂಡು ಆಡಳಿತವು ವಿಧಿಸಿರುವ ಇರಾನ್ಗೆ ಸಂಬಂಧಿಸಿದ ನಿರ್ಬಂಧಗಳ ಎಂಟನೇ ಸುತ್ತನ್ನು ಗುರುತಿಸುತ್ತದೆ, ಇದು ಟೆಹ್ರಾನ್ ತೈಲ ಆದಾಯವನ್ನು ಪಡೆಯಲು ಮತ್ತು ಯುಎಸ್ ನಿರ್ಬಂಧಗಳನ್ನು ತಪ್ಪಿಸಲು ಸಹಾಯ ಮಾಡಿದೆ ಎಂದು ವಾಷಿಂಗ್ಟನ್ ಆರೋಪಿಸಿದೆ. "ಆಡಳಿತವನ್ನು ತೇಲುವಂತೆ ಮಾಡುವ ಪ್ರತಿಯೊಬ್ಬ ಸಹಾಯಕನು ತನ್ನದೇ ಆದ ಬೆನ್ನಿನ ಮೇಲೆ ಗುರಿಯನ್ನು ಹಾಕಿಕೊಳ್ಳುತ್ತಿದ್ದಾನೆ" ಎಂದು ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದರು. "ಖಜಾನೆ ಈ ಜಾಲಗಳನ್ನು ಬಹಿರಂಗಪಡಿಸುವುದನ್ನು ಮುಂದುವರಿಸುತ್ತದೆ ಮತ್ತು ಅವುಗಳನ್ನು ಯುಎಸ್ ಹಣಕಾಸು




ವ್ಯವಸ್ಥೆಯಿಂದ ಕಡಿತಗೊಳಿಸುತ್ತದೆ." ಖಜಾನೆ ಇರಾನ್ನ ಶಹರ್ ಬ್ಯಾಂಕ್ ಮತ್ತು ದುಬೈ ಮೂಲದ ಎರಡು ವಿನಿಮಯ ಕೇಂದ್ರಗಳಾದ ಟೈಟಾನ್ ಎಕ್ಸ್‌ಚೇಂಜ್ ಮತ್ತು ಆಲ್ಪ್ಸ್ ಇಂಟರ್‌ನ್ಯಾಷನಲ್ ಗೊತ್ತುಪಡಿಸಿದೆ. ಶಾಹರ್ ಬ್ಯಾಂಕ್, ನ್ಯಾಷನಲ್ ಇರಾನಿಯನ್ ಆಯಿಲ್ ಕಂಪನಿ ಮತ್ತು ನಾಫ್ತಿರಾನ್ ಇಂಟರ್ಟ್ರೇಡ್ ಕಂ ಸೇರಿದಂತೆ ಪ್ರಮುಖ ಇರಾನಿನ ರಫ್ತುದಾರರಿಗೆ ತೈಲ ಆದಾಯವನ್ನು ಮರುಪಡೆಯಲು ಈ ಸಂಸ್ಥೆಗಳು ಸಹಾಯ ಮಾಡಿವೆ ಎಂದು ಇಲಾಖೆ ತಿಳಿಸಿದೆ. ಟೈಟಾನ್ ಎಕ್ಸ್‌ಚೇಂಜ್ ಶಾಹರ್ ಬ್ಯಾಂಕ್ ಪರವಾಗಿ ಹತ್ತು ದಶಲಕ್ಷ ಡಾಲರ್ ಹೊಂದಿತ್ತು ಮತ್ತು ಮತ್ತೊಂದು ಸಾಗಣೆ ಮತ್ತು ನಿರ್ಬಂಧ–ತಪ್ಪಿಸಿಕೊಳ್ಳುವ ಜಾಲವನ್ನು ಬೆಂಬಲಿಸಿದ್ದಕ್ಕಾಗಿ ಖಜಾನೆಯಿಂದ ಈ ಹಿಂದೆ ಶಿಕ್ಷೆಗೊಳಗಾದ ಹಣಕಾಸುದಾರರೊಂದಿಗೆ ಸಂಪರ್ಕ ಹೊಂದಿದೆ ಎಂದು ಆರೋಪಿಸಲಾಗಿದೆ. ರಷ್ಯಾದ VTB ಬ್ಯಾಂಕ್‌ನೊಂದಿಗೆ ಕರೆನ್ಸಿ ಪರಿವರ್ತನೆಗಳನ್ನು ಸಂಯೋಜಿಸಿದ ಶಹರ್ ಬ್ಯಾಂಕ್ ಉದ್ಯೋಗಿ ಸಯೀದ್ ಘಾಸೆಂಪೌರ್ ಮತ್ತು ನೆಟ್ವರ್ಕ್ಗೆ ಸಂಬಂಧಿಸಿದ ಇನ್ವಾಯ್ಸ್‌ಗಳು ಮತ್ತು ಪಾವತಿಗಳನ್ನು ನಿರ್ವಹಿಸುತ್ತಿದ್ದ ಇರಾನ್ ಮೂಲದ ಫರಾಬ್ ಸೊರೌಶ್ ಅಫಾಗ್ ಕೆಶ್ಮ್ ಅವರ ಉದ್ಯೋಗಿಗಳು ಸೇರಿದಂತೆ ಹಲವಾರು ಇರಾನಿನ ಪ್ರಜೆಗಳ ಮೇಲೂ ನಿರ್ಬಂಧ ಹೇರಲಾಗಿದೆ. ಮಧ್ಯವರ್ತಿ ಖಾತೆಗಳ ಮೂಲಕ ಪಾವತಿಗಳನ್ನು ನಡೆಸಲು ಬಳಸಲಾಗುತ್ತಿತ್ತು ಎಂದು ಹೇಳಲಾದ ಹಾಂಗ್ ಕಾಂಗ್, ಸಿಂಗಾಪುರ ಮತ್ತು ದುಬೈನಲ್ಲಿರುವ ಬೇನಾಮಿ ಕಂಪನಿಗಳನ್ನು ಖಜಾನೆ ಸಹ ಗೊತ್ತುಪಡಿಸಿದೆ. ಪ್ರತ್ಯೇಕವಾಗಿ, ಖಜಾನೆಯ ವಿದೇಶಿ ಆಸ್ತಿ ನಿಯಂತ್ರಣ ಕಚೇರಿಯು ಮಾಜಿ ಫ್ಲೈ ಬಾಗ್ದಾದ್ ಮುಖ್ಯ ಕಾರ್ಯನಿರ್ವಾಹಕ ಬಶೀರ್ ಅಬ್ದುಲ್‌ಖದೀಮ್ ಅಲ್ವಾನ್ ಅಲ್–ಶಬ್ಬಾನಿ ಅವರನ್ನು ಮಂಜೂರು ಮಾಡಿತು, ಅವರು IRGC ಯ ಪರ್ಯಾಯ ಅಂಗವಾದ ಕುರ್ದು ಹೋರಾಟಗಾರರು, ಶಸ್ತ್ರಾಸ್ತ್ರಗಳು ಮತ್ತು ಹಣವನ್ನು ಪ್ರಾದೇಶಿಕ ಮಿಲಿಟಿಯಾ ಗುಂಪುಗಳಿಗೆ ಸಾಗಿಸಲು ಸಹಾಯ ಮಾಡಿದ್ದಾರೆ ಎಂದು ಆರೋಪಿಸಿದರು. ಆದಾಗ್ಯೂ, ಈ ವಾರದ ಆರಂಭದಲ್ಲಿ, ಔಈಂಅ ಫ್ಲೈ ಬಾಗ್ದಾದ್ ಅನ್ನು ತನ್ನ ನಿರ್ಬಂಧಗಳ ಪಟ್ಟಿಯಿಂದ ತೆಗೆದುಹಾಕಿತು. "ಇರಾನ್ನ ಆಡಳಿತ ಗಣ್ಯರನ್ನು ಉಳಿಸಿಕೊಳ್ಳುವ ಆರ್ಥಿಕ ಜೀವನಾಡಿಗಳನ್ನು ಕಡಿತಗೊಳಿಸುವ" ಉದ್ದೇಶವನ್ನು ಈ ಕ್ರಮಗಳು ಹೊಂದಿವೆ ಎಂದು ವಿದೇಶಾಂಗ ಇಲಾಖೆಯ ವಕ್ತಾರ ಟಾಮಿ ಪಿಗೋಟ್ ಹೇಳಿದ್ದಾರೆ. "ಈ ಜಾಲಗಳ ಮೂಲಕ, ಟೆಹ್ರಾನ್ ತೈಲ ಆದಾಯವನ್ನು ಪಡೆದುಕೊಂಡಿತು ಮತ್ತು ಅದರ ಅಸ್ಥಿರಗೊಳಿಸುವ ಚಟುವಟಿಕೆಗಳನ್ನು ತಡೆಯಲು, ಮುಂಚೂಣಿ ಕಂಪನಿಗಳನ್ನು ಬಳಸಿಕೊಂಡು ಹಣವನ್ನು ಅಕ್ರಮವಾಗಿ ವರ್ಗಾಯಿಸಲು ವಿನ್ಯಾಸಗೊಳಿಸಲಾದ ನಿರ್ಬಂಧಗಳನ್ನು ತಪ್ಪಿಸಿತು" ಎಂದು ಪಿಗೋಟ್ ಹೇಳಿದರು.

# ಅಮೆರಿಕ ಬೆಂಬಲಿತ ಗಾಜಾ ಸಂಬಂಧಿಸಿದ 15 ಅಂಶಗಳ ಯೋಜನೆ ತಿರಸ್ಕರಿಸಿದ ನೆತನ್ಯಾಹು

**ಟೆಲ್ ಅವಿವ್, ಆ.9:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಶಾಂತಿ ಮಂಡಳಿಯು ಅನುಮೋದಿಸಿದ ಗಾಜಾಗೆ ಸಂಬಂಧಿಸಿದ 15 ಅಂಶಗಳ ಯೋಜನೆಯನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಭಾನುವಾರ ತಿರಸ್ಕರಿಸಿದ್ದಾರೆ, ಹಮಾಸ್ ಸಂಪೂರ್ಣವಾಗಿ ನಿಶ್ಯಸ್ತ್ರಗೊಳಿಸುವವರೆಗೆ ಇಸ್ರೇಲ್ ಪಡೆಗಳು ಪ್ಯಾಲೆಸ್ಟೀನಿಯನ್ ಪ್ರದೇಶದಿಂದ ಹಿಂದೆ ಸರಿಯುವುದಿಲ್ಲ ಎಂದು ಒತ್ತಾಯಿಸಿದ್ದಾರೆ.

"ಗಾಜಾಗೆ ಸಂಬಂಧಿಸಿದ ಶಾಂತಿ ಮಂಡಳಿಯು ಪ್ರಕಟಿಸಿದ 15 ಅಂಶಗಳ ದಾಖಲೆಯನ್ನು ಇಸ್ರೇಲ್ ತಿರಸ್ಕರಿಸಿದೆ" ಎಂದು ಇಸ್ರೇಲ್ ದಿನಪತ್ರಿಕೆ ಯೆಡಿಯೊತ್ ಅಹ್ರೋನೋತ್ ಪ್ರಕಾರ, ಸಂಪುಟ ಸಭೆಯ ಆರಂಭದಲ್ಲಿ ವೀಡಿಯೊ ಹೇಳಿಕೆಯಲ್ಲಿ ನೆತನ್ಯಾಹು ಹೇಳಿದ್ದಾರೆ.

"ಹಮಾಸ್ ಅನ್ನು ನಿಶ್ಯಸ್ತ್ರಗೊಳಿಸುವವರೆಗೆ ಇಸ್ರೇಲಿ ಸೈನ್ಯವು ಯಾವುದೇ ವಾಪಸಾತಿಯನ್ನು ನಡೆಸುವುದಿಲ್ಲ" ಎಂದು ಅವರು ಹೇಳಿದರು. ನಿಶ್ಯಸ್ತ್ರೀಕರಣವು "ಭಾರೀ ಶಸ್ತ್ರಾಸ್ತ್ರಗಳು, ಕಡಿಮೆ ಭಾರ ಶಸ್ತ್ರಾಸ್ತ್ರಗಳು" ಒಳಗೊಂಡಿರಬೇಕು ಎಂದು ನೆತನ್ಯಾಹು ಹೇಳಿದರು, ಇಸ್ರೇಲ್ "ನಕಲಿ ನಿಶ್ಯಸ್ತ್ರೀಕರಣವಲ್ಲ, ನಿಜವಾದ ನಿಶ್ಯಸ್ತ್ರೀಕರಣ"ವನ್ನು ಬಯಸುತ್ತದೆ ಎಂದು ಒತ್ತಿ ಹೇಳಿದರು.

ಈ ವಿಷಯದ ಬಗ್ಗೆ ಇಸ್ರೇಲ್ ಅಮೆರಿಕದೊಂದಿಗೆ ಚರ್ಚೆಗಳನ್ನು ಮುಂದುವರಿಸುತ್ತಿದೆ ಮತ್ತು ವಾಷಿಂಗ್ಟನ್ ಹಲವಾರು ಪ್ರಸ್ತಾಪಗಳನ್ನು ಮುಂದಿಟ್ಟಿದೆ ಎಂದು ಅವರು ಹೇಳಿದರು.

"ಅವುಗಳಲ್ಲಿ ಕೆಲವು ನಮಗೆ ಸ್ವೀಕಾರಾರ್ಹವಾಗಿವೆ ಮತ್ತು ಕೆಲವು ನಮಗೆ ಸ್ವೀಕಾರಾರ್ಹವಲ್ಲ" ಎಂದು ನೆತನ್ಯಾಹು ಹೇಳಿದರು. ಜುಲೈ 31 ರಂದು ಟ್ರಂಪ್ ಅವರ ಶಾಂತಿ ಮಂಡಳಿಯು ಅಮೆರಿಕ ಅಧ್ಯಕ್ಷರ ಗಾಜಾ ಯೋಜನೆಯ ಮುಂದಿನ ಹಂತವನ್ನು ಕಾರ್ಯಗತಗೊಳಿಸಲು ತತ್ವಗಳು ಮತ್ತು



ಕಾರ್ಯವಿಧಾನಗಳನ್ನು ವಿವರಿಸುವ ಕರಡು ಒಪ್ಪಂದವನ್ನು ಬಿಡುಗಡೆ ಮಾಡಿದ ನಂತರ ಈ ತಿರಸ್ಕಾರ ಬಂದಿತು. ಈ ಕರಡು ಗಾಜಾ ಪಟ್ಟಿಗೆ ಪ್ರಸ್ತಾವಿತ ಭದ್ರತೆ, ಆಡಳಿತಾತ್ಮಕ ಮತ್ತು ಪರಿವರ್ತನಾ ವ್ಯವಸ್ಥೆಗಳನ್ನು ಮತ್ತು ಪ್ರದೇಶದ ಭವಿಷ್ಯಕ್ಕಾಗಿ ರಾಜಕೀಯ ಮಾರ್ಗವನ್ನು ವಿವರಿಸುತ್ತದೆ. ನೆತನ್ಯಾಹು ಅವರ ಹೇಳಿಕೆಗಳು ಪ್ರಸ್ತಾವಿತ ಯುದ್ಧಾನಂತರದ ಚೌಕಟ್ಟಿಗೆ ಪ್ರಮುಖ ಅಡಚಣೆಯನ್ನು ಒತ್ತಿಹೇಳುತ್ತವೆ, ಇಸ್ರೇಲ್ ಹಮಾಸ್ನ ಸಂಪೂರ್ಣ ನಿಶ್ಯಸ್ತ್ರೀಕರಣವು ಇಸ್ರೇಲಿ ಪಡೆಗಳ ಯಾವುದೇ ಹಿಂತೆಗೆದುಕೊಳ್ಳುವಿಕೆಗೆ ಮುಂಚಿತವಾಗಿರಬೇಕು ಎಂದು ಇಸ್ರೇಲ್ ಒತ್ತಾಯಿಸುತ್ತದೆ. ಏತನ್ಮಧ್ಯೆ, ಒಪ್ಪಂದದ ಉಲ್ಲಂಘನೆಗಳು ನಡೆಯುತ್ತಿರುವುದಾಗಿ ಇರಾನ್ ವಿವರಿಸಿರುವವರೆಗೆ ಅದು ಅಮೆರಿಕದೊಂದಿಗೆ ಮಾತುಕತೆ ನಡೆಸುವುದಿಲ್ಲ ಎಂದು ಹೇಳಿದೆ. ಹಮಾಸ್‌ನ ಭವಿಷ್ಯ, ಇಸ್ರೇಲಿ ಮಿಲಿಟರಿ ವಾಪಸಾತಿ ಮತ್ತು ಯಾವುದೇ ಯುದ್ಧಾನಂತರದ ಇತ್ಯರ್ಥದಲ್ಲಿ ಪ್ರಾದೇಶಿಕ ಶಕ್ತಿಗಳ ಪಾತ್ರದ ಬಗ್ಗೆ ಪ್ರಮುಖ ಭಿನ್ನಾಭಿಪ್ರಾಯಗಳು ಮುಂದುವರಿದಿರುವಾಗ ಗಾಜಾದ ಆಡಳಿತ ಮತ್ತು ಭದ್ರತೆಗಾಗಿ ಚೌಕಟ್ಟನ್ನು ರೂಪಿಸುವ ಪ್ರಯತ್ನಗಳು ಮುಂದುವರಿದಂತೆ ಈ ಬೆಳವಣಿಗೆಗಳು ಬಂದಿವೆ.

# ಫಿಲಿಪ್ಪೀನ್ಸ್‌ನಲ್ಲಿ ಚಂಡಮಾರುತ, ಮುಂಗಾರು ಮಳೆಯಿಂದ 6 ಸಾವು

**ಮನಿಲಾ, ಆಗಸ್ಟ್ 9:** ಹೆಚ್ಚಿದ ನೈಋತ್ಯ ಮಾನ್ಸೂನ್ ಮತ್ತು ಉಷ್ಣವಲಯದ ಚಂಡಮಾರುತಗಳಾದ ಲೂಯಿಸ್ ಮತ್ತು ಮೇಮೇಗೆ ಸಂಬಂಧಿಸಿದ ಭಾರೀ ಮಳೆಯಿಂದಾಗಿ ಫಿಲಿಪ್ಪೀನ್ಸ್ ಎಂಟು ಪ್ರದೇಶಗಳಲ್ಲಿ ಕನಿಷ್ಠ 3,82,000 ಜನರು ಅಥವಾ ಸುಮಾರು 110,000 ಕುಟುಂಬಗಳು ಬಾಧಿತರಾಗಿದ್ದಾರೆ ಎಂದು ರಾಷ್ಟ್ರೀಯ ವಿಪತ್ತು ಅಪಾಯ ಕಡಿತ ಮತ್ತು ನಿರ್ವಹಣಾ ಮಂಡಳಿ ಭಾನುವಾರ ತಿಳಿಸಿದೆ. ತನ್ನ ಇತ್ತೀಚಿನ ಪರಿಸ್ಥಿತಿ ವರದಿಯಲ್ಲಿ, ಆರು ಜನರು ಸಾವನ್ನಪ್ಪಿದ್ದಾರೆ ಮತ್ತು ಏಳು ಜನರು ಗಾಯಗೊಂಡಿದ್ದಾರೆ ಎಂದು ಕೌನ್ಸಿಲ್ ಹೇಳಿದೆ, ಆದರೂ ಅಂಕಿಅಂಶಗಳು ಇನ್ನೂ ದೃಢೀಕರಣಕ್ಕೆ ಒಳಪಟ್ಟಿವೆ.

ಇಲೋಕೋಸ್, ಕಗಾಯನ್, ಸೆಂಟ್ರಲ್ ಲುಜಾನ್, ಬಿಕೋಲ್, ಜಾಂಬೊಂಗಾ ಪೆನಿನ್ಸುಲಾ, ಕಾರ್ಡಿಲ್ಲೆರಾ ಆಡಳಿತ ಪ್ರದೇಶ, ಮಿಮರೊಪಾ ಮತ್ತು ಕ್ಯಾಲಬಾರ್ಜಾನ್ ಪೀಡಿತ ಪ್ರದೇಶಗಳಲ್ಲಿ ಸೇರಿವೆ. ಬೆಂಗ್ವೆಟ್ನ ಲಾ ಟ್ರಿನಿಡಾಡ್ನಲ್ಲಿ ಭೂಕುಸಿತದಲ್ಲಿ ಇಬ್ಬರು ಸಾವನ್ನಪ್ಪಿದರೆ, ರಿಜಾಲ್‌ನ ರೊಡ್ರಿಗಸ್‌ನ್‌ನಲ್ಲಿ ಬಂಡೆಕುಸಿತದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಉಳಿದ ಇಬ್ಬರು ಲಾ ಯೂನಿಯನ್‌ನ ಲೂನಾದಲ್ಲಿ ಮುಳುಗುವಿಕೆ ಮತ್ತು ವಿದ್ಯುತ್



ಆಘಾತಕ್ಕೆ ಸಂಬಂಧಿಸಿದ ಪ್ರತ್ಯೇಕ ಘಟನೆಗಳಲ್ಲಿ ವರದಿಯಾಗಿದೆ ಎಂದು ಎನ್‌ಡಿಆರ್‌ಆರ್‌ಎಂಸಿ ತಿಳಿಸಿದೆ. ಏಳು ಮಂದಿ ಗಾಯಗೊಂಡವರು ಬೆಂಗುಯೆಟ್ನಲ್ಲಿ ವರದಿಯಾಗಿದ್ದು, ಇದರಲ್ಲಿ ಐದು ಮಂದಿ ಬಾಗುಯೊ ನಗರದಲ್ಲಿ, ಒಂದು ಲಾ ಟ್ರಿನಿಡಾಡ್‌ನಲ್ಲಿ ಭೂಕುಸಿತದ ನಂತರ ಮತ್ತು ಇನ್ನೊಂದು ವಾಹನ ಅಪಘಾತದಲ್ಲಿ ಕಪಂಗನ್‌ನಲ್ಲಿ ಗಾಯಗೊಂಡಿದ್ದಾರೆ. ಅಧಿಕಾರಿಗಳು 86 ಸ್ಥಳಾಂತರಿಸುವ ಕೇಂದ್ರಗಳನ್ನು ಸಕ್ರಿಯಗೊಳಿಸಿದ್ದಾರೆ, ಇವು ಸುಮಾರು 2,200 ಕುಟುಂಬಗಳು ಅಥವಾ 7,300 ಜನರಿಗೆ ಆಶ್ರಯ ನೀಡುತ್ತಿವೆ. ಸುಮಾರು 3,700 ಜನರನ್ನು ಒಳಗೊಂಡ ಇನ್ನೂ 1,132 ಕುಟುಂಬಗಳು ಸ್ಥಳಾಂತರಿಸುವ ಕೇಂದ್ರಗಳ ಹೊರಗೆ ಉಳಿದಿವೆ. ಹವಾಮಾನ ವೈಪರೀತ್ಯದಿಂದಾಗಿ 138 ಭಾಗಶಃ ಮತ್ತು 10 ಸಂಪೂರ್ಣವಾಗಿ ಸೇರಿದಂತೆ 148 ಮನೆಗಳು ಹಾನಿಗೊಳಗಾಗಿವೆ ಎಂದು ಕೌನ್ಸಿಲ್ ತಿಳಿಸಿದೆ. ಮೂಲಸೌಕರ್ಯ ಹಾನಿ 105.5 ಮಿಲಿಯನ್ ಫಿಲಿಪ್ಪೀನ್ಸ್ ಪೆಸೊಗಳು ಎಂದು ಅಂದಾಜಿಸಲಾಗಿದೆ, ಆದರೆ ಕೃಷಿ ನಷ್ಟ ಸುಮಾರು 3.53 ದಶಲಕ್ಷ ಪೆಸೊಗಳನ್ನು ತಲುಪಿದೆ. ಸರ್ಕಾರಿ ಸಂಸ್ಥೆಗಳು, ಸ್ಥಳೀಯ ಅಧಿಕಾರಿಗಳು ಮತ್ತು ಇತರ ಪಾಲುದಾರ ಸಂಸ್ಥೆಗಳು ಇಲ್ಲಿಯವರೆಗೆ ಪೀಡಿತ ಕುಟುಂಬಗಳಿಗೆ 13.21 ಮಿಲಿಯನ್ ಪೆಸೊಗಳ ಸಹಾಯವನ್ನು ಒದಗಿಸಿವೆ ಎಂದು NDRRMC ತಿಳಿಸಿದೆ.

ಫಿಲಿಪ್ಪೀನ್ಸ್ ಬಂದರು ಪ್ರಾಧಿಕಾರ , ಪನಾಯ್ ದ್ವೀಪದಲ್ಲಿರುವ ಮಿಮರೋಪಾ ಮತ್ತು ಬಿಕೋಲ್ ಪ್ರದೇಶಗಳು ಮತ್ತು ಬೋಹೋಲ್, ಗುಯಿಮರಸ್, ಓರಿಯಂಟಲ್ ಮಿಂಡೋರೋ, ಆಕ್ಸಿಡೆಂಟಲ್ ಮಿಂಡೋರೋ ಮತ್ತು ಇತರ ಪ್ರದೇಶಗಳ ಪ್ರಾಂತ್ಯಗಳನ್ನು ಒಳಗೊಂಡ ರದ್ದಾದ ಪ್ರವಾಸಗಳನ್ನು ಪಟ್ಟಿ ಮಾಡಿದೆ. PPA ಪ್ರಕಾರ, ಅದು ಸ್ವತಃ ಹಡಗಿನ ಪ್ರಯಾಣಗಳನ್ನು ರದ್ದುಗೊಳಿಸುವುದಿಲ್ಲ, ಆದರೆ ಫಿಲಿಪ್ಪೀನ್ಸ್ ಕೋಸ್ಟ್ ಗಾರ್ಡ್ "ನೌಕಾಯಾನವಿಲ್ಲ" ನೀತಿಯನ್ನು ಹೊರಡಿಸಿದಾಗ ಪ್ರವಾಸಗಳು ಸ್ವಯಂಚಾಲಿತವಾಗಿ ರದ್ದಾಗುತ್ತವೆ, ಇದು ಅಸುರಕ್ಷಿತ ಸಮುದ್ರ ಪರಿಸ್ಥಿತಿಗಳಿಂದಾಗಿ ಹಡಗುಗಳು ಬಂದರಿನಿಂದ ಹೊರಹೋಗುವುದನ್ನು ನಿಷೇಧಿಸುತ್ತದೆ. ಸಾಗಣೆ ಕಂಪನಿಗಳು ಕಡಲ ಕೈಗಾರಿಕಾ ಪ್ರಾಧಿಕಾರ (ಮರೀನಾ) ನೀಡಿದ ತಮ್ಮ ಸಾರ್ವಜನಿಕ ಅನುಕೂಲತೆಯ ಪ್ರಮಾಣಪತ್ರದ ನಿಯಮಗಳಿಗೆ ಅನುಸಾರವಾಗಿ ಪ್ರವಾಸಗಳನ್ನು ರದ್ದುಗೊಳಿಸಬಹುದು.

# ಯೆಮೆನ್‌ನ ಮೋಖಾ ಬಂದರಿನ ಮೇಲೆ ಹೌತಿ ಬಂಡುಕೋರರಿಂದ ಕ್ಷಿಪಣಿಗಳ ದಾಳಿ

**ಸನಾ, ಆಗಸ್ಟ್ 9:** ಯೆಮೆನ್ನ ಹೌತಿ ಬಂಡುಕೋರರು ಭಾನುವಾರ ಕೆಂಪು ಸಮುದ್ರದ ಬಂದರು ನಗರವಾದ ಮೋಖಾವನ್ನು ಬ್ಯಾಲಿಸ್ಟಿಕ್ ಕ್ಷಿಪಣಿಗಳೊಂದಿಗೆ ಗುರಿಯಾಗಿಸಿಕೊಂಡಿದ್ದಾರೆ ಎಂದು ಯೆಮೆನ್ನ ಸರ್ಕಾರಿ ಸ್ವಾಮ್ಯದ ಸಬಾ ಸುದ್ದಿ ಸಂಸ್ಥೆ ತಿಳಿಸಿದೆ. ದೇಶದ ಹಲವಾರು ರಂಗಗಳಲ್ಲಿ ಹೋರಾಟ ತೀವ್ರಗೊಂಡಿದೆ. ಪಶ್ಚಿಮ ತೈಜ್ ಪ್ರಾಂತ್ಯದ ಮೋಖಾದಲ್ಲಿನ ವಸತಿ ಪ್ರದೇಶಗಳನ್ನು ಹಲವಾರು ಕ್ಷಿಪಣಿಗಳು ಹೊಡೆದಿವೆ ಎಂದು ಸಬಾ ವರದಿ ಮಾಡಿದೆ. ಯೆಮೆನ್ನ ಹೌತಿ ಸಶಸ್ತ್ರ ಗುಂಪಿನ ಹೇಳಿಕೆಯು, ಕೆಂಪು ಸಮುದ್ರದ ಬಂದರಿನ ಮೇಲೆ "ಹೆಚ್ಚಿನ ಸಂಖ್ಯೆಯ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್ಗಳೊಂದಿಗೆ" ನಡೆಸಲಾದ ಇತ್ತೀಚಿನ ದಾಳಿಯು "ನಿಖರವಾಗಿದೆ" ಎಂದು ಹೇಳುತ್ತದೆ. ಗುಂಪಿನ ಮಿಲಿಟರಿ ವಕ್ತಾರರ ಪ್ರಕಾರ, ಇದು ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳ "ವ್ಯಾಪಕ ನಾಶಕ್ಕೆ" ಮತ್ತು "ಸೌದಿಗಳು ಸೇರಿದಂತೆ



ಡಜನ್ಗಟ್ಟಲೆ ಜನರ ಸಾವು ಮತ್ತು ಗಾಯಗಳಿಗೆ" ಕಾರಣವಾಯಿತು. ಹೇಳಿಕೆಯು ಹೀಗೆ ಹೇಳಿದೆ: "ಸೌದಿ ಶತ್ರು ನಮ್ಮ ಜನರನ್ನು ಗುರಿಯಾಗಿಸಿಕೊಂಡು ನಮ್ಮ ಮಕ್ಕಳನ್ನು ಸಾವಿನ ನರಕಕ್ಕೆ ಎಸೆಯುವ ಗುರಿಯನ್ನು ಸಾಧಿಸಲು ನಾವು ಅನುಮತಿಸುವುದಿಲ್ಲ, ಇದರಿಂದ ರಾಷ್ಟ್ರದ ಶತ್ರುಗಳ ಲಾಭಕ್ಕಾಗಿ ತನ್ನ ಪಿತೂರಿ ಕಾರ್ಯಸೂಚಿಯನ್ನು ಪೂರೈಸಬಹುದು." ಹೌತಿಗಳು ಮತ್ತು ಯೆಮೆನ್ನ ಅಂತರರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಸರ್ಕಾರದೊಂದಿಗೆ ಹೊಂದಿಕೊಂಡ ಪಡೆಗಳ ನಡುವಿನ ಹೊಸ ಹೋರಾಟದ ನಂತರ ಈ ಉಲ್ಬಣವು ಉಂಟಾಗಿದೆ, ಇದು 2022 ರ ಯುದ್ಧವಿರಾಮವು ಯುದ್ಧವನ್ನು ತೀವ್ರವಾಗಿ ಕಡಿಮೆ ಮಾಡಿದ ನಂತರ ಚಾಲ್ತಿಯಲ್ಲಿದ್ದ ಸಾಪೇಕ್ಷ ಶಾಂತತೆಯ ಅವಧಿಗೆ ಬೆದರಿಕೆ ಹಾಕುತ್ತದೆ. ಯುದ್ಧವಿರಾಮದ ಹೊರತಾಗಿಯೂ ಸಂಘರ್ಷವು ನಿಯತಕಾಲಿಕವಾಗಿ ಭುಗಿಲೆದ್ದಿದೆ, ಕಳೆದ ತಿಂಗಳಿನಿಂದ ಹಲವಾರು ರಂಗಗಳಲ್ಲಿ ನಡೆದ ಹೋರಾಟದಲ್ಲಿ ಡಜನ್ಗಟ್ಟಲೆ ಜನರು ಸಾವನ್ನಪ್ಪಿದ್ದಾರೆ ಅಥವಾ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

# ಭಾರತ ತಂಡ ಪ್ರವೇಶಿಸಿದ ತ್ರಿಶತಕ ವೀರ: ಶ್ರೀಲಂಕಾಕ್ಕೆ ಆತಂಕ!

ಶ್ರೀಲಂಕಾ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿ ಪ್ರಾರಂಭಕ್ಕೂ ಮುನ್ನ ಭಾರತ ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ. ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಗಾಯದ ಸಮಸ್ಯೆಯಿಂದಾಗಿ ಸರಣಿಯಿಂದ ಹೊರಬಿದ್ದಿದ್ದಾರೆ. ಇದೀಗ ಅವರ ಸ್ಥಾನಕ್ಕೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಯುವ ಬ್ಯಾಟರ್ ಅನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಎರಡು ಪಂದ್ಯಗಳ ಟೆಸ್ಟ್ ಸರಣಿಗಾಗಿ ಭಾರತ ಕ್ರಿಕೆಟ್ ತಂಡ ಶ್ರೀಲಂಕಾ ಪ್ರವಾಸ ಕೈಗೊಂಡಿದೆ. ಉಭಯ ತಂಡಗಳ ನಡುವಿನ ಮೊದಲ ಟೆಸ್ಟ್ ಆಗಸ್ಟ್ 15 ರಂದು ಗಾಲೆ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದರ ಬೆನ್ನಲ್ಲೇ, ಎರಡನೇ ಟೆಸ್ಟ್ ಆಗಸ್ಟ್ 23 ರಂದು ಕೊಲಂಬೊದ ಸಿಂಹಳಿಸ್ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ನಡೆಯಲಿದೆ. ಶುಭಮನ್ ಗಿಲ್ ನೇತೃತ್ವದ ಭಾರತ ತಂಡವು ಈಗಾಗಲೇ ಸರಣಿಗಾಗಿ ಶ್ರೀಲಂಕಾ ತಲುಪಿದೆ.

ಟೆಸ್ಟ್ ಸರಣಿಗೂ ಮುನ್ನ ಭಾರತ ತಂಡವು ಕೊಲಂಬೊದ ನಾನ್‌ಡಿಸ್ಕ್ರಿಪ್ಟ್ಸ್ ಕ್ರಿಕೆಟ್ ಕ್ಲಬ್ ಮೈದಾನದಲ್ಲಿ ಶ್ರೀಲಂಕಾ XI ವಿರುದ್ಧ 3 ದಿನಗಳ ಅಭ್ಯಾಸ ಪಂದ್ಯವನ್ನು ಆಡಿ ಇದರಲ್ಲಿ 6 ವಿಕೆಟ್?ಗಳಿಂದ ಗೆಲುವು ಸಾಧಿಸಿತು. ಇದೀಗ ಟೆಸ್ಟ್? ಸರಣಿಗಾಗಿ




ಸಿದ್ಧತೆ ನಡೆಸುತ್ತಿದೆ. ಸರಣಿ ಪ್ರಾರಂಭಕ್ಕೂ ಮೊದಲೆ ಭಾರತಕ್ಕೆ ಗಾಯದ ಸಮಸ್ಯೆ ಕಾಡಲಾರಂಭಿಸಿದೆ. ಸಾಯಿ ಸುದರ್ಶನ್ ಕಾಲಿನ ಗಾಯಕ್ಕೆ ತುತ್ತಾಗಿ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಇದಕ್ಕೂ ಮೊದಲು ಜಸ್ಪ್ರೀತ್ ಬುಮ್ರಾ ಕೂಡ ಗಾಯದ ಕಾರಣ ಸರಣಿಯಿಂದ ಹೊರಗುಳಿದಿದ್ದಾರೆ. ಅವರ ಸ್ಥಾನದಲ್ಲಿ ಆಕಿಬ್ ನಬಿ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿತ್ತು. ಇದೀಗ ಸುದರ್ಶನ ಸ್ಥಾನಕ್ಕೆ ತಿಶತಕ ವೀರನನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

**ತ್ರಿಶತಕ ವೀರನಿಗೆ ಚಾನ್ಸ್:** ಆಯ್ಕೆ ಸಮಿತಿಯು ಯುವ ಬ್ಯಾಟರ್? ಸರ್ಫರಾಜ್ ಖಾನ್ ಅವರನ್ನು ಸಾಯಿ ಸುದರ್ಶನ್ ಸ್ಥಾನಕ್ಕೆ ತಂಡದಲ್ಲಿ ಸೇರಿಸಿಕೊಂಡಿದೆ. ಶೀಘ್ರದಲ್ಲೇ ಅವರ ಕೊಲಂಬೊದಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ. ಸರ್ಫರಾಜ್ ಕೊನೆಯ ಬಾರಿಗೆ 2024ರಲ್ಲಿ ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಆಡಿದ್ದರು. ನಂತರ ಕಳಪೆ ಫಾರ್ಮ್‌ನಿಂದಾಗಿ ಅವಕಾಶದ ಬಾಗಿಲುಗಳು ಮುಚ್ಚಿಕೊಂಡಿದ್ದವು. ಆದರೆ ಇತ್ತೀಚಿನ ದೇಶಿಯ ಸ್ಪರ್ಧೆಗಳಲ್ಲಿನ ಅವರ ಪ್ರದರ್ಶನಕ್ಕೆ ಇದೀಗ ಮತ್ತೆ ಅವರಿಗೆ ಅವಕಾಶ ಹುಡುಕಿಕೊಂಡು ಬಂದಿದೆ.

ಮುಂಬೈ ಬ್ಯಾಟ್ಸ್‌ಮನ್ ಇತ್ತೀಚಿನ ವರ್ಷಗಳಲ್ಲಿ ದೇಶೀಯ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಇದುವರೆಗೆ 62 ಪಂದ್ಯಗಳನ್ನು ಆಡಿದ ಅವರು 64.73 ಸರಾಸರಿಯಲ್ಲಿ ರನ್ ಗಳಿಸಿದ್ದಾರೆ. ದೇಶಿಯ ಕ್ರಿಕೆಟ್‌ನಲ್ಲಿ ಅಜೇಯ ತ್ರಿಶತಕ ಸಿಡಿಸಿದ ದಾಖಲೆಯನ್ನು ಹೊಂದಿದ್ದಾರೆ.

### ಸಾಯಿ ಸುದರ್ಶನ್ ಎಲ್ಲಿದ್ದಾರೆ?

ಏತನ್ಮಧ್ಯೆ, ಬಲಗಾಲಿ ರಳಿಗೆ ಆದ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಸಾಯಿ ಸುದರ್ಶನ್ ಪ್ರಸ್ತುತ ಬೆಂಗಳೂರಿನ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) ನಲ್ಲಿದ್ದಾರೆ. ಬಿಸಿಸಿಐ ಪ್ರಕಾರ, ಅವರು ಚೇತರಿಸಿಕೊಳ್ಳುತ್ತಿದ್ದಾರೆ ಮತ್ತು ಫಿಟ್ನೆಸ್ ಮರಳಿ ಪಡೆಯುವಲ್ಲಿ ಅವರು ಗಮನಾರ್ಹ ಪ್ರಗತಿ ಸಾಧಿಸಿದ್ದಾರೆ. ಆದಾಗ್ಯೂ, ವೈದ್ಯಕೀಯ ತಂಡವು ಅವರನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಬಿಸಿಸಿಐ ತಿಳಿಸಿದೆ.

**ಶ್ರೀಲಂಕಾ ಸರಣಿಗೆ ನವೀಕರಿಸಿದ ಭಾರತ ಟೆಸ್ಟ್ ತಂಡ:** ಶುಭಮನ್ ಗಿಲ್ (ನಾಯಕ), ಕೆಎಲ್ ರಾಹುಲ್ (ಉಪನಾಯಕ), ಯಶಸ್ವಿ ಜೈಸ್ವಾಲ್, ರಿಷಭ್ ಪಂತ್ (ವಿಕೆಟ್ ಕೀಪರ್), ಧ್ರುವ್ ಜುರೆಲ್ (ವಿಕೆಟ್ ಕೀಪರ್), ರವೀಂದ್ರ ಜಡೇಜಾ, ಕುಲದೀಪ್ ಯಾದವ್, ಮಾನವ್ ಸುತಾರ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ, ಗುರ್ನೂರ್ ಬ್ರಾರ್, ದೇವದತ್ ಪಡಿಕ್ಕಲ್, ಸರಾಂಶ್ ಜೈನ್, ಅಕಿಬ್ ನಬಿ ಮತ್ತು ಸರ್ಫರಾಜ್ ಖಾನ್.

# ಬ್ಯಾಡ್ಮಿಂಟನ್: ಕೊರಿಯಾ ಮಾಸ್ಟರ್ಸ್‌ನಲ್ಲಿ ಝು–ಚಲಿಹಾ ಮೊದಲ ವಿಶ್ವ ಪ್ರವಾಸ ಪ್ರಶಸ್ತಿ

**ಅಸನ್ (ದಕ್ಷಿಣ ಕೊರಿಯಾ), ಆ.9:** ಭಾನುವಾರ ನಡೆದ 2026 ರ ಬಿಡಬ್ಲ್ಯೂಎಫ್ ಕೊರಿಯಾ ಮಾಸ್ಟರ್ಸ್‌ನಲ್ಲಿ ಝು ಕ್ಸುವಾನ್ಚೆನ್ ತಮ್ಮ ಮೊದಲ ವಿಶ್ವ ಪ್ರವಾಸ ಪ್ರಶಸ್ತಿಯನ್ನು ಗೆದ್ದರು. ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ 22 ವರ್ಷದ ಶಟ್ಲರ್, ಪುರುಷರ ಸಿಂಗಲ್ಸ್ ಫೈನಲ್ನಲ್ಲಿ ಕೊರಿಯಾ ಗಣರಾಜ್ಯದ ಶ್ರೇಯಾಂಕವಿಲ್ಲದ ಆಟಗಾರ ಯೂ ಟೇಬಿನ್ ವಿರುದ್ಧ ನೇರ ಆಟಗಳ ಮೂಲಕ ಗೆದ್ದರು.




ಬ್ಯಾಡ್ಮಿಂಟನ್ ವಿಶ್ವದ 68 ನೇ ಶ್ರೇಯಾಂಕದ ಝು, ಅಸನ್ನಲ್ಲಿ ನಡೆದ ಸೂಪರ್ 300 ಟೂರ್ನಮೆಂಟ್ನಲ್ಲಿ ತಮ್ಮ ಗೆಲುವಿನೊಂದಿಗೆ ತಮ್ಮ ಮೊದಲ ಬಿಡಬ್ಲ್ಯೂಎಫ್ ವಿಶ್ವ ಪ್ರವಾಸ ಪ್ರಶಸ್ತಿಯನ್ನು ಪಡೆದರು.

**ಮಹಿಳಾ ಸಿಂಗಲ್ಸ್ : ಅಶ್ಮಿತಾ ಚಲಿಹಾಗೆ ಮೊದಲ ಗೆಲುವು:** ಮಹಿಳಾ ಸಿಂಗಲ್ಸ್ ಪಂದ್ಯಾವಳಿಯನ್ನು ಭಾರತದ ಅಶ್ಮಿತಾ ಚಲಿಹಾ ಗೆದ್ದರು, ಅವರು ತಮ್ಮ ವೃತ್ತಿಜೀವನದ ಮೊದಲ ಪ್ರವಾಸ ಪ್ರಶಸ್ತಿಗಾಗಿ ಹಿಂದೆ ಬಂದಿದ್ದರು. ಚಲಿಹಾ ಚೀನಾದ ನಾಲ್ಕನೇ ಶ್ರೇಯಾಂಕದ ಹಾನ್ ಕ್ವಿಯಾನ್ಸಿ ಅವರನ್ನು 14–21, 21–14, 21–14 ಅಂತರದಲ್ಲಿ ಸೋಲಿಸುವ ಮೂಲಕ ಉತ್ಸಾಹಭರಿತ ಪುನರಾಗಮನದೊಂದಿಗೆ ಸೋಲಿಸಿದರು. ಚಲಿಹಾ ಎರಡು ಬಾರಿ ದಕ್ಷಿಣ ಏಷ್ಯಾ ಕ್ರೀಡಾಕೂಟದ ಚಾಂಪಿಯನ್ ಆಗಿದ್ದು, ಕೊರಿಯಾ ಮಾಸ್ಟರ್ಸ್ ಟ್ರೋಫಿಯನ್ನು ತಮ್ಮ ವೃತ್ತಿಜೀವನದ ಸಾಧನೆಗೆ ಸೇರಿಸಿಕೊಂಡಿದ್ದಾರೆ. ಪ್ರಶಸ್ತಿಯನ್ನು ಗೆಲ್ಲುವ ಹಾದಿಯಲ್ಲಿ ಅವರು ಅಗ್ರ ಶ್ರೇಯಾಂಕಿತ ಅಕೇಚಿ ಹಿನಾ ಅವರನ್ನು ಸೋಲಿಸಿದ್ದಾರೆ.